# ಕರ್ನಾಟಕ ವಿಕಾಸ

ಡಿಸೆಂಬರ್ 2011






M.G.I.R.E.D

ನವೀಕರಿಸಬಹುದಾದ
ಇಂಧನಗಳಿಗೆ ಸರ್ಕಾರದ ಆದ್ಯತೆ

# ನವೀಕರಿಸಬಹುದಾದ ಇಂಧನದ ಕಿರು ಯೋಜನೆಯ ಕುರಿತು ಐಆರ್‌ಇಪಿ ಯೋಜನಾ ಅಭಿಯಂತರರುಗಳಿಗೆ ತರಬೇತಿ ಕಾರ್ಯಕ್ರಮ


ದಿನಾಂಕ: 16.11.2011 ಮತ್ತು 17.11.2011



ತರಬೇತಿಯಲ್ಲಿ ಭಾಗವಹಿಸಿರುವ ಸಮಗ್ರ ಗ್ರಾಮೀಣ ಇಂಧನ
ಕಾರ್ಯಕ್ರಮದ ಯೋಜನಾ ಅಭಿಯಂತರರು



ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು





ಪ್ರಕಾಶಕರು

**ಪಿ. ಕುಮಾರ್**

ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು

**ಎಂ.ಕೆ. ಮುರಗೋಡ್**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್. ಮಂಜುನಾಥ**

**ನಾಗರಾಜ್. ಬಿ. ವಾಗಾ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**

# ಕರ್ನಾಟಕ ವಿಕಾಸ


**ಡಿಸೆಂಬರ್ 2011**

**ಸಂಪುಟ : 53** **ಸಂಚಿಕೆ : 1**


## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ. ಅಮಿತಾ ಪ್ರಸಾದ್ |
| 7 | ಬದುಕುವ ಮಾತು | – ಡಾ. ಪಾಟೀಲ ಪುಟ್ಟಪ್ಪ |
| 8 | ಕಾವ್ಯ ವಿಕಾಸ | – ಎನ್.ಎಸ್. ಚೌಗುಲಾ |
| 9 | ಮುಖಪುಟ ವರದಿ | |
| 27 | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 30 | ಆರೋಗ್ಯ | – ಡಾ. ಟಿ.ಎ. ಈಶ್ವರಯ್ಯ |
| 33 | ಲೇಖನ | – ಅನುರಾಧ ಎಸ್. |
| 36 | ನುಡಿ ನಿರ್ಮಲ | |
| 40 | ಸುತ್ತೋಲೆಗಳು | |



**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:karnatakavikasa@ymail.com

ಪತ್ರಿಕೆ ಕುರಿತು ನಿಮ್ಮ ನುಡಿ

ಮಾನ್ಯರೇ,

ಕನ್ನಡ ರಾಜ್ಯೋತ್ಸವ ಶುಭಾಶಯಗಳೊಂದಿಗೆ ಹೊರಬಂದಿರುವ ನವೆಂಬರ್–2011ರ ಸಂಚಿಕೆ ಮುಖಪುಟ ಸುಂದರವಾಗಿ ತುಂಬಾ ಸೊಗಸಾಗಿ ಮುದ್ರಣಗೊಂಡಿದೆ ಮತ್ತು ಮುಖಪುಟ ವರದಿಯೂ ಸಹ ಪೂರಕವಾಗಿ ಮುದ್ರಣಗೊಂಡಿದೆ. ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಲೇಖನಗಳು ಮಹತ್ವದ್ದಾಗಿದ್ದು, ಉಪಯುಕ್ತವಾಗಿವೆ. ಇಂಥಹ ಸಂಚಿಕೆಯನ್ನು ಹೊರತಂದಿರುವ ಇಲಾಖೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

– **ಎಸ್.ಬಿ. ಮೋಟಳ್ಳಿ,** ಕೃಷ್ಣ ಕುಂಜ, ಶ್ರೀ ಪೂರ್ಣ ರೆಸಿಡೆನ್ಸಿ, 3ನೇ ಅಡ್ಡರಸ್ತೆ, ಗೌಳಿಗಲ್ಲಿ, ಧಾರವಾಡ–580 007.

ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆ ಅನುಷ್ಠಾನ, ಪಂಚಾಯತ್ ಪದಾಧಿಕಾರಿಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು, ಪಿ. ಶಿವಶಂಕರ್ ಇವರ ಲೇಖನ ಮತ್ತು ಡಾ|| ವಿಜಯ ಪ್ರಕಾಶ ಇವರ ಬದಲಾವಣೆಯತ್ತ ಪಂಚಾಯತಿಗಳ ಆಡಳಿತ ಲೇಖನಗಳು ನವೆಂಬರ್ ಸಂಚಿಕೆಯು ಅರ್ಥಪೂರ್ಣವಾಗಿವೆ. ಇಂತಹ ಲೇಖನಗಳು ಮುಂದೆಯೂ ಪ್ರಕಟವಾಗಲೆಂದು ಆಶಿಸುತ್ತೇನೆ.

– **ನಾಗಣ್ಣಗೌಡ ಮುದಿಗೌಡರ್,** ವಾಹನ ಚಾಲಕರು, ತಾಲ್ಲೂಕು ಪಂಚಾಯತಿ ಕಛೇರಿ, ತಾ|| ಶಹಾಪೂರ, ಜಿ|| ಯಾದಗಿರಿ.

ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ನುಡಿಮುತ್ತುಗಳು ಜನ ಸಾಮಾನ್ಯರಲ್ಲಿ ಭರವಸೆ ಮೂಡಿಸುವುದರಲ್ಲಿ ಸಂಹೇಹವಿಲ್ಲ. ನವೆಂಬರ್ ಲೇಖನದಲ್ಲಿ ಸಚಿವರು ನೀಡಿರುವ ಸಲಹೆಯ ಮೇರೆಗೆ ಅಧಿಕಾರಿಗಳು ಕಾರ್ಯತಪ್ಪರರಾದಲ್ಲಿ ಇಲಾಖೆಯು ಪ್ರಗತಿ ಪಥದತ್ತ ಹೆಜ್ಜೆ ಹಾಕುವುದರಲ್ಲಿ ಲವಲೇಶ ಸಂದೇಹವಿಲ್ಲ. ಸಚಿವರ ಈ ನುಡಿಮುತ್ತುಗಳಿಗೆ ಧನ್ಯವಾದಗಳು.

– **ಚಂದ್ರಕಾಂತ ಬಿ.ವಿ.,** C/o. ಎ.ವಿ. ಕುಲಕರ್ಣಿ 2ನೇ ಮುಖ್ಯರಸ್ತೆ, ಪೋಸ್ಟ್ ಕಾಲೋನಿ, ಹುನ್ನೂರು, ಜಮಖಂಡಿ ತಾ||, ಬಾಗಲಕೋಟೆ ಜಿಲ್ಲೆ.

ನವೆಂಬರ್ ಸಂಚಿಕೆಯ 'ಸಚಿವಾಲಯದಿಂದ ಸಂದೇಶ'ದಲ್ಲಿ ಪ್ರಧಾನ ಕಾರ್ಯದರ್ಶಿಗಳವರ ಸಂದೇಶ ಅವರಿಗೆ ಗ್ರಾಮೀಣ ಜನಪರ ಕಾಳಜಿ ಮತ್ತು ಆ ನಿಟ್ಟಿನಲ್ಲಿ ಅವರು ಕೈಗೊಂಡಿರುವ ಕ್ರಮಗಳು ಶ್ಲ್ಯಾಘನೀಯ. ಅವರು ಮುಂದೆಯೂ ಸಹ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇಲಾಖೆಯನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವ ಬಗ್ಗೆ ಜನರಿಗೆ ಭರವಸೆ ಇದೆ.

– **ಚಂದ್ರಶೇಖರಾಚಾರಿ,** ಸಹಾಯಕ ನಿರ್ದೇಶಕರ ಕಛೇರಿ (ರೇಷ್ಮೆ), ಆನೇಕಲ್, ಬೆಂ. ಗ್ರಾ. ಜಿಲ್ಲೆ.

ನವೆಂಬರ್–2011ರ ಸಂಚಿಕೆಯಲ್ಲಿ 'ಕಾವ್ಯ ವಿಕಾಸ' ಅಂಕಣದಲ್ಲಿ ಪ್ರಕಟವಾದ ಕುವೆಂಪು ಹಾಗೂ ಡಾ|| ಜಿ.ಎಸ್. ಶಿವರುದ್ರಪ್ಪ ಇವರುಗಳ ಕವನಗಳು ಸಂಚಿಕೆಗೆ ಮೆರಗನ್ನು ತಂದುಕೊಟ್ಟಿದೆ. ಮುಂದೆಯೂ ಸಹ ಇಂತಹ ಉತ್ತಮ ಕವನಗಳನ್ನು ಪ್ರಕಟಿಸಲು ವಿನಂತಿಸುತ್ತಾ ಪತ್ರಿಕೆಯ ಸಂಪಾದಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

– **ಶಿರೀನ್ ಅನ್ವರ್,** ವಿಸ್ತರಣಾಧಿಕಾರಿಗಳು, ಆನೇಕಲ್ ರಸ್ತೆ, ಅತ್ತಿಬೆಲೆ, ಬೆಂಗಳೂರು ಗ್ರಾ. ಜಿಲ್ಲೆ.

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಡಾ|| ಶಾಲಿನಿ ರಜನೀಶ್‌ರವರ ಲೇಖನ 'ನಾವು ಸರ್ಕಾರಿ ಅಧಿಕಾರಿಗಳಲ್ಲ ಜನಸೇವಕರು' ಲೇಖನವು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಅದಲ್ಲದೆ ಅವರಿಗಿರುವ ಜನಪರ ಕಾಳಜಿ ಇಲಾಖೆಯನ್ನು ಅಭಿವೃದ್ಧಿಪಡಿಸುವ ಅವರ ಅಭಿಲಾಷೆ ಮಹತ್ವದ್ದಾಗಿದೆ. ಇಂತಹ ಲೇಖನಕ್ಕಾಗಿ ಅವರಿಗೆ ಧನ್ಯವಾದಗಳು.

– **ಆದಪ್ಪ ಬಿ. ಡೋಣೂರ್,** ಲಕ್ಷ್ಮೀಪೂರ, ಸುರಪೂರ ತಾ||, ಯಾದಗಿರಿ ಜಿಲ್ಲೆ.

ಸಚಿವಾಲಯದಿಂದ ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

# ಗ್ರಾಮಸಭೆಯಲ್ಲಿ ಭಾಗವಹಿಸಿ, ಹಳ್ಳಿಗಳ ಅಭಿವೃದ್ಧಿಗೆ ಸಹಕರಿಸಿ ...

ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಗ್ರಾಮ ಪಂಚಾಯತಿಗಳು ವರ್ಷದಲ್ಲೊಮ್ಮೆ ಮಕ್ಕಳ ವಿಶೇಷ ಗ್ರಾಮಸಭೆಗಳನ್ನು ನಡೆಸಲು 2006ರಲ್ಲೇ ಸುತ್ತೋಲೆಯನ್ನು ಹೊರಡಿಸಿ ಮಕ್ಕಳ ಹಕ್ಕುಗಳ ಬಗ್ಗೆ ಕರ್ನಾಟಕ ಸರ್ಕಾರವು ಗ್ರಾಮೀಣ ಚಿಣ್ಣರ ಏಳ್ಗೆಯತ್ತ ಬದ್ಧತೆಯನ್ನು ತೋರಿದೆ. ಕರ್ನಾಟಕ ಪಂ.ರಾಜ್ ಅಧಿನಿಯಮ 1993ರ ಸೆಕ್ಷನ್ 3(3)ರಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳು ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ವಿಶೇಷವಾಗಿ ಮಕ್ಕಳ ಗ್ರಾಮಸಭೆಯನ್ನು ನೆರವೇರಿಸಿ, ಮಕ್ಕಳ ಅಭಿವೃದ್ಧಿಯ ಕುರಿತು ಆದ್ಯತೆಯಲ್ಲಿ ಚರ್ಚಿಸಬೇಕೆಂದು ಸೂಚಿಸಲಾಗಿದೆ. ಅಲ್ಲದೆ ಪ್ರತೀ ವರ್ಷ ಏರ್ಪಡಿಸುವ ಜಮಾಬಂಧಿಗಳಲ್ಲಿ ಮಕ್ಕಳ ವಿಷಯವಾಗಿ ಆಯಾ ವರ್ಷದಲ್ಲಿ ತೆಗೆದುಕೊಂಡು ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಕಡ್ಡಾಯವಾಗಿ ತಿಳಿಸಬೇಕಾದ ಕರ್ತವ್ಯ ಗ್ರಾಮ ಪಂಚಾಯತ್‌ಗಳದ್ದಾಗಿದೆ.

ಗ್ರಾಮ ಪಂಚಾಯತ್‌ಗಳು ಮಕ್ಕಳ ಹಕ್ಕುಗಳನ್ನ ರಕ್ಷಿಸುವ ಗುರುತರ ಸಂಸ್ಥೆ. ಅಂಗನವಾಡಿ, ಆರೋಗ್ಯ, ಶಿಕ್ಷಣ ಇವೇ ಮೊದಲಾದ ಸೇವೆಗಳ ಜವಾಬ್ದಾರಿಗಳು ಗ್ರಾಮ ಪಂಚಾಯತ್‌ಗಳ ಕರ್ತವ್ಯವೆಂದು ಪಂ.ರಾಜ್ ಅಧಿನಿಯಮ ಸ್ಪಷ್ಟಪಡಿಸಿದೆ. ಮಕ್ಕಳಿಗೆ ವಿಶೇಷವಾದ ಸೌಲಭ್ಯಗಳು, ಅವಕಾಶಗಳು ಹಾಗೂ ಹಕ್ಕುಗಳನ್ನು ಕಲ್ಪಿಸಲು ಪಂಚಾಯತ್ ಮಟ್ಟದಲ್ಲಿ ರಚಿಸಲಾಗಿರುವ ವಿವಿಧ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ನಿಜವಾದ ಅರ್ಥ ಕಲ್ಪಿಸಿದಂತಾಗುತ್ತದೆ.

ಯಾರೂ ಮಕ್ಕಳನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು, ದುಡಿಮೆ, ಜೀತಕ್ಕೆ ಹಚ್ಚುವುದು, ಮಾರಾಟ ಮಾಡುವುದು, ಮಕ್ಕಳ ಶಿಕ್ಷಣವನ್ನು ವಂಚಿಸುವುದನ್ನು ತಡೆಗಟ್ಟಲು ಗ್ರಾಮ ಪಂಚಾಯತ್‌ಗಳು ಸಂಪೂರ್ಣ ಜವಾಬ್ದಾರಿ ಹೊರಬೇಕು. ಮಕ್ಕಳ ಸಮಸ್ಯೆಗಳನ್ನು ಗ್ರಾಮಸಭೆಗಳನ್ನು ನಡೆಸುವುದರ ಮೂಲಕ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಕಂಡುಕೊಂಡು ಸ್ಥಳೀಯವಾಗಿ ಪರಿಹಾರೋಪಾಯಗಳನ್ನು ಕೈಗೊಂಡು ಎಲ್ಲಾ ಗ್ರಾಮ ಪಂಚಾಯತ್‌ಗಳು "ಮಕ್ಕಳ ಸ್ನೇಹಿ" ಗ್ರಾಮ ಪಂಚಾಯತ್‌ಗಳಾಗಲೆಂದು ಆಶಿಸುತ್ತೇನೆ.

## ಗ್ರಾಮಗಳು ಸ್ವಾವಲಂಬಿಗಳಾಗಲಿ....

ಗ್ರಾಮೀಣ ಪ್ರದೇಶಗಳು ಸ್ವಾವಲಂಬನೆಯೊಂದಿಗೆ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದುವಂತಾದಲ್ಲಿ ಅದು ನಿಜಕ್ಕೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಆಶಯದ ಆದರ್ಶ ಪರಿಕಲ್ಪನೆಯ ಗ್ರಾಮ ಸ್ವರಾಜ್ಯಗಳಾಗುತ್ತವೆ. ಮಹಾತ್ಮರ ಪರಿಕಲ್ಪನೆಯ ಗ್ರಾಮಗಳು ಮತ್ತು ನಗರಗಳು ನೈತಿಕ ಪ್ರಗತಿ, ಆರ್ಥಿಕ ಪ್ರಗತಿ, ಪರಿಸರ ಸಮತೋಲನ ಕಾಯ್ದುಕೊಂಡು ಒಟ್ಟಾರೆ ದೇಶದ ಅಭಿವೃದ್ಧಿಯನ್ನು ಹೊಂದುವತ್ತ ಕೇಂದ್ರೀಕೃತವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳನ್ನು ಸ್ವಾವಲಂಬಿಯಾಗಿಸುವ ದಿಶೆಯಲ್ಲಿ ಗ್ರಾಮೀಣ ಇಂಧನ / ನವೀಕರಿಸಬಹುದಾದ ಇಂಧನ ಇತ್ಯಾದಿಗಳ ಅಭಿವೃದ್ಧಿಯತ್ತ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ಹೆಚ್ಚು ಒತ್ತು ನೀಡಲಾಗುತ್ತಿದೆ.

ಇಂದಿಗೂ ನಮ್ಮ ಗ್ರಾಮೀಣ ಪ್ರದೇಶಗಳು ಸಂಪ್ರದಾಯಿಕ ವಿದ್ಯುತ್ ಮೇಲೆ ಅವಲಂಬಿತವಾಗಿ, ಗ್ರಾಮ ಪಂಚಾಯತ್‌ಗಳಿಗೆ ನೀಡುವ ಅನುದಾನದಲ್ಲಿ ಬಹುತೇಕ ಭಾಗ ಬಾಕಿ ವಿದ್ಯುತ್ ಬಿಲ್ ಪಾವತಿ ಮಾಡುವತ್ತಲೇ ಅನಗತ್ಯ ವೆಚ್ಚವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಗ್ರಾಮೀಣ ಜನ ಸಾಮಾನ್ಯರಿಗೆ ಅಸಂಪ್ರದಾಯಿಕ ಇಂಧನ ಮೂಲಗಳಾದ ಸೌರಶಕ್ತಿ, ಜೈವಿಕ ಹಾಗೂ ಇತರೆ ನವೀಕರಿಸಬಹುದಾದ ಉಪಕರಣಗಳ ಉಪಯೋಗ, ಬಳಕೆ ಮತ್ತು ತನ್ಮೂಲಕ ಇಂಧನ ವೆಚ್ಚ ತಗ್ಗಿಸುವ ಬಗ್ಗೆ ಮಾಹಿತಿ, ತಿಳುವಳಿಕೆ ಅಲ್ಲದೆ ಮನವರಿಕೆ ಮಾಡುವ ಗುರುತರ ಜವಾಬ್ದಾರಿಯನ್ನು ನಮ್ಮ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಮೊದಲು ಮನದಟ್ಟು ಮಾಡಿಕೊಳ್ಳಬೇಕು.

ಗ್ರಾಮೀಣ ಪ್ರದೇಶಗಳ ಜನರು ಅಸಂಪ್ರದಾಯಿಕ ಇಂಧನ ಉಪಕರಣಗಳ ಬಳಕೆಯಲ್ಲಿ ಹಿಂದಿರುವುದಕ್ಕೆ ಮಾಹಿತಿಯ ಕೊರತೆ ಒಂದು ಕಡೆಯಾದರೆ, ಉಪಕರಣ ತಯಾರಕರು ಬಹುತೇಕ ನಗರ ಪ್ರದೇಶಗಳಲ್ಲಿದ್ದು ಉಪಕರಣಗಳನ್ನು ಪೂರೈಸಿದ ನಂತರ ದುರಸ್ಥಿ ಹಾಗೂ ನಿರ್ವಹಣೆಯಲ್ಲಿ ಆಸಕ್ತಿ ತೋರದಿರುವುದು ಗ್ರಾಮೀಣ ಜನರು ಇಂತಹ ಉಪಕರಣಗಳ ಬಗ್ಗೆ ಅಸಡ್ಡೆ ತೋರಲು ಮೂಲ ಕಾರಣವಾಗಿದೆ.

## ಮಾನವ ಸಂಪನ್ಮೂಲದ ಸದ್ಬಳಕೆ

ಗ್ರಾಮೀಣ ಪ್ರದೇಶದ ಸ್ಥಳೀಯ ಉತ್ಸಾಹಿ ಮತ್ತು ಕನಿಷ್ಠ ವಿದ್ಯಾರ್ಹತೆ ಹೊಂದಿರುವ ಯುವ ಸಮುದಾಯವನ್ನು ಗುರುತಿಸಿ ಅವರಿಗೆ ಸೋಲಾರ್, ಜೈವಿಕ ಇಂಧನ, ಜೈವಿಕ ಅನಿಲ, ಪವನ ಶಕ್ತಿ ಆಧಾರಿತ ಉಪಕರಣಗಳ ಬಗ್ಗೆ ಮಾಹಿತಿ ಹಾಗೂ ದುರಸ್ಥಿ/ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿಯನ್ನು ನೀಡುವತ್ತ ಇಲಾಖೆಯು ಹೆಜ್ಜೆ ಇಟ್ಟಿದೆ. ಮುಂದುವರೆದು ಪ್ರತಿ ಗ್ರಾಮದಲ್ಲೂ ನವೀಕರಿಸಬಹುದಾದ ಇಂಧನ/ಉಪಕರಣಗಳ ಬಗ್ಗೆ ಕಿರು ಯೋಜನೆಯನ್ನು ಪಂ.ರಾಜ್ ಸಂಸ್ಥೆಗಳ ಮೂಲಕ ಹಮ್ಮಿಕೊಂಡು, ಸ್ಥಳೀಯ ಜನತೆಗೆ ಸ್ಥಳೀಯವಾಗಿ ದುರಸ್ಥಿ/ನಿರ್ವಹಣೆಯನ್ನು ಕಲ್ಪಿಸುವುದರತ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಇದಕ್ಕಾಗಿ ಇಲಾಖೆಯ ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರಿಗೆ ಪ್ರಥಮ ಹಂತದ ತರಬೇತಿಯನ್ನು ನೀಡಲು ಉದ್ದೇಶಿಸಿದ್ದು ಸಂಬಂಧಿಸಿದ ವಿಷಯ ತಜ್ಞರಿಂದ ಹಾಗೂ ಉಪಕರಣಗಳ ತಯಾರಕರುಗಳಿಂದ ಅಭಿಯಂತರರಿಗೆ ಸಮಗ್ರ ಮಾಹಿತಿಯನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ. ತರಬೇತಿ ಹೊಂದಿದ ಅಭಿಯಂತರರು ಆಸಕ್ತ ಗ್ರಾಮೀಣ ಯುವ ಸಮುದಾಯವನ್ನು ಈ ನಿಟ್ಟಿನಲ್ಲಿ ಸಜ್ಜುಗೊಳಿಸಿ, ಗ್ರಾಮೀಣ ಜನರು ಅಸಂಪ್ರದಾಯಿಕ ಇಂಧನ/ಉಪಕರಣಗಳ ಬಳಕೆಯನ್ನು ಹೆಚ್ಚು ಬಳಸುವತ್ತ ಪ್ರೇರೇಪಿಸಿ ಜನಪ್ರಿಯಗೊಳಿಸುವಿರೆಂಬ ಆಶಯ ನನ್ನದು.

(ಡಾ. ಅಮಿತಾ ಪ್ರಸಾದ್)

ಬದುಕುವ ಮಾತು

# ಒಳ್ಳೆಯದನ್ನು ಮಾಡುವುದೇ ನಿಜವಾದ ಮನುಷ್ಯ ಧರ್ಮ



ಡಾ. ಪಾಟೀಲ ಪುಟ್ಟಪ್ಪ

ಒಳ್ಳೆಯದನ್ನು ಮಾಡುವ ಮನುಷ್ಯ ಎಲ್ಲಿರುವನೋ, ಸ್ವರ್ಗ ಎನ್ನುವುದು ಅಲ್ಲಿಯೇ ಇರುತ್ತದೆ. ಒಳ್ಳೆಯದನ್ನು ಮಾಡುವುದೇ ತನ್ನ ಧರ್ಮವೆಂದು ಅವನು ತಿಳಿಯಬೇಕು.

ಮನುಷ್ಯನು ಒಳ್ಳೆಯವನಾಗಿರಬೇಕು. ಒಳ್ಳೆಯದನ್ನು ಮಾಡಬೇಕು. ಒಳ್ಳೆಯದನ್ನು ಮಾಡದೇ ಒಳ್ಳೆಯವನಾಗಿರುತ್ತೇನೆಂದರೆ, ಅದಕ್ಕೆ ಏನೊಂದೂ ಅರ್ಥವಿಲ್ಲ.

ಒಳ್ಳೆಯದನ್ನು ಮಾಡುವ ಮನುಷ್ಯನು, ತನ್ನ ಜೀವನದ ಕಡೆಗೆ ಹಿಂದಕ್ಕೆ ಹೊರಳಿ ನೋಡಿದಾಗ, ಅವನಿಗೆ ತೃಪ್ತಿ ಎನಿಸುತ್ತದೆ. ಒಳ್ಳೆಯದನ್ನು ಮಾಡಿದಾಗಲೇ ಅವನು ಆ ತೃಪ್ತಿಯನ್ನು ಕಾಣುವುದು ಸಾಧ್ಯವಿದೆ.

ಈ ಜಗತ್ತಿನಲ್ಲಿ ಒಳ್ಳೆಯದನ್ನು ಮಾಡುವುದಕ್ಕಿಂತಲೂ ಹೆಚ್ಚು ಶ್ರೇಷ್ಠವಾದ ಕೆಲಸ ಇನ್ನೊಂದಿಲ್ಲ. ಒಳ್ಳೆಯದನ್ನು ಮಾಡುತ್ತ ಹೋದರೆ ಮನುಷ್ಯನಿಗೆ ಆಯುಷ್ಯ ವೃದ್ಧಿ ಆಗುತ್ತದೆ.

ಒಬ್ಬ ಮನುಷ್ಯನನ್ನು ಜನರು ಒಳ್ಳೆಯವನೆಂದು ತಿಳಿದುಕೊಂಡಿರುತ್ತಾರೆ. ಅವರು ತಿಳಿದುಕೊಂಡಿರುವುದಕ್ಕಿಂತಲೂ ಅವನು ಹೆಚ್ಚು ಶ್ರೇಷ್ಠನೆನಿಸಬೇಕು.

ಇನ್ನೊಬ್ಬನಿಗೆ ಒಳ್ಳೆಯದನ್ನು ಮಾಡುವ ಮನುಷ್ಯನು ತನಗೇ ಒಳ್ಳೆಯದನ್ನು ಮಾಡಿಕೊಂಡಿರುತ್ತಾನೆ. ಒಳ್ಳೆಯದನ್ನು ಮಾಡುವುದರ ಪ್ರತಿಫಲವು ಒಳ್ಳೆಯದನ್ನು ಮಾಡುವುದರಲ್ಲಿಯೇ ಇದೆ.

ಒಳ್ಳೆಯದನ್ನು ಮಾಡುವ ಮನುಷ್ಯ ಎಲ್ಲಿರುವನೋ, ಸ್ವರ್ಗ ಎನ್ನುವುದು ಅಲ್ಲಿಯೇ ಇರುತ್ತದೆ. ಒಳ್ಳೆಯದನ್ನು ಮಾಡಬೇಕೆನ್ನುವ ಮನುಷ್ಯನು, ಜನರು ತನ್ನ ಹಾದಿಯಲ್ಲಿ ಕಲ್ಲು ಹಾಕುತ್ತಿರುವರೆಂದು ಹೆದರಿ ಹಿಂಜರಿಯಬಾರದು. ಅವರು ಕೆಟ್ಟದನ್ನು ಮಾಡುತ್ತಾರೆಂದು, ಯಾವ ಮನುಷ್ಯನೂ, ಒಳ್ಳೆಯದನ್ನು ಮಾಡುವ ತನ್ನ ಕೆಲಸದಲ್ಲಿ ಹಿಂದಾಗಬಾರದು.

ಜಾನ್ ವೆಸ್ಲೀ ಎಂಬ ಆಧ್ಯಾತ್ಮವಾದಿಯೂ ಹೇಳಿದ ಮಾತು ಪ್ರತಿಯೊಬ್ಬನ ಜೀವನಕ್ಕೆ ಮಾರ್ಗದರ್ಶಕ ಸೂತ್ರದಂತೆ ಇದೆ :

ಮನುಷ್ಯನು ತನಗೆ ಸಾಧ್ಯವಿರುವವರೆಗೆ, ತನ್ನೆಲ್ಲ ಚೈತನ್ಯವನ್ನೂ ತೊಡಗಿಸಿ, ಎಲ್ಲ ಕಾಲಗಳಲ್ಲಿಯೂ, ಎಲ್ಲ ಸ್ಥಳಗಳಲ್ಲಿಯೂ, ಎಲ್ಲ ಬಗೆಯ ಜನರಿಗೂ, ಎಲ್ಲ ವಿಧದಿಂದಲೂ ತನಗೆ ಸಾಧ್ಯವಿರುವ ಎಲ್ಲ ಒಳ್ಳೆಯದನ್ನೂ ಯಾವಾಗಲೂ ಮಾಡುತ್ತ ಹೋಗಬೇಕು.

ಒಳ್ಳೆಯದನ್ನು ಮಾಡುವುದೇ ತನ್ನ ಧರ್ಮವೆಂದು ಅವನು ತಿಳಿಯಬೇಕು.

❑

# ಉದ್ಯೋಗ ಖಾತರಿ ಯೋಜನೆ

– ಎನ್.ಎಸ್. ಚೌಗುಲಾ *

ಗ್ರಾಮೀಣ ಜನತೆಯ ನಿರುದ್ಯೋಗ
ಅವರ ಹೊಟ್ಟೆ ಪಾಡಿನ ಉದ್ವೇಗ,
ಬಿಡಿಸಿತಾಗ ಊರಿನ ಸಹಯೋಗ,
ಚಿಂತಿಸಿತು ಸರಕಾರ ಬಲುಬೇಗ,
ಯಾರೂ ಬಿಡಿದಿರಿ ಊಟ ಈಗ,
ನೀವಿರುವಲಿ ಸಿಗುವುದು ಉದ್ಯೋಗ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ
ಖಾತರಿ ಯೋಜನೆಯಂತ ಸುಯೋಗ,
ಬಡ ಸಿರಿವಂತ ಬೇರಿಲ್ಲದಾಂಗ,
ಸಮಕೂಲಿ ಗಂಡೂ ಹೆಣ್ಣಿಗೀಗ,
ಕುಟುಂಬಕ್ಕೆ ನೂರು ದಿನ ಉದ್ಯೋಗ
ಇದು ಒಂದು ವರುಷಕೆ ಖಾತ್ರಿ ಈಗ.

ಬನ್ನಿ ಗ್ರಾಮ ಪಂಚಾಯತಿಗೀಗ
ನೋಂದಾಯಿಸಿ ಹೆಸರನು ನೀವೀಗ,
ಪಡೆಯಿರಿ ಉದ್ಯೋಗ ಚೀಟಿಯಾಗ,
ಕೂಲಿ ಪ್ರತಿಫಲ ಸರಿದೂಗುಹಾಂಗ
ಸಿಗುವುದು ಎಪ್ಪತ್ತ ನಾಲ್ಕು ಆಗ
ಯೋಜನೆಯ ಯಶ ಹೀಗಿರುವದೀಗ.

* ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ.




# ನವೀಕರಿಸಬಹುದಾದ ಇಂಧನಗಳು

ವೇಗದಿಂದ ಚಲಿಸುವ ಗಾಳಿ ಶಕ್ತಿಯಿಂದ ಟರ್ಬೈನ್‌ನ್ನು ತಿರುಗಿಸಲಾಗುತ್ತಿದೆ. ಈ ಟರ್ಬೈನ್‌ನ್ನು ವಿದ್ಯುತ್ ಉತ್ಪಾದಕ ಯಂತ್ರ ಇಲ್ಲವೇ ಜನರೇಟರಿಗೆ ಜೋಡಿಸಿದ್ದು, ಜನರೇಟರ್ ತಿರುಗಿ ವಿದ್ಯುತ್ ಉತ್ಪಾದನೆ ಯಾಗುತ್ತದೆ.

ನಾವು ಯಾವುದೇ ಕೆಲಸ ಮಾಡಲು ನೀಡುವ ಸಾಮರ್ಥ್ಯಕ್ಕೆ ಶಕ್ತಿ ಎನ್ನುತ್ತೇವೆ. ನಮ್ಮ ನಾಗರೀಕತೆಯ ಪೂರ್ವೇತಿಹಾಸದಿಂದಲೂ ತಿಳಿದು ಬಂದ ವಿಷಯವೇಂದರೆ, ಆಹಾರ ಮನುಷ್ಯನ ಶಕ್ತಿ, ನಾವು ಸೇವಿಸುವ ಆಹಾರವು ಸಸ್ಯಗಳಿಂದ ಇಲ್ಲವೇ ಪ್ರಾಣಿಗಳಿಂದ ಬಂದಿರುತ್ತವೆ. ಸಸ್ಯಗಳು ಸೂರ್ಯನ ಬೆಳಕಿನಿಂದ ಆಹಾರ ಸಿದ್ದಪಡಿಸಿ ಬೆಳೆಯುತ್ತವೆ. ಸೂರ್ಯನ ಬೆಳಕಿನಿಂದ –ಸಸ್ಯ, ಸಸ್ಯಗಳನ್ನು ಪ್ರಾಣಿಗಳು ತಿನ್ನುವುದು ನಂತರ ನಮ್ಮನ್ನು ಬೇರೆ ಕಾಡು ಪ್ರಾಣಿಗಳು ಮುಂತಾದವು ತಿನ್ನುವುದು. ಇವೆಲ್ಲ ಶಕ್ತಿಯ ಮಾರ್ಪಾಡುಗಳು ಇದರಿಂದ ಸಸ್ಯಗಳಿಗಾಗಲೀ, ಪ್ರಾಣಿಗಳಿಗಾಗಲೀ ಹಾಗೂ ಮಾನವರಿಗಾಗಲೀ ಕೆಲಸ ಮಾಡುವ ಸಾಮರ್ಥ್ಯ ಬರುತ್ತದೆ. ಒಟ್ಟಿನ ಮೇಲೆ ಶಕ್ತಿ/ಇಂಧನ ಎಲ್ಲರಿಗೂ ಅತ್ಯವಶ್ಯವಾದುದು ಆದರೆ ದುರಾಸೆ ಸಲ್ಲದು. ಏಕೆಂದರೆ, ಶಕ್ತಿಯ ಬಳಕೆಯ ದುರಾಶೆಯಿಂದ ಜಗತ್ತಿನಲ್ಲಿ ಪ್ರದೂಷಣೆ ಹೆಚ್ಚುತ್ತದೆ ಜತೆಗೆ ಜಾಗತಿಕ ತಾಪಮಾನ ಕೂಡ ಹೆಚ್ಚಿ ಪರಿಸರದ ವಿನಾಶಕ್ಕೆ ಕಾರಣವಾಗುತ್ತದೆ.

ಈಗಿನ ನಾಗರಿಕ ಸಮಾಜದಲ್ಲಿ ಜಗತ್ತಿನಾದ್ಯಂತ ಇಂಧನ (ಸಾಮಾನ್ಯವಾಗಿ ವಿದ್ಯುಚ್ಛಕ್ತಿ) ಎಲ್ಲರಿಗೂ ದೊರೆಯಬೇಕಾದುದು ಅವರ ಹಕ್ಕು ಭಾಧ್ಯತೆಗಳಲ್ಲಿ ಒಂದಾಗಿದೆ. ಈಗಿನ ದಿನಗಳಲ್ಲಿ ವಿದ್ಯುತ್ತಿನ ಅವಶ್ಯಕತೆ ಎಷ್ಟಿದೆ ಎಂದರೆ ತೊಟ್ಟಿಲಿನಿಂದ ಸ್ಮಶಾನದ ವರೆಗೂ ವಿದ್ಯುತ್ತಿನ ಅವಶ್ಯಕತೆ ಇದೆ. ಅಂದರೆ ವಿದ್ಯುತ್ತಿನ ಬೇಡಿಕೆ ದಿನೇ ದಿನೇ ಏರುತ್ತಿದೆ ಆದರೆ ಪೂರೈಕೆ ಆಮಟ್ಟಕ್ಕಿಲ್ಲ. ಹೀಗಾಗಿ ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದೇ ಪ್ರಯಾಸಕರವಾದದ್ದಾಗಿದೆ. ಬೇಡಿಕೆಯನ್ನೀಡೇರಿಸಲು ಪೂರೈಕೆ ಜಾಸ್ತಿ ಮಾಡಬೇಕಾದಲ್ಲಿ ಪಳೆಯುಳಿಕೆ ಇಂಧನಗಳಾದ ಕಲ್ಲಿದ್ದಲು, ಕಚ್ಚಾ ತೈಲ ಮುಂತಾದವುಗಳ ಬಳಕೆ ಹೆಚ್ಚುತ್ತದೆ. ಇದರಿಂದ ಹಸಿರು ಅನಿಲಗಳ ದಟ್ಟತೆ ಹೆಚ್ಚಿ ಜಾಗತಿಕ ತಾಪಮಾನ ಹೆಚ್ಚುತ್ತದೆ. ಅದರಿಂದ ಪರಿಸರ ನಾಶ ಮತ್ತು ಇತರೆ ದುಷ್ಪರಿಣಾಮಗಳು ಹೆಚ್ಚಿ ಜಗತ್ತು ವಿನಾಶದ ಅಂಚಿಗೆ ನೂಕಲ್ಪಡುತ್ತದೆ. ಮೇಲಾಗಿ ಪಳೆಯುಳಿಕೆ ಇಂಧನಗಳ ಸಂಪತ್ತು ಕೂಡ ಪ್ರಪಂಚದಾದ್ಯಂತ ಮುಗಿಯುತ್ತ ಬಂದಿದೆ. ಕಲ್ಲಿದ್ದಲು ಇನ್ನೂ ಕೇವಲ 200 ವರ್ಷ ಲಭ್ಯವಾಗುತ್ತದೆ, ಕಚ್ಚಾತೈಲ ಬರೀ 45 ವರ್ಷಕ್ಕಾಗುತ್ತದೆ. ಅದರಂತೆ ಅನಿಲ ಇನ್ನು ಕೇವಲ 65 ವರ್ಷಗಳಿಗಾಗುತ್ತದೆ. ಅದರ ನಂತರ ಏನು ಹೇಗೆ? ಎಂಬುದು ಇನ್ನೊಂದು ಪ್ರಶ್ನೆ.

ಅಂದರೆ ಪ್ರತಿಯೊಬ್ಬ ಶ್ರೀಸಾಮಾನ್ಯನ ಹಕ್ಕಾದ ಇಂಧನದ ಪಾಲು ಪ್ರತಿಯೊಬ್ಬರಿಗೂ ಸಿಗುವಂತಿರಬೇಕು, ದೇಶದ ಉದ್ದಿಮೆಗಳು ಬೆಳದು ಅಭಿವೃದ್ಧಿಯಾಗಬೇಕು. ಪರಿಸರ ವಿನಾಶವಾಗಬಾರದು, ಇಂಧನದ ಸಂರಕ್ಷಣೆಯಾಗಬೇಕು, ಜಾಗತಿಕ ತಾಪಮಾನವನ್ನು ನಿಯಂತ್ರಿಸಬೇಕು, ನಮ್ಮ ಈ ಭೂಮಿಯನ್ನು ಸಂರಕ್ಷಿಸಬೇಕು ಎಂದರೆ ಇವೆಲ್ಲಕ್ಕೂ ಸಿಗುವ ಒಂದೇ ಉತ್ತರ ನವೀಕರಿಸಬಹುದಾದ ಇಂಧನದ ಬಳಕೆ ಹಾಗೂ ಇಂಧನ ಸಂರಕ್ಷಣೆಯೊಂದೇ ಮಾರ್ಗ.

* ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು.

ನಾವು ಈಗಾಗಲೇ ಜಾಗೃತರಾಗಿ ಸರಿಯಾಗಿ ಹೆಜ್ಜೆ ಇಡದಿದ್ದರೆ ನಾವು ಕತ್ತಲೆಯಲ್ಲೇ ಕಾಲಕಳೆಯುವ ದಿನಗಳು ದೂರವಿಲ್ಲ. ನವೀಕರಿಸಬಹುದಾದ ಇಂಧನಗಳೆಂದರೆ ಹಸಿರು ಇಂಧನಗಳು, ಇವು ನಿರಂತರವಾಗಿ ಪ್ರಪಂಚದಲ್ಲಿ ಸಿಗುವಂತಹವು, ಇವುಗಳಿಂದ ಹಸಿರು ಅನಿಲ ಹೊರಸೂಸುವುದಿಲ್ಲ ಅಂತಯೇ ಪರಿಸರ ಸ್ನೇಹಿ.

## ನವೀಕರಿಸಬಹುದಾದ ಇಂಧನ:

ವ್ಯಾಖ್ಯಾನ : ನಿಸರ್ಗದಲ್ಲಿ ನಿರಂತರವಾಗಿ ದೊರಕುವ ಹಾಗೂ ಸತತವಾಗಿ ಪುನಶ್ಚೇತನಗೊಳ್ಳುವ ಇಂಧನವನ್ನು ನವೀಕರಿಸಬಹುದಾದ ಇಂಧನ ಎನ್ನುತ್ತಾರೆ.

ಉದಾಹರಣೆ : ಸೂರ್ಯ, ಗಾಳಿ, ಜಲವಿದ್ಯುತ್, ಭೂಗರ್ಭ ಶಾಖ, ಜೈವಿಕ ಇಂಧನ ಹಾಗೂ ಸಾಗರದ ಅಲೆಗಳು.

ಈ ರೀತಿಯಿಂದ ಉತ್ಪಾದಿಸಿದ ವಿದ್ಯುತ್ತಿನಿಂದ ವಾತಾವರಣಕ್ಕೆ ಶೂನ್ಯ ಇಂಗಾಲವನ್ನು ಸೇರಿಸಿದಂತಾಗುತ್ತದೆ.

## ನವೀಕರಿಸಬಹುದಾದ ಇಂಧನ–ಹಸಿರು ಇಂಧನ

ನಮ್ಮ ರಾಜ್ಯದಲ್ಲಿಯ ನವೀಕರಿಸಬಹುದಾದ ಇಂಧನದ ಚಿತ್ರಣ

| Sl.No. | Resource | Potential in MW | Allotted Projects in MW |
|---|---|---|---|
| 1. | Wind | 13236 | 9485.15 |
| 2. | Small Hydro | 3000 | 2384.79 |
| 3. | Co-generation | 1500 | 1077.9 |
| 4. | Biomass | 950 | 478.00 |
| | **Total** | **18686** | **13425.84** |

## ನಮ್ಮ ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನಗಳ ಸ್ಥಾಪಿತ ಸಾಮರ್ಥ್ಯದ ಚಿತ್ರಣ.

| Sl.No | Resource | Commissioned in MW As on 31.03.2011 |
|---|---|---|
| 1. | Wind | 1717.685 |
| 2. | Small Hydro | 608.77 |
| 3. | Co-generation | 668.00 |
| 4. | Biomass/Biogas | 87.00 |
| 5. | Solar Energy | 06.00 |
| 6. | Waste to Energy | |
| | **Total** | **3087.455** |

**ನವೀಕರಿಸಬಹುದಾದ ಇಂಧನಗಳ ಅವಶ್ಯಕತೆ :**

- ಹೆಚ್ಚಿದ ಬೇಡಿಕೆಯನ್ನು ಪೂರೈಸುವಲ್ಲಿ ಇದೂ ಒಂದು ಮಾರ್ಗ.
- ಪರಿಸರ ಹಾಗೂ ಅರಣ್ಯ ರಕ್ಷಣೆ.
- ಇಂತಹ ಯೋಜನೆಗಳಿಂದ ಕಾರ್ಬನ್ ಕ್ರೆಡಿಟ್ ಲಭಿಸುತ್ತದೆ.
- ವಿಕೇಂದ್ರೀಕೃತ ವಿದ್ಯುತ್ತಿನ ಲಭ್ಯತೆ.
- ಇಂಧನ ಸಂರಕ್ಷಣೆ
- ವಿದ್ಯುತ್ತಿನ ಜಾಲಗಳ ಲಭ್ಯವಿರದಂತಹ ಬೆಟ್ಟ ಕಾಡುಗಳಲ್ಲೂ ಸಹ ವಿದ್ಯುತ್ತಿನ ಪೂರೈಕೆ.
- ಜಾಗತಿಕ ತಾಪಮಾನವನ್ನು ನಿಯಂತ್ರಿಸಲು ಸಾಧ್ಯ

ನವೀಕರಿಸಬಹುದಾದ ಇಂಧನಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ನಮ್ಮ ದೇಶದಲ್ಲಿ ನವ್ಯ ಮತ್ತು ನವೀಕರಿಸಬಹುದಾದ ಇಂಧನಗಳ ಮಂತ್ರಾಲಯು (ಎಂಎನ್ಆರ್ಇ) ಎಂಬ ಸಂಸ್ಥೆ ಇದೆ. ಅದರಂತೆ ನಮ್ಮ ರಾಜ್ಯಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ನಿಯಮಿತ ಎಂಬ ಸಂಸ್ಥೆ ಇದೆ. ಈ ಸಂಸ್ಥೆಯು ಮಾರ್ಚ 1996ರಲ್ಲಿ ಪ್ರಾರಂಭವಾಗಿದ್ದು ಇದಕ್ಕಿರುವ ಹೊಣೆಗಾರಿಕೆಗಳೆಂದರೆ:

- ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ಹಾಗೂ ಸಂಶೋಧನೆ ಎಂಎನ್ಆರ್ಇ ಮಾರ್ಗದರ್ಶನ ದಲ್ಲಿ
- ಇಂಧನ ಸಂರಕ್ಷಣೆ ಹಾಗೂ ಇಂಧನದ ಲೆಕ್ಕ ಪರಿಶೋಧನೆ ಬ್ಯೂರೊ ಆಫ್ ಎನರ್ಜಿ ಎಫಿಷಿಯೇನ್ಸಿ (ಬಿಇಇ) ಮಾರ್ಗದರ್ಶನದಲ್ಲಿ.
- ಕ್ಲೀನ್ ಡೆವಲಪ್‌ಮೆಂಟ್ ಮೆಕ್ಯಾನಿಸಂಗಾಗಿ ಏಜೆಂಟ ರಂತೆ ಕೆಲಸ.

**ಪವನಶಕ್ತಿ :**

ವೇಗದಿಂದ ಚಲಿಸುವ ಗಾಳಿ ಶಕ್ತಿಯಿಂದ ಟರ್ಬೈನ್‌ನ್ನು ತಿರುಗಿಸಲಾಗುತ್ತಿದೆ. ಈ ಟರ್ಬೈನ್‌ನ್ನು ವಿದ್ಯುತ್ ಉತ್ಪಾದಕ ಯಂತ್ರ ಇಲ್ಲವೇ ಜನರೇಟರಿಗೆ ಜೋಡಿಸಿದ್ದು, ಜನರೇಟರ ತಿರುಗಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಈ ವಿಧದಿಂದ ಬಂದ ಶಕ್ತಿಗೆ ವಿಂಡ್ ಎನರ್ಜಿ ಎನ್ನಲಾಗುತ್ತದೆ. ನಮ್ಮ ದೇಶದಲ್ಲಿ ಪವನಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯದಲ್ಲಿ ರಾಜಸ್ಥಾನದ ನಂತರ ನಮ್ಮ ರಾಜ್ಯಕ್ಕಿದೆ (ಅಂದರೆ ಎರಡನೆಯ ಸ್ಥಾನ) ಹೀಗೆ ವಿದ್ಯುತ್ ಉತ್ಪಾದಿಸುವ ವಿಧಾನದಿಂದ ಪರಿಸರ ಹಾಗೂ ಅರಣ್ಯಕ್ಕಾಗಲಿ ಇಲ್ಲವೇ ಪರ್ಯಾವರಣಕ್ಕಾಗಲೀ ಯಾವುದೇ ತೊಂದರೆ ಅಥವಾ ಧಕ್ಕೆ ಇಲ್ಲ ಅದುದರಿಂದ ನವೀಕರಿಸಬಹುದಾದ ಇಂಧನಗಳ ಪರೀಧಿಯಲ್ಲಿ ಪವನಶಕ್ತಿಯ ಅಭಿವೃದ್ಧಿ ಹಾಗೂ ವ್ಯವಸಾಯಕ್ಕಾಗಿ ಇಡೀ ಪ್ರಪಂಚವೇ ಇಂದು ಕಂಕಣಬದ್ಧವಾಗಿ ನಿಂತಿದೆ.

**ಕಿರು ಜಲವಿದ್ಯುತ್ ಯೋಜನೆಗಳು :**

ಜಲಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದಿಸುವ ಸಂಗಲ್ ಎಲ್ಲರಿಗೂ ಗೊತ್ತಿದ್ದದ್ದೇ. ಇಂತಹ ಜಲವಿದ್ಯುತ್ ಯೋಜನೆಗಳು ನಮ್ಮ ರಾಜ್ಯದಲ್ಲಿ ಶರಾವತಿ, ಸೂಪ, ಆಲಮಟ್ಟಿ ಹಾಗೂ ತುಂಗಭದ್ರ ಮುಂತಾದೆಡೆಯಲ್ಲಿವೆ. ಆದರೆ ಇಂತಹ ಜಲಶಕ್ತಿ ಕೇಂದ್ರಗಳಲ್ಲಿ ವರ್ಷಾನುಗಟ್ಟಲೇ ಬೇಕಾಗುವ ನೀರನ್ನು ಸಂಗ್ರಹಿಸಿ ವಿದ್ಯುತ್ ಉತ್ಪಾದಿಸಲಾಗುತ್ತದೆ. ಹೀಗೆ ಮಾಡುವಲ್ಲಿ ಹಿನ್ನೀರಿನಿಂದ ಎಷ್ಟೋ ಹೆಕ್ಟೇರುಗಳಷ್ಟು ಅರಣ್ಯ ಭೂಮಿ ಕೃಷಿ ಭೂಮಿಯು ಮುಳುಗಡೆಯಾಗಿ ಸ್ಥಳೀಯರು ತಮ್ಮ ವಾಸಸ್ಥಾನಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡುವುದು ಮುಂತಾದ ಪರಿಸರ ವಿರೋಧಿ ಘಟನೆಗಳು ಜರುಗುತ್ತವೆ. ವಿಶಾಲವಾದ ಭೂಮಿ ನಾಶವಾಗಿ ಸಸ್ಯಗಳು ನೀರಿನಲ್ಲಿ ಮುಳುಗಿ ಪರೋಕ್ಷವಾಗಿ ಇಂಗಾಲದ ಶೇಖರಣೆ ಜಾಸ್ತಿಯಾಗಿ ಜಾಗತಿಕ ತಾಪಮಾನ ಹೆಚ್ಚುತ್ತದೆ. ಆದರೆ ಋತುಮಾನದಲ್ಲಷ್ಟೆ ಮಳೆಯಿಂದಾಗಿ ಸಾಮಾನ್ಯ ಹರಿವಿಗಿಂತ ಹೆಚ್ಚಾದ ನದಿ, ಹಳ್ಳ ಕೊಳ್ಳ ಕಾಲುವೆಗಳಲ್ಲಿನ ನೀರನ್ನು ತಡೆಗಟ್ಟಿ ಬಳಸದೇ ಅದರ ಸ್ವಾಭಾವಿಕ ಎತ್ತರವನ್ನೇ ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ವಿಧಾನವೇ ಕಿರುಜಲ ವಿದ್ಯುತ್ ಯೋಜನೆ ನಮ್ಮ ದೇಶದಲ್ಲಿ 25 ಮೆ.ವ್ಯಾ ಸಾಮರ್ಥ್ಯಕ್ಕಿಂತ ಕಡಿಮೆ ಸಾಮರ್ಥ್ಯದ ಜಲ ವಿದ್ಯುತ್ ಯೋಜನೆಗಳಿಗೆ ಕಿರುಜಲವಿದ್ಯುತ್ ಯೋಜನೆಗಳೆಂದು ಹೆಸರು.

| | |
|---|---|
| 0–1 ಕಿ.ವ್ಯಾ | ಪೀಕೋ ಹೈಡ್ರೋ |
| 10–100 ಕಿ.ವ್ಯಾ | ಮೈಕ್ರೋ ಹೈಡ್ರೋ |
| 100–3000 ಕಿ.ವ್ಯಾ | ಮಿನಿ ಹೈಡ್ರೋ |
| 3 ಮೆ.ವ್ಯಾ–25ಮೆ.ವ್ಯಾ | ಕಿರುಜಲ ವಿದ್ಯುತ್ |

ಒಟ್ಟಿನಲ್ಲಿ 0–25 ಮೆ.ವ್ಯಾ ಒಳಗಿನ ಎಲ್ಲ ಜಲವಿದ್ಯುತ್ ಯೋಜನೆಗಳನ್ನು ಕಿರು ಜಲ ವಿದ್ಯುತ್ ಶೀರ್ಷಿಕೆ ಅಡಿಯಲ್ಲಿ ಸೇರಿಸಲಾಗಿದೆ.

**ಕಿರುಜಲ ವಿದ್ಯುತ್ ಯೋಜನೆಗಳ ಅವಶ್ಯಕತೆಗಳು :**

- ಇವು ಪರಿಸರ ಸ್ನೇಹಿ ಯೋಜನೆಗಳು.
- ಇವು ಸ್ಥಳೀಯವಾಗಿರುವುದರಿಂದ ಸ್ಥಳೀಯ ಅಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳ ಅಭಿವೃದ್ಧಿ.
- ವಿಕೇಂದ್ರಿಕೃತ ವಿದ್ಯುತ್ ಜಾಲಕ್ಕೆ ಬಂದು ವಿತರಣಾ ಮತ್ತು ಪ್ರಸರಣಾ ನಷ್ಟಗಳ ನಿಯಂತ್ರಣ.
- ಗ್ರಾಮೀಣ ಅಭಿವೃದ್ಧಿ
- ಇದು ಹಸಿರು ಇಂಧನ
- ರಾಷ್ಟ್ರಕ್ಕೆ ಕಾರ್ಬನ್ ಕ್ರೇಡಿಟ್‌ನ ಲಾಭ
- ಇವು ಋತುಮಾನವನ್ನು ಅವಲಂಭಿತವಾಗಿದ್ದು, ಮಳೆಗಾಲದಲ್ಲಿ ನೀರು ಹೆಚ್ಚಾಗಿರುವಾಗ ಬಳಸಿ ವಿದ್ಯುತ್ ಉತ್ಪಾದಿಸುವುದರಿಂದ ಮುಖ್ಯ ಆಣೆಕಟ್ಟುಗಳಲ್ಲಿನ ನೀರನ್ನು ಸಂರಕ್ಷಿಸಲು ಸಾಧ್ಯ.
- ಪರಿಸರ, ಪರ್ಯಾವರಣ, ಸೃಷ್ಠಿ ಸೊಬಗಿಗೆ ಧಕ್ಕೆ ಉಂಟಾಗುವುದಿಲ್ಲ.

ಈ ಯೋಜನೆಗಳನ್ನು : ಕಾಲುವೆಗಳ, ಹೊಳೆಗಳ ಹಾಗೂ ಹಳ್ಳಗಳಲ್ಲಿರುವ ಸ್ವಾಭಾವಿಕ ಎತ್ತರದ ಲಾಭ ಪಡೆದು ನಿರ್ಮಿಸುತ್ತಾರೆ. ಅಂತಯೇ ಕೆಲವು ಚಿಕ್ಕ, ದೊಡ್ಡ ಆಣೆಕಟ್ಟುಗಳನ್ನು ನೀರಾವರಿಗಾಗಿ ನಿರ್ಮಿಸುತ್ತಾರೆ. ಇಂತಹ ಕಡೆಗಳಲ್ಲಿ ಕೂಡ ಕಿರುಜಲ ವಿದ್ಯುತ್ ಸ್ಥಾಪನೆಗೆ ಆಸ್ಪದವಿದೆ. ಒಟ್ಟಿನಲ್ಲಿ ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿರು ವುದರಿಂದ ಜಾಗತಿಕವಾಗಿ ಇವುಗಳ ಸ್ಥಾಪನೆಗೆ ಆದ್ಯತೆ ಇದೆ. ಅದರಂತೆ ನಮ್ಮ ಕೇಂದ್ರ ಸರ್ಕಾರದ ಅಂಗಸಂಸ್ಥೆಯಾದ ಎಂಎನ್‌ಆರ್‌ಈಯು ಪೀಕೋ ಹೈಡ್ರೋ ಯೋಜನೆಗಳಿಗೆ ಬಹಳ ಪ್ರೋತ್ಸಾಹ ನೀಡುತ್ತದೆ (0–10 ಕಿ.ವ್ಯಾ). ಇಂತಹ ಯೋಜನೆಗಳಿಂದ ಗ್ರಾಮೀಣ ಅಭಿವೃದ್ಧಿ ಸಾಧ್ಯ ಎಷ್ಟೊ ಹೊಲ ಗದ್ದೆಗಳಲ್ಲಿ ಹಳ್ಳ ತೊರೆಗಳು ಹರಿಯುತ್ತಿರುತ್ತವೆ. ಇಂತಹ ಅವಕಾಶ ಬಳಸಿ ವಿದ್ಯುತ್ ಉತ್ಪಾದಿಸಿ ಸ್ಥಳೀಯರಿಗೆ ನೀಡಿದಲ್ಲಿ ಸುಖ ಸಮೃದ್ಧಿ ಗ್ರಾಮಗಳನ್ನು ನೋಡಲು ಸಾಧ್ಯ.

**ಸೌರಶಕ್ತಿ**

ಈ ಭೂಮಿಯಲ್ಲಿಯ ಎಲ್ಲ ಶಕ್ತಿಗಳಿಗೂ ಸೌರಶಕ್ತಿಯೇ ಕಾರಣ ಸೂರ್ಯ ಶಕ್ತಿಯಿಂದಲೇ ಬೆಳಕು, ಗಾಳಿ, ಮಳೆ, ಜೀವನ, ಜೈವಿಕ ಶಕ್ತಿ ಎಲ್ಲ ನಮ್ಮ ದೇಶದ ಭೌಗೋಳಿಕ ಸ್ಥಿತಿ ಹೇಗಿದೆ ಎಂದರೆ ನಮ್ಮ ದೇಶದಲ್ಲಿ ಬೀಳುವ ಸೂರ್ಯನ ಕಿರಣಗಳಿಂದ ಒಂದು ಚದರ ಮೀಟರ ಪ್ರದೇಶದಲ್ಲಿ 4 ರಿಂದ 7 ಯುನಿಟ್ ವಿದ್ಯುತ್ ಶಕ್ತಿಯನ್ನು ಪಡೆಯಬಹುದಾಗಿದೆ.

ಸೌರಶಕ್ತಿಯ ಕೊಯ್ಲಿನಿಂದ ಫೋಟೋವೋಲ್ಟಾಯಿಕ್ ವಿಧಾನದಿಂದ ವಿದ್ಯುತ್‌ನ್ನು ಪಡೆಯಬಹುದು, ಇಲ್ಲವೇ ಉಷ್ಣತಾ ವಿಧಾನದಿಂದ ನೀರು ಕಾಯಿಸಲು ಅಡುಗೆ ಮಾಡಲು ಇಲ್ಲವೇ ನೀರಿನ ಉಗಿ ಉತ್ಪಾದಿಸಲು ಬರುವುದು.

**ಪಿ.ವಿ. ಸಿಸ್ಟಮ್ :**

ಪಿ ಮತ್ತು ಎನ್ ಡೈಯೋಡಗಳ ಜೋಡಣೆಯ ಕೋಶಗಳನ್ನು ಸಾಲಾಗಿ ಹೊಂದಿಸಿ ಪ್ಯಾನೆಲ್ ಮಾಡುವರು. ಈ ಡೈಯೋಡ್ ಮೇಲೆ ಸೂರ್ಯನ ಬೆಳಕು ಬಿದ್ದಾಗ ಅದು ವಿದ್ಯುತ್ತಾಗಿ ಮಾರ್ಪಡುತ್ತದೆ. ಇಂತಹ ವಿದ್ಯುತ್‌ನ್ನು ಚಾರ್ಜ ಮೂಲಕ ಹರಿಸಿ ಬ್ಯಾಟರಿಯಲ್ಲಿ ಶೇಖರಿಸಿ ಬೇಕೆಂದಾಗ ಅದರಿಂದ ಲಾಭ ಪಡೆಯಬಹುದು (ವಿದ್ಯುತ್ ದೀಪ, ವಿದ್ಯುತ್ ಪಂಖ ಹಾಗೂ ಇತರೆ)

**ಸೋಲಾರ್ ಹೀಟರ್ ಮತ್ತು ಕುಕ್ಕರ :**

ಅದರಂತೆ ಸೌರಶಕ್ತಿ ಬಳಸಿ ನೀರನ್ನು ಕಾಯಿಸಲು ಸಾಧ್ಯವಾಗುತ್ತದೆ. ಇದರಿಂದ 100 ಲೀಟರ ಸಾಮರ್ಥ್ಯದ ಉಪಕರಣದಿಂದ ಪ್ರತಿದಿನ 2 ಯುನಿಟ್ ವಿದ್ಯುತ್ ಉಳಿಸಲು ಸಾಧ್ಯ. ಅದರಂತೆ ಸೌರಶಕ್ತಿಯನ್ನು ಬಳಸಿ ಅಡುಗೆ ಮಾಡಬಹುದು, ನೀರಿನ ಉಗಿ ಸಿದ್ಧಪಡಿಸಿ ವಿವಿಧ ವಿಧಾನಗಳಿಗೆ ಬಳಸಬಹುದು (ಹೇಗೆ ಯಂತ್ರಗಳಿಗೆ ರೇಶ್ಮೆ ಕಕೂನ್ ಬಿಡಿಸಲು ಇತ್ಯಾದಿ)

**ಸೌರ ಶಕ್ತಿಯಿಂದ ಉತ್ಪಾದಿಸುವ ವಿದ್ಯುತ್ ದೀಪಗಳಲ್ಲಿ**

- ಸೋಲಾರ್ ಲ್ಯಾಂಟರ್ನ್
- ಸೋಲಾರ್ ಹೋಮ್‌ಲೈಟಿಂಗ್ ಸಿಸ್ಟಮ್
- ಸೋಲಾರ್ ಸ್ಟ್ರೀಟ್‌ಲೈಟ್.

ಇಂತಹ ಉಪಕರಣಗಳನ್ನು ಬಳಸಿ ವಿದ್ಯುತ್ತಿನ ಸಂಪರ್ಕವೇ ಸಾಧ್ಯವಾಗದ ಹಳ್ಳಿ, ತಾಂಡಾಗಳಲ್ಲಿ, ಮನೆಗಳಲ್ಲಿ, ಪ್ರಕಾಶವನ್ನು ತರಬಹುದು. ಮಕ್ಕಳಿಗೆ ಪೋಲಿಯೋ ಕಾಯ್ದಿಡಲು ಸೋಲಾರ್ ಶಕ್ತಿ ಬಳಸಬಹುದು. ದೂರದ ಟೆಲಿಫೋನ್‌ವಿನಿಮಯ ಕೇಂದ್ರ, ಮಹಿತಿ ಕೇಂದ್ರ ಎಲ್ಲೆಂದರಲ್ಲಿ ಸೌರಶಕ್ತಿ ಬಳಸಿ ಹಳ್ಳಿಗರ ಮೊಗದ ಮೇಲೆ ಖುಷಿನಗೆಯನ್ನು ಮೂಡಿಸಬಹುದು. ಅಲ್ಲದೇ ಸೋಲಾರ್ ಡ್ರೈಯರ್, ಸೋಲಾರ್ ಡಿಸ್ಟಿಲ್ಡ್ ನೀರನ್ನು ಉತ್ಪಾದಿಸುವ ಉಪಕರಣ, ಸೋಲಾರ್ ನೀರೆತ್ತುವ ಪಂಪುಗಳು, ಸೋಲಾರ್ ಗಾರ್ಡನ್ ಲೈಟುಗಳು ಇನ್ನೂ ಎಷ್ಟೋ ಉಪಯೋಗಿ ಉಪಕರಣಗಳನ್ನು ಬಳಸಿದಲ್ಲಿ ಸಾಂಪ್ರದಾಯಿಕ ಇಂಧನಗಳಾದ ಪಳೆಯುಳಿಕೆ ಇಂಧನದ ಅವಲಂಬನೆ ಕಡಿಮೆಯಾದೀತು, ಗ್ರಾಮೀಣ ಅಭಿವೃದ್ಧಿಯಾದೀತು, ಪರಿಸರ ಸಂರಕ್ಷಣೆ ಯಾದೀತು. ಆದುದರಿಂದ ಗ್ರಾಮಪಂಚಾಯತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಾಗ ಇಂತಹ ಉಪಕರಣಗಳನ್ನು ಗಮನದಲ್ಲಿಡುವುದು ಸೂಕ್ತ. ಇದಲ್ಲದೇ ಸೋಲಾರ್ ಚಿಮಣಿ ಸ್ಟರ್ಲಿಂಗ್ ಇಂಜಿನ್ ಎಂಬ ಇನ್ನೂ ಬೇರೆ ಬೇರೆ ವಿಧಾನಗಳಿಂದ ಸೌರಶಕ್ತಿಯ ಲಾಭ ಪಡೆಯುವ ಉಪಕರಣಗಳೂ ಇವೆ.

ಸೌರಶಕ್ತಿ ಬಳಸಿ ಲೈಟ್ ಪಡೆಯುವ, ನೀರನ್ನು ಕಾಯಿಸುವ ಉಪಕರಣ ಇವುಗಳನ್ನು ಅಳವಡಿಸಿಕೊಂಡಲ್ಲಿ ಕೆಲ ಒಂದಕ್ಕೆ ಅನುದಾನ ಇನ್ನು ಕೆಲವಕ್ಕೇ ವಿದ್ಯುತ್ ಬಿಲ್ಲಿನಲ್ಲಿ ರಿಬೇಟ್‌ಗಳನ್ನು ಸರ್ಕಾರ ನೀಡುತ್ತದೆ. ಇವುಗಳಿಗಾಗಿ KREDL ನ್ನು ಸಂಪರ್ಕಿಸಬಹುದು ಅಲ್ಲದೇ ಪ್ರತಿ ಜಿಲ್ಲೆಯಲ್ಲಿರುವ ಆದಿತ್ಯ ಸೋಲಾರ್ ಶಾಪ್‌ಗಳನ್ನು ಸಂಪರ್ಕಿಸಿ ವಿಚಾರಿಸಬಹುದು.

## ಜೈವಿಕ ಇಂಧನ

ಭೂಮಿಯ ಮೇಲಿನ ಯಾವುದೇ ಜೀವ ಶಕ್ತಿಯನ್ನಾಧರಿಸಿ ಸಿದ್ಧಪಡಿಸಿದ ಇಂಧನಕ್ಕೆ ಜೈವಿಕ ಇಂಧನ ಎನ್ನಬಹುದು. ಯಾಕೆಂದರೆ ಸಸ್ಯಗಳು ಸೂರ್ಯನ ಶಕ್ತಿಯಿಂದ ಆಹಾರ ಸಿದ್ಧಪಡಿಸಿ ಅಭಿವೃದ್ಧಿಯಾಗುತ್ತವೆ. ಇಂತಹ ಸಸ್ಯ ಶಕ್ತಿಯ ಅಥವಾ ಜೀವಶಕ್ತಿಯ ಆಧಾರದ ಮೇಲೆ ಉತ್ಪಾದಿಸುವ ಶಕ್ತಿಗೆ Biomas Energy (ಜೈವಿಕ ಇಂಧನ) ಎನ್ನುತ್ತಾರೆ.

ಈ ಜೈವಿಕ ಇಂಧನವನ್ನು ಈ ಕೆಳಗಿನ ವಿವಿಧ ವಿಧಾನಗಳಿಂದ ಪಡೆಯಬಹುದು.

1. ಉಷ್ಣತೆಯ ವಿಧಾನ
2. ಪಾಚಕ ವಿಧಾನ
3. ಗ್ಯಾಸಿ ಫೈಯರ್ ವಿಧಾನ
4. ಬಯೋ ಡಿಸೆಲ್ ಅಥವಾ ಜೈವಿಕ ಡಿಸೆಲ್ ವಿಧಾನ
5. ಬಯೋಗ್ಯಾಸ್

### 1) ಉಷ್ಣತೆಯ ವಿಧಾನ :-

ಇದರಲ್ಲಿ ಯಾವುದೇ ನಿರುಪಯೋಗಿ ಮರ, ಅಥವಾ ಅದರ ಕಾಂಡ, ರೆಂಬೆ, ಸೊಪ್ಪು, ಗರಿ, ತೆನೆ, ಕಡ್ಡಿಗಳು ಹೊಟ್ಟು ಮತ್ತು ತೌಡುಗಳನ್ನು ಬಳಸಿ ಸಾಮಾನ್ಯವಾದ ಉಷ್ಣ ಪದ್ಧತಿಯಂತೆ ಇವುಗಳನ್ನು ಸುಟ್ಟು ನೀರನ್ನು ಉಗಿಯಾಗಿ ಪರಿವರ್ತಿಸಿ, ಅದರಿಂದ ಜನರೇಟ್ ನಡೆಸಿ ವಿದ್ಯುತ್ ಉತ್ಪಾದಿಸಬಹುದು. ಇಲ್ಲಿ ಇಂತಹ ಜೈವಿಕ ತ್ಯಾಜ್ಯ ಭಾಗಗಳನ್ನು ಸುರಿದಲ್ಲಿ ವಾತಾವರಣಕ್ಕೇ ಇಂಗಾಲದ ಹೆಚ್ಚುವಿಕೆ ಆಗಲು ಸಾಧ್ಯವಿಲ್ಲ ಏಕೆಂದರೆ ಸಸ್ಯಗಳು ತಮ್ಮ ಜೀವಿತಾವಧಿಯಲ್ಲಿ ವಾತಾವರಣದಲ್ಲಿಯ ಇಂಗಾಲವನ್ನು ಸೇವಿಸಿ ನಮಗೆ ಆಮ್ಲಜನಕ ನೀಡುತ್ತವೆ. ಆದುದರಿಂದ ಬಟ್ಟೆ ಮೇಲೆ ಶೊನ್ಯ ಇಂಗಾಲವನ್ನು ಪೇರಿಸಿದಂತೆ. ಆದರೆ ಕಲ್ಲಿದ್ದಲು ಅಥವಾ ಯಾವುದೇ ಪಳೆಯುಳಿಕೆ ಇಂಧನ ಬಳಸಿದಾಗ ವಾತವರಣಕ್ಕೆ ರಾಸಾಯನಿಕ ಪ್ರಕ್ರಿಯೆಯಿಂದ ಇಂಗಾಲವನ್ನು ಹೊರಸೂಸುತ್ತವೆ. ಇದಲ್ಲದೇ ಒಂದು ಸಸ್ಯವನ್ನು ಕಡಿದಾಗ ಅದರ ಬದಲಾಗಿ ಇನ್ನೊಂದು ಸಸ್ಯವನ್ನು ನೆಟ್ಟು ಬೆಳೆಸುವುದು ಅಧಿನಿಯಮ. ಇಷ್ಟೇ ಅಲ್ಲ ಕೆಲವು ಕಡೆ ಅಂದರೆ ನಿಷ್ಕ್ರಿಯ ಜಮೀನು, ಹೊಲದ ಬದು ಮುತಾಂದಕಡೆಯಲ್ಲಿ ಬಳ್ಳಾರಿ ಜಾಲಿ, ಹೊಂಗೆ, ಬೇವು ಮುಂತಾದ ಮರಗಳನ್ನು ಬೆಳೆಸಬಹುದಾಗಿದೆ. ಇದಕ್ಕಾಗಿ ಯಾವುದೇ ಬೇಸಾಯ ಮಾಡಬೇಕಿಲ್ಲ, ತೊಂದರೆ ತೆಗೆದು ಕೊಳ್ಳಬೇಕಾಗಿಲ್ಲ. ಆದರೆ ಇದು ನಿರಂತರವಾಗಿ ಸಿಗುವ ಇಂಧನ ಸಂಪನ್ಮೂಲ ಆಯಾ ಪ್ರದೇಶಗಳ ಹವಾಮಾನದಂತೆ ಜೋಳ, ಭತ್ತ, ಕಬ್ಬು, ತೆಂಗು, ಮುಂತಾದ ಬೆಳೆಗಳು ಬೆಳೆಯುತ್ತವೆ. ಅದರಂತೆ ಅಲ್ಲಿ ಜೋಳದ ದಂಟು ತೆನೆ, ಭತ್ತದ ಹೊಟ್ಟು, ಕಬ್ಬಿನಜೆಲ್ಲೆ, ತೆಂಗಿನಗರಿ ಮುಂತಾದವುಗಳು ಪ್ರಮುಖವಾಗಿ ಸಿಗುತ್ತವೆ. ಅದರಂತೆ ಆಯಾ

ಪ್ರದೇಶದ ಅನುಕೂಲಕ್ಕೆ ತಕ್ಕಂತೆ ವಿದ್ಯುತ್ ಸ್ಥಾವರ ಸ್ಥಾಪಿಸಲು ಯೋಜನೆ ರೂಪಿಸಬಹುದು.

**2) ಪಾಚಕ ವಿಧಾನ :–**

ಈ ವಿಧಾನದಲ್ಲಿ, ಸಸ್ಯಗಳ ಉಪಯೋಗವಿಲ್ಲದ ಭಾಗಗಳನ್ನು ದನಗಳ ಸೆಗಣಿ, ಜಾನುವಾರಗಳ ಲದ್ದಿ, ಕಸಕಡ್ಡಿ ಇವೆಲ್ಲವುಗಳನ್ನು ಪಾಚಕ ಎಂಬ ಚೇಂಬರಿನಲ್ಲಿ ಕ್ರೋಢೀಕರಿಸಿ ನೀರಿನೊಟ್ಟಿಗೆ ಬೆರೆಸಿ ಸ್ವಲ್ಪದಿನ ಇಟ್ಟಾಗ ಬ್ಯಾಕ್ಟೀರಿಯಗಳ ಪ್ರಭಾವದಿಂದ ಈ ವಸ್ತುಗಳು ಪಾಚನ ಕ್ರಿಯಿಗೆ ಒಳಪಟ್ಟು ಅಲ್ಲಿ ಗ್ಯಾಸ್/ ಅನಿಲ ಬಿಡುಗಡೆಯಾಗುತ್ತದೆ. ಇಂತಹ ಅನಿಲವನ್ನು ಅಡುಗೆ ಒಲೆಗಾಗಿ, ಪೆಟ್ರೋಮ್ಯಾಕ್ಸ ದೀಪಕ್ಕಾಗಿ ಬಳಸಬಹುದು. ಇಂತಹ ಅನಿಲವನ್ನು ಗಂಧಕ ವಿಂಗಡಿಸುವ ಯೂನಿಟ್‌ನ ಮೂಲಕ ಹಾಯಿಸಿದಾಗ ಆ ಅನಿಲವನ್ನು ಜನರೇಟರ್ ಮುಂತಾದವುಗಳಿಗೆ ಬಳಸಿ ವಿದ್ಯುತ್ ಉತ್ಪಾದಿಸಬಹುದು.

**3) ಗ್ಯಾಸಿ ಫೈಯರ್ ವಿಧಾನ :–**

ಈ ವಿಧಾನದಲ್ಲಿ ಉಷ್ಣತೆ ವಿಧಾನಕ್ಕೆ ಬಳಸುವ ಜೈವಿಕ ತ್ಯಾಜ್ಯವಸ್ತುಗಳನ್ನು ಅಂದರೆ ಮರಗಳ ರೆಂಬೆ, ಕೊಂಬೆ, ಕಾಂಡ, ಸೊಪ್ಪು ಮುಂತಾದವುಗಳನ್ನು ಚಿಕ್ಕ ಚಿಕ್ಕ ತುಂಡುಗಳಾನ್ನಾಗಿ ತುಂಡರಿಸಿ ಗ್ಯಾಸಿಫೈಯರ್ ಎಂಬ ಯಂತ್ರದಲ್ಲಿ ಉರಿಸಿದಾಗ ಅದು Efficient ಆಗಿ ಉರಿದು ಅದರಿಂದ Froducer Gas ಎಂಬ ಅನಿಲ ಅಂದರೆ ಹೆಚ್ಚಾಗಿ ಸಾರಜನಕ (N2), ಜಲಜನಕ ($H_2$), ಮಿಥೇನ್, ಕಾರ್ಬನ್ ಮೋನಾಕ್ಸಾಯ್ಡ ಮುಂತಾದಗಳು ಹೊರಬೀಳುತ್ತವೆ. ಇಂತಹ ಅನಿಲಗಳು ಸ್ವತಃ ಉರಿಯುತ್ತವೆ. ಇವುಗಳನ್ನು ನೇರವಾಗಿ ಯಾವುದೇ ಫರ್ನೀಸ್, ಬಾಯ್ಲರ್ ಮುಂತಾದ ಬೆಂಕಿಯಾಧಾರಿತ ವಿಧಾನಗಳಲ್ಲಿ ಬಳಸಬಹುದು, ಇಲ್ಲವೇ ಇಂತಹ ಅನಿಲವನ್ನು ವಿದ್ಯುತ್ ಜನಕ ನೆಡೆಸಲು ಬಳಸಬಹುದು.

**ಉದಾಹರಣೆ :**

a) 10 ಕಿವ್ಯಾ ಜೈವಿಕ ಆಧಾರಿತ ಗ್ಯಾಸಿ ಫೈಯರ್ ಘಟಕದ ವಿವರ

- ಕ್ಷಮತೆ– 10 kwe
- ಸತತವಾಗಿ ದೊರಕುವ ಶಕ್ತಿ – 8 kwe
- ಒಂದು ದಿನಕ್ಕೆ ಉತ್ಪಾದಿತ ಯೂನಿಟ್‌ಗಳು – 192
- ಜೈವಿಕ ವಸ್ತು (ಉರುವಲು) – 1.4 Kg/ ಯೂನಿಟ್
- ಒಂದು ದಿನಕ್ಕೆ ಬೇಕಾದ (ಉರುವಲು) – 270 Kg / ಪ್ರತಿದಿನ
- ಅಂದಾಜು ವೆಚ್ಚ – 4.5 ರೂ
- ಉತ್ಪಾದನಾ ಖರ್ಚು – 2.60 ರೂ/ ಯೂನಿಟ್.

b) ಜಾನುವಾರುಗಳ ಸಗಣಿಯಿಂದ ವಿದ್ಯುತ್ ಉತ್ಪಾದನೆ

- ನಮ್ಮ ದೇಶದಲ್ಲಿ 22.5 ಕೋಟಿ ಜಾನುವಾರಗಳಿವೆ
- ಇವುಗಳ ಸಗಣಿಯಿಂದ ಹೊರಬರುವ ಮಿಥೇನ್ ಅನಿಲವು ವಿದ್ಯುತ್ ಉತ್ಪಾದನೆಗೆ ಸಹಾಯಕಾರಿ
- ಒಂದು ಅಂದಾಜಿನಂತೆ ನಮ್ಮ ದೇಶಕ್ಕೆ ಬೇಕಾದ ವಿದ್ಯುತ್ ಪೂರೈಕೆಗೆ ಕೇವಲ 20 ಕೋಟಿ ಜಾನುವಾರುಗಳ ಸಗಣಿಯೇ ಸಾಕು
- ಒಂದು ಅಂದಾಜಿನಂತೆ ಕರ್ನಾಟಕದಲ್ಲಿ 1 ಕೋಟಿ ಜಾನುವಾರುಗಳಿವೆ.
- ಒಂದು ಕೆ.ಜಿ. ಸಗಣಿಯಿಂದ ಸುಮಾರು 0.036 ಘನ ಮೀಟರ್ ಜೈವಿಕ ಅನಿಲವನ್ನು ಉತ್ಪಾದಿಸಬಹುದು.
- ನಮ್ಮ ರಾಜ್ಯದಲ್ಲಿ ಈ ಜಾನುವಾರಗಳ ಸಗಣಿಯಿಂದ 300 ಮೆ.ವ್ಯಾ. ವಿದ್ಯುತ್‌ನ್ನು ಉತ್ಪಾದಿಸಬಹುದು.

**4) ಬಯೋಡಿಸಲ್ ಅಥವಾ ಜೈವಿಕ ಡೀಸಲ್:–**

1953 ರಲ್ಲಿ ಜರ್ಮನಿನ ವಿಜ್ಞಾನಿ'ರುಡಾಲ್ಫ ಡೀಸೆಲ್' ಎಂಬಾತನು ಕಡಲೆಕಾಯಿ ಎಣ್ಣೆಯನ್ನು 'ಎಸ್ಟಿರಿಫಿಕೇಶನ್' ಎಂಬ ವಿಧಾನದಿಂದ ಸಂಸ್ಕರಿಸಿ ಸಿದ್ಧಪಡಿಸಿದ ಎಣ್ಣೆಯಿಂದ ಯಂತ್ರವನ್ನು ಓಡಿಸಿ ತೋರಿಸಿದನು ಅಂದಿನಿಂದ ಈ ಯಂತ್ರಕ್ಕೆ ಬಳಸುವ ಎಣ್ಣೆಗೆ ಡೀಸೆಲ್ ಎಂದು ಆ ವಿಜ್ಞಾನಿಯ ಸ್ಮರಣಾರ್ಥ ಹೆಸರಿಸಲಾಯಿತು. ಇಂದಿನ ದಿನಗಳಲ್ಲಿ ಈ ಯಂತ್ರಗಳನ್ನು, ಕೈಗಾರಿಕೆ, ಉದ್ದಿಮೆ, ಸಾರಿಗೆ ಸಂಪರ್ಕ ಎಲ್ಲೆಡೆಯಲ್ಲಿ ಬಳಸುವುದರಿಂದ ಇಂತಹ ಯಂತ್ರಗಳಿಗೆ ಬೇಕಾಗುವ ಎಣ್ಣೆಯನ್ನು ಕಚ್ಚಾ ತೈಲದಿಂದ ಸಂಸ್ಕರಿಸಿ ಸಿದ್ದಪಡಿಸಲಾಗುತ್ತದೆ. ಸಾಮಾನ್ಯವಾಗಿ ಎಲ್ಲರೂ ಇದನ್ನು ಡೀಸೆಲ್ ಎನ್ನುತ್ತಾರೆ, ಆದರೆ ಡೀಸೆಲ್ ಎಂಬ ಹೆಸರು ಕೇವಲ ಕಚ್ಚಾ ತೈಲದಿಂದ ಬರುವ

ಎಣ್ಣೆಗಷ್ಟೇ ಅಲ್ಲ ಇತರ ಯಾವುದೇ ಎಣ್ಣೆಯಿಂದ ಸಿದ್ಧ ಪಡಿಸಿದುದಕ್ಕೆ 'ಡೀಸೆಲ್' ಎನ್ನುತ್ತಾರೆ. ಆದರೆ ಖಾದ್ಯ ತೈಲಗಳಿಂದ ಡೀಸೆಲ್ ಸಿದ್ಧಪಡಿಸಿದಲ್ಲಿ ಜನರಿಗೆ ಖಾದ್ಯ ತೈಲದ ಅಭಾವದ ಸಾಧ್ಯತೆ ಇದೆ. ಆದುದರಿಂದ ಖಾದ್ಯೇತರ ತೈಲಗಳಿಂದಲೇ ಡೀಸೆಲ್ ಸಿದ್ಧ ಪಡಿಸಲಾಗುತ್ತದೆ. ಇಂತಹ ಖಾದ್ಯೇತರ ಬೀಜಗಳೆಂದರೆ ಹಿಪ್ಪೆ, ಬೇವು, ಹೊಂಗೆ, ಜಟ್ರೋಪ್ (ಕಾಡೌಡಲ) ಮುಂತಾದವುಗಳು. ಇವುಗಳಿಗಾಗಿಯೇ ವಿಶೇಷವಾಗಿ ವ್ಯವಸಾಯದ ವ್ಯವಸ್ಥೆ ಬೇಕಿಲ್ಲ ಅಪ್ರಯೋಜಕ ಭೂಮಿ, ಕಾಡು, ಹೊಲದಬದುವು ಮುಂತಾದ ಸ್ಥಳಗಳಲ್ಲಿ ಇಂತಹ ಸಸ್ಯ/ಮರಗಳನ್ನು ನೆಡೆವುದರಿಂದ ಹಸಿರು ಉಸಿರನ್ನು ಹೆಚ್ಚಿಸಿದಂತಾಗುತ್ತದೆ, ಜತೆಗೆ ಇವು ಬೆಳೆದಾಗ ಅವುಗಳ ಬೀಜದ ಲಾಭ ಪಡೆದು, ಜೈವಿಕ ಎಣ್ಣೆ, ಹಿಂಡಿ, ಗೊಬ್ಬರ, ಕ್ರಿಮಿನಾಶಕ ಜತೆಗೆ ಮುಖ್ಯವಾಗಿ ಯಂತ್ರಗಳನ್ನು ನಡೆಸಲುಬೇಕಾದ ಡೀಸೆಲ್ ತಯಾರಿಸಬಹುದು.ಇಂತಹ ಡೀಸೆಲ್‌ನಿಂದ ಹಸಿರು ಅನಿಲಗಳು ಹೊರಸೂಸುವುದಿಲ್ಲ ಹೀಗಾಗಿ ಜಾಗತಿಕ ತಾಪಮಾನದ ನಿಯಂತ್ರಣವಾಗುತ್ತದೆ. ಪರಿಸರ ಸಂರಕ್ಷಣೆಯಾಗುತ್ತದೆ. ಹಾಗೂ ಇಂಧನ ಸಂರಕ್ಷಣೆ ಕೂಡ ಆಗುತ್ತದೆ. ಹೀಗೆ ಮಾಡವುದರಿಂದ ಗ್ರಾಮೀಣ ಅಭಿವೃದ್ಧಿಯಾಗಿ, ಉದ್ಯೋಗಾವಕಾಶ ಹೆಚ್ಚಿ, ಸುಖ, ಶಾಂತಿ, ಸಮೃದ್ಧಿಯಿಂದ ತುಳುಕುವ ದೇಶದ ಗ್ರಾಮಗಳನ್ನು ನೋಡಬಹುದು.

### 5) ಬಯೋಗ್ಯಾಸ್ :–

ಜಾನುವರುಗಳ ಸಗಣಿ, ಲದ್ದಿ, ತ್ಯಾಜ್ಯ, ಜೈವಿಕವಸ್ತುಗಳು, ಅಡುಗೆ ಮನೆಯ ತ್ಯಾಜ್ಯ ಇವೆಲ್ಲವುಗಳನ್ನು ಬಳಸಿ ಪಾಚಕದಲ್ಲಿರಿಸಿದಾಗ ಅದರಿಂದ ಅನಿಲವು ಬಿಡುಗಡೆ ಯಾಗುತ್ತದೆ. ಇಂಧನ ಅನಿಲವನ್ನು ಅಡುಗೆಮಾಡಲು ವಿದ್ಯುತ್ ಉತ್ಪಾದನೆಗೆ ಮುಂತಾದವುಗಳಿಗೆ ಉಪಯೋಗಿಸ ಬಹುದು.

### 6) ಭೂಗರ್ಭ ಶಾಖ:–

ನಾವೆಲ್ಲ ಜೀವಿಸುವ ಈ ಭೂಮಿ ಗರ್ಭದಲ್ಲಿ ಅತ್ಯಂತ ಶಾಖಮಯವಾದ ಕುದಿಯುತ್ತಿರುವ ಲಾವಾ ಮುಂತಾದವು ಗಳಿವೆ. ಸಾಮಾನ್ಯ ಜಮೀನಿನ ಎತ್ತರದಿಂದ ಸುಮಾರು 4 ಮೀಟರ್ ಆಳದಲ್ಲಿ ಹೋದರೆ ಯಾವಾಗಲೂ 27$^0$c ನಷ್ಟು ತಾಪಮಾನವಿದ್ದು ಇದು ಯಾವಾಗಲೂ ಅಷ್ಟೇ ಇರುತ್ತದೆ. ಇಂತಹ ಗುಣ ಧರ್ಮಗಳನ್ನು ಬಳಸಿ ಮನೆಯ ವಾತಾವರಣ ವ್ಯವಸ್ಥೆ ಮಾಡಿಕೊಳ್ಳಬಹುದು. ಮತ್ತು ಭೂಮಿಯ ಮೇಲಿನ ನೀರನ್ನು ಭೂಮಿಯಲ್ಲಿ ಆಳದಲ್ಲಿ ಪೈಪ್ ಮುಖಾಂತರ ಕಳುಹಿಸಿದಾಗ ಅಲ್ಲಿಯ ಅತ್ಯಂತ ಶಾಖದಿಂದ ನೀರು ಕಾಯ್ದು ಹಗುರಾಗಿ ತನ್ನಷ್ಟಕ್ಕೆ ತಾನೇ ಮೇಲೆ ಬರುತ್ತದೆ. ಇಂತಹ ಕಾದ ನೀರನ್ನು ಇನ್ನಷ್ಟು ಅಂದರೆ ಹತ್ತಿಪ್ಪತ್ತು ಡಿಗ್ರಿಯಷ್ಟು ಕಾಯಿಸಿದರೆ ವಿದ್ಯುತ್ ಜನಕ ನಡೆಸಲು ಬೇಕಾದ ನೀರಿನ ಹಬೆ ಸಿದ್ಧವಾಗಿ ಯಾವ ಇಂಧನದ ಸಹಾಯವಿಲ್ಲದೇ ವಿದ್ಯುತ್ ಉತ್ಪಾದಿಸಬಹುದು. ಹೀಗಾಗಿ ಭೂಗರ್ಭಶಾಖದ ಲಾಭ ವಿಸ್ಮಯಕರ.

### 7) ಹೈಬ್ರೀಡ್ ಸಿಸ್ಟಮ್:–

ಹೈಬ್ರಿಡ್ ಸಿಸ್ಟಮ್ ಎಂದರೆ ಎರಡು ಬೇರೆ ಬೇರೆ ವಿಧಾನಗಳನ್ನು ಜೋಡಿಸಿ ಒಂದು ಯೋಜನೆಯನ್ನು ರೂಪಿಸುವುದು. ಸೂರ್ಯನ ಬೆಳಕು ರಾತ್ರಿಯಲ್ಲಿರುವುದಿಲ್ಲ, ಗಾಳಿಯೂ ಯಾವಾಗಲೂ ಇರುವುದಿಲ್ಲ ಆದುದರಿಂದ ಯಾವ ಶಕ್ತಿಯು ಯಾವಾಗೆಲ್ಲ ಇರುವುದೋ ಆ ಸಮಯದಲ್ಲಿ ಅದನ್ನು ಬಳಸಿ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಿ ಬ್ಯಾಟರಿಯಲ್ಲಿ ಕ್ರೊಢಿಕರಿಸಿಟ್ಟು ಬೇಕಾದಾಗಲೆಲ್ಲ ಉಪಯೋಗಿಸುವ ವಿಧಾನಕ್ಕೆ ಹೈಬ್ರಿಡ್ ಸಿಸ್ಟಮ್ ಎನ್ನುತ್ತಾರೆ. ಇವುಗಳಲ್ಲಿ ಸೋಲಾರ್‌ವಿಂಡ್ ಹೈಬ್ರೀಡ್ ಸೋಲಾರ್ ಬಯೋಮಾಸ್ ಹೈಬ್ರೀಡ್‌ಗಳು ಕೊಂಚ ಹೆಸರು ಪಡೆದಿರುವಂತಹವು. ಗ್ರಾಮೀಣ ಪ್ರದೇಶಗಳಲ್ಲಿ ಇವುಗಳ ಪಾತ್ರ ದೊಡ್ಡದು. ಯಾವ್ಯಾವ ಸಂಪನ್ಮೂಲಗಳು ಯಾವ್ಯಾವ ಋತು ಮತ್ತು ಕಾಲಗಳಲ್ಲಿರುತ್ತವೆ. ಅದನ್ನಾಧರಿಸಿ ಇಂತಹ ಯೋಜನೆಗಳನ್ನು ಹಮ್ಮಿಕೊಳ್ಳಬಹುದು. ಇವುಗಳಲ್ಲಿ ಸೋಲಾರ್ ವಿಂಡ್ ಹೈಬ್ರೀಡ್ ಸಿಸ್ಟಮ್ ಬಹಳ ಬಳಕೆಯಲ್ಲಿದೆ. ಇಂತಹ ಸಿಸ್ಟಮ್‌ಗಳನ್ನು ಬಳಸಿ ಗ್ರಾಮೀಣ ಪ್ರದೇಶಗಳಲ್ಲಿ ಬೀದಿ ದೀಪ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಇದಕ್ಕೆ ಸಿಗುವ ಅನುದಾನದ ಲಾಭ ಪಡೆದು ಎಷ್ಟೋ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಬಹುದು. ಮನೆಗಳಿಗೆ ಸ್ವಾವಲಂಬಿತ ವಿದ್ಯುದ್ದೀಕರಣ ಮಾಡಬಹುದು.

ಈ ಎಲ್ಲ ಯೋಜನೆಗಳನ್ನು ಹಮ್ಮಿಕೊಳ್ಳಲು ಬೇಕಾದ ಸಂಪನ್ಮೂಲಗಳು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿಯೇ ಇವೆ. ಈ ಭೂಮಿಯನ್ನು ಜಾಗತಿಕ ತಾಪಮಾನದಿಂದ ರಕ್ಷಿಸಿ ನಮ್ಮ ಮುಂದಿನ ಪೀಳಿಗೆ ಕೂಡ ಸುಖ ಸಂತೋಷದಿಂದ ಇರುವಂತೆ ಮಾಡುವ ಮನಸ್ಸು ಕೂಡ ನಮ್ಮಲ್ಲೇ ಇದೆ. ಬನ್ನಿ ನಾವೆಲ್ಲ ಪಣ ತೊಟ್ಟು ಆದಷ್ಟು ನವೀಕರಿಸಬಹುದಾದ ಇಂಧನವನ್ನು ಪ್ರೋತ್ಸಾಹಿಸೋಣ ಅಭಿವೃದ್ಧಿಪಡಿಸೋಣ ಸಂತೋಷ ಹಾಗೂ ನೆಮ್ಮದಿಯಾಗಿರುವಂತೆ ಮಾಡಿ ನಮ್ಮ ರಾಷ್ಟ್ರಪಿತನ ಕನಸನ್ನು ನನಸಾಗಿಸೋಣ.

## ಜೈವಿಕ ಇಂಧನಗಳು

ಸಮರ್ಪಕ ಇಂಧನ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ಮಾತ್ರ ನಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಅನುಷ್ಠಾನ ಸಾಧ್ಯ. ಸೀಮಿತ ಪ್ರಮಾಣದ ಪಳೆಯುಳಿಕೆ ಇಂಧನಗಳು ಮತ್ತು ಜಾಗತಿಕ ತಾಪಮಾನದ ಮೇಲಿನ ಕಾಳಜಿಯಿಂದಾಗಿ ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳನ್ನು ಹೆಚ್ಚು ಅಭಿವೃದ್ಧಿಗೊಳಿಸುವ ಅಗತ್ಯತೆ ಇದೆ. ಜೈವಿಕ–ಇಂಧನಗಳನ್ನು ಉತ್ಪಾದಿಸಲು ಖಾದ್ಯೇತರ ಬೀಜ ಬಳಸಬಹುದಾಗಿದ್ದು, ಇದು ವಿಶ್ವದಾದ್ಯಂತ ಅಂಗೀಕೃತವಾಗಿದೆ. ಇದರಿಂದಾಗಿ ಪರಿಸರ ಸಂರಕ್ಷಣೆ, ಇಂಧನ ಭದ್ರತೆ, ಆಮದು ನಿರ್ಬಂಧನಗಳು, ಗ್ರಾಮೀಣ ಜನರ ಉದ್ಯೋಗ ಮತ್ತು ಆರ್ಥಿಕ ಸುಧಾರಣೆಯಂತಹ ಸಮಸ್ಯೆಗಳ ನಿವಾರಣೆಗೆ ಇದು ವ್ಯಾಪಕ ಪರಿಹಾರ ಕ್ರಮವಾಗಿದೆ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸಂಸ್ಥೆಯು ಜೈವಿಕ–ಇಂಧನ ಗಿಡ–ಮರಗಳನ್ನು ಬೆಳೆಸುವುದು, ಖಾದ್ಯೇತರ ಬೀಜಗಳ ಸಂಗ್ರಹಣೆ, ಸ್ಥಳೀಯ ಜೈವಿಕ ತೈಲೋತ್ಪಾದನೆ ವಿಷಯಗಳ ಕುರಿತು ಗ್ರಾಮೀಣ ಜನರನ್ನು ಉತ್ತೇಜಿಸಲು ತನ್ನ ಗಮನವನ್ನು ಕೇಂದ್ರೀಕರಿಸಿದೆ. ಅಲ್ಲದೆ, ಜೈವಿಕ–ಇಂಧನದ ಮೇಲೆ ಸಂಶೋಧನಾ ಚಟುವಟಿಕೆಗಳು "ಸ್ವಚ್ಛ–ಹಸಿರು ಇಂಜಿನಿಯರಿಂಗ್" ವಿಷಯದಲ್ಲಿ ಸರಳವಾದ ಸಂಶೋಧನಾ ಪ್ರಯತ್ನ ಮಾಡಲು ಪ್ರಾಜೆಕ್ಟ್–ವರ್ಕ್ಸ್ ತೆಗೆದುಕೊಳ್ಳುವಂತೆ ಇಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು, ಅಲ್ಲದೇ ಇಂತಹ ಚಟುವಟಿಕೆಗಳ ಮೇಲೆ ಸಂಸ್ಥೆಯು ಹೆಚ್ಚು ಗಮನ ನೀಡುತ್ತಿದ್ದು, ಇವೆಲ್ಲದರ ಅಂತಿಮ ಗುರಿ "ಗ್ರಾಮೀಣಾಭಿವೃದ್ಧಿ ಹಾಗೂ ಸ್ವಚ್ಛಪರಿಸರವನ್ನು ನೀಡುವುದಾಗಿದೆ.

## ಜೈವಿಕ–ಇಂಧನ

ಶಾಶ್ವತವಾಗಿ ಉಳಿಯಬಹುದಾದ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು ಹೊಸ ವಿಷಯವೇನಲ್ಲ. ಆದರೆ ಇದು ಸಾರ್ವಜನಿಕ ವಲಯದಲ್ಲಿ ಅತ್ಯಂತ ಚರ್ಚಿಸಬಹುದಾದ, ಗಮನ ಸೆಳೆಯಬಹುದಾದ ವಿಷಯವಾಗಿದೆ. ಇತರೆ ನವೀಕರಿಸ ಬಹುದಾದ ಇಂಧನ ಮೂಲಗಳಂತೆ, ಜೈವಿಕ ಡೀಸಲ್‌ನ್ನು ಕೂಡ ನಮ್ಮ ಇಂಧನ ಸಂಪನ್ಮೂಲಗಳನ್ನು ಉಳಿಸುವತ್ತ / ಹೆಚ್ಚಿಸುವತ್ತ ನಿರ್ದಿಷ್ಟವಾಗಿ ಅಭಿವೃದ್ಧಿಗೊಳಿಸಲಾಗಿದೆ. ಪೆಟ್ರೋಲಿಯಂ ಒಂದು ಸೀಮಿತ ಸಂಪನ್ಮೂಲವಾಗಿದ್ದು. ಇದನ್ನು ಸತತವಾಗಿ ಸಾಗಾಣಿಕೆ ಇಂಧನವಾಗಿ ಬಳಸುವುದರಿಂದ ಈ ಸಂಪನ್ಮೂಲ ಖಾಲಿಯಾಗುವುದು ಖಚಿತ. ಪೆಟ್ರೋಲಿಯಂನ್ನು ಪ್ರಮುಖ ಇಂಧನ ಮೂಲ ಎಂದು ಗುರುತಿಸಿದಾಗಲೇ ಈ ವಿಷಯ ತಿಳಿದುಬಂದಿದೆ. ಇಂಧನ ಸಂಪನ್ಮೂಲವನ್ನು ಶಾಶ್ವತವಾಗಿ ಉಳಿಸುವಲ್ಲಿ ಹಾಗೂ ಇಂಧನ ಸಂರಕ್ಷಣೆ ಮಾಡುವಲ್ಲಿನ ರೂಪುರೇಷೆಗಳನ್ನು ರೂಪಿಸುವಲ್ಲಿ ಜೈವಿಕ ಇಂಧನ, ಸಾಕಷ್ಟು ಬೆಂಬಲವನ್ನು ಕಲ್ಪಿಸುತ್ತದೆ.

ಸಸ್ಯ ಜನ್ಯ ಮೂಲಗಳಿಂದ ಯಂತ್ರ ನಡೆಸಬಹುದೆಂಬ ಉದ್ದೇಶದೊಂದಿಗೆ ಡಾ॥ ರುಡಾಲ್ಫ್ ಡೀಸಲ್ ಪ್ರಥಮ ಡೀಸಲ್ ಇಂಜಿನ್ ನಿರ್ಮಿಸಿದಂದಿನಿಂದಲೇ ಅಂದರೆ ಕ್ರಿ.ಶ. 1885 ರಷ್ಟು ಹಿಂದೆಯೇ ಜೈವಿಕ ಇಂಧನದ ಪರಿಕಲ್ಪನೆಯು ಉಂಟಾಯಿತು.

## ಜೈವಿಕ–ಇಂಧನ ಎಂದರೇನು ?

ಜೈವಿಕ ಕಚ್ಚಾ ಸಾಮಗ್ರಿಗಳಿಂದ ತಯಾರಿಸಲ್ಪಟ್ಟ ನವೀಕರಿಸಬಹುದಾದ ಇಂಧನವೇ ಜೈವಿಕ–ಇಂಧನ. ಉದಾಹರಣೆಗೆ : ಖಾದ್ಯ ಮತ್ತು ಖಾದ್ಯೇತರ ಎಣ್ಣೆ ಬೀಜಗಳಾದ ಹೊಂಗೆ(ಪೊಂಗೇಮಿಯಾ ಪಿನ್ನಾಟ), ಜಟ್ರೋಪ (ರತನ್‌ಜ್ಯೋತ್), ಬೇವು, ರಬ್ಬರ್, ಸೊಯಾಬೀನ್ಸ್, ಸಾಸುವೆ, ಮತ್ತು ಇತರೆ ಪ್ರಾಣಿಜನ್ಯ ಕೊಬ್ಬು ಮತ್ತು ನಿರುಪಯುಕ್ತ ಎಣ್ಣೆ, ಅಲ್ಲದೆ ಕಬ್ಬಿನಿಂದ ಹೊರಬರುವ ಇಥೆನಾಲ್ ಮತ್ತು ಸೆಲ್ಯುಲೋಸ್. ಇವುಗಳನ್ನು ಜೈವಿಕ–ಇಂಧನ ಎಂದು ಪರಿಗಣಿಸಲಾಗಿದೆ.

## ಜೈವಿಕ –ಡೀಸಲ್ ಎಂದರೇನು ?

ಸಾವಯವ ಮೂಲವಾದ ಯಾವುದೇ ಎಣ್ಣೆ ಅಥವಾ ಕೊಬ್ಬು ಪದಾರ್ಥವನ್ನು ಟ್ರಾನ್ಸ್–ಎಸ್ಟರಿಫಿಕೇಶನ್ ಕಾರ್ಯವಿಧಾನಕ್ಕೆ ಅಳವಡಿಸಿದಾಗ ಜೈವಿಕ–ಡೀಸಲ್ ಉತ್ಪತ್ತಿಯಾಗುವುದು. ಈ ಪ್ರಕ್ರಿಯೆಗೆ ಆಲ್ಕೋಹಾಲ್ (ಮಿಥೆನಾಲ್/ಎಥೈನಾಲ್)ನ್ನು ಉತ್ತೇಜಕ (Catalyst) ಗಳಾದ ಪೊಟ್ಯಾಶಿಯಂ ಹೈಡ್ರಾಕ್ಸೈಡ್ (KOH) ಹಾಗೂ ಸೋಡಿಯಂ ಹೈಡ್ರಾಕ್ಸೈಡ್ (NaOH) ದ ಸಮ್ಮುಖದಲ್ಲಿ ಬಳಸಿದಲ್ಲಿ ಬಯೋ–ಡೀಸಲ್ ಅಥವ B-100 (ಮಿಥೇನ್ ಅಥವಾ ಈಥೈಲ್ ಈಸ್ಟರ್) ಉತ್ಪಾದಿಸಲ್ಪಡುತ್ತದೆ. ಇದು ಸ್ವಚ್ಛ, ನವೀಕರಿಸಬಹುದಾದ ಜೈವಿಕ ಪಚನಗೊಳ್ಳಬಲ್ಲ ಹಾಗೂ ಪೆಟ್ರೋಲಿಯಂಗೆ ಪರ್ಯಾಯವಾಗಿ ಬಳಸಬಹುದಾದ ಇಂಧನ.

## ಜೈವಿಕ ಎಥೆನಾಲ್ ಎಂದರೇನು?

- ಇದನ್ನು ಈಥೈಲ್–ಆಲ್ಕೋಹಾಲ್ ಎಂದೂ ಕರೆಯುವರು.
- ವಾಹನ ಇಂಧನಕ್ಕೆ ಪೂರಕವಾಗಿ ಬಳಸಬಹುದಾದ ಸ್ವಚ್ಛವಾದ, ಉರಿಯುವ ಇಂಧನ
- ಮುಖ್ಯವಾಗಿ ಕಬ್ಬು, ಮೊಲಾಸಿಸ್, ಜೋಳ, ಬೀಟ್ರೋಟ್ ಹಾಗೂ ಮೆಕ್ಕೆಜೋಳಗಳಿಂದ ಉತ್ಪಾದಿಸಲ್ಪಡುತ್ತದೆ.
- ಸಂಪೂರ್ಣವಾಗಿ ಉರಿಯುವುದರಿಂದ ಪರಿಸರ ಸ್ನೇಹಿ.
- ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಜೈವಿಕ–ಇಥೆನಾಲ್ ಉತ್ಪನ್ನ ಮಾಡುವ ದೇಶ ಬ್ರೆಜಿಲ್ ಆಗಿದ್ದು (ಶೇ 37) ನಂತರದ ಸ್ಥಾನವನ್ನು ಅಮೇರಿಕಾ ಮತ್ತು ಚೀನಾ ಆಕ್ರಮಿಸಿವೆ.
- ಭಾರತಕ್ಕೆ ಪ್ರಪಂಚದಲ್ಲಿ 4 ನೇ ಸ್ಥಾನ ಇದ್ದು, ಏಷ್ಯಾದಲ್ಲಿ ಚೀನಾ ನಂತರ ಎರಡನೇ ಸ್ಥಾನ ಇದೆ.
- ಪ್ರಪಂಚದಲ್ಲಿ ಹೆಚ್ಚು 'ಬಯೋ–ಈಥೆನಾಲ್' ಬಳಸುವ ದೇಶಗಳೆಂದರೆ ಬ್ರೆಜಿಲ್, ಭಾರತ, ಅಮೇರಿಕಾ, ಯೂರೋಪ ಒಕ್ಕೂಟ, ಜಪಾನ್, ಚೈನಾ, ಕೊರಿಯಾ ಹಾಗೂ ಥೈಲ್ಯಾಂಡ್.

## ಜೈವಿಕ–ಇಂಧನದ ಮುಖ್ಯ ಅಂಶಗಳು – ಸಾಗುವಳಿಯಿಂದ ಜೈವಿಕ ಡೀಸಲ್ ಉತ್ಪಾದನೆವರೆಗೆ

### ಸಾಗುವಳಿ

- ಸಾಗುವಳಿಗಾಗಿ ಭೂಮಿಯ ಆಯ್ಕೆ
- ಒಳ್ಳೆ ಗುಣಮಟ್ಟದ ಸಸಿಗಳ ಅಭಿವೃದ್ಧಿ
- ನೆಡು ತೋಪು ಬೆಳೆಸುವುದು ಹಾಗೂ ಮಿಶ್ರ ಬೇಸಾಯ
- ಕನಿಷ್ಟ ನಿರ್ವಹಣೆ.

### ಬೀಜ ಸಂಗ್ರಹಣೆ

- ಋತುಮಾನಕ್ಕೆ ತಕ್ಕಂತೆ ಕೊಯ್ಲು / ಬೀಜ ಸಂಗ್ರಹಣೆ
- ವಿಂಗಡಣೆ ಹಾಗೂ ಒಣಗಿಸುವುದು.
- ಪ್ಯಾಕಿಂಗ್ ಪೂರೈಕೆ ಮತ್ತು ಮಾರಾಟ
- ಎಣ್ಣೆ ಹಿಂಡುವಿಕೆ, ಎಣ್ಣೆ ಹಿಂಡುವ ಯಂತ್ರಗಳು, ಉಪಯೋಗ ಹಾಗೂ ಎಣ್ಣೆ ಮಾರಾಟ (SVO)
- ಹಿಂಡಿಯನ್ನು ಸಾವಯವ ಗೊಬ್ಬರವನ್ನಾಗಿ ಮಾರಾಟಮಾಡುವುದು / ಅಳಿದುಳಿದ ಹಿಂಡಿಯಿಂದ ಎಣ್ಣೆ ಹಿಂಡುವ ವಿಧಾನ.

### ತೈಲ ಉದ್ಧರಣೆ

- ತೈಲ ಉದ್ಧರಣೆ – ರೋಟರಿ ಹಾಗೂ ಎಕ್ಸ್‌ಪೆಲ್ಲರ್ ಘಟಕ.
- ಬಳಕೆ ಹಾಗೂ ಮಾರಾಟ.
- ಎಣ್ಣೆ ಹಿಂಡಿಯನ್ನು ಸಾವಯವ ಗೊಬ್ಬರವಾಗಿ ಹಾಗೂ ಜೈವಾನಿಲ ಘಟಕಕ್ಕೆ ಕಚ್ಚಾ ಸಾಮಗ್ರಿಯಾಗಿ ಬಳಸಲು ಮಾರಾಟದ ವ್ಯವಸ್ಥೆ.
- ಸಾಲ್ವೆಂಟ್–ಎಕ್ಸ್ಟ್ರಾಕ್ಷನ್ ಮಾದರಿ : ಎಣ್ಣೆ ಹಿಂಡಿಯಿಂದ ಉಳಿದಿರುವ ಎಣ್ಣೆಯನ್ನು ಬೇರ್ಪಡಿಸುವುದು.

### ಟ್ರಾನ್ಸ್–ಎಸ್ಟರಿಫಿಕೇಶನ್ : ತೈಲವನ್ನು ಜೈವಿಕ–ಡೀಸಲ್ ಆಗಿ ಪರಿವರ್ತಿಸುವಿಕೆ

ಅ) ಡೀಸಲ್ ಪರ್ಯಾಯವಾಗಿ ಬಳಸಲು ಜೈವಿಕ–ಡೀಸಲ್‌ನ ಸಿದ್ಧತೆ.

ಆ) ಸಾಗಾಣಿಕೆ ಅಥವಾ ಸಾಗಾಣಿಕೇತರ ವಲಯಗಳಲ್ಲಿ ಬಳಕೆ.

ಇ) ಮೌಲ್ಯವರ್ಧನೆ – ಉಪ ಉತ್ಪನ್ನಗಳು (ಸಾಬೂನು ಮತ್ತು ಗ್ಲಿಸರಿನ್)

## ಸಾಗುವಳಿ ಅಂಶಗಳು

- ಭಾರತಕ್ಕೆ ಸಂಬಂಧಿಸಿದಂತೆ : ಖಾದ್ಯೇತರ ಎಣ್ಣೆ ಉತ್ಪನ್ನ ಮಾಡುವ ಗಿಡ–ಮರಗಳಾದ ಹೊಂಗೆ, ಹಿಪ್ಪೆ, ಜಟ್ರೋಪ, ಬೇವು, ಉಂಡಿ, ಸುರಹೊನ್ನೆ, ಸಾಲ್, ರಬ್ಬರ್ ಬೆಳೆಸಲು ಹೆಚ್ಚಿನ ಮಹತ್ವನೀಡುವುದು.
- ಖಾದ್ಯ ತೈಲ ಪ್ರಮಾಣ ಕಮ್ಮಿ ಇರುವುದರಿಂದ, ಅಲ್ಲದೆ ಅದನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ಇದನ್ನು ಜೈವಿಕ–ಇಂಧನವಾಗಿ ಬಳಸುವುದು ಸೂಕ್ತವಲ್ಲ.
- ಖಾದ್ಯೇತರ ಎಣ್ಣೆ ಬೀಜಗಳನ್ನು ಬೆಳೆಸಲು ಬಂಜರು ಹಾಗೂ ಖರಾಬು ಭೂಮಿಯನ್ನು ಮಾತ್ರ ಉಪಯೋಗಿಸಿಕೊಳ್ಳಬೇಕು ಯಾಕೆಂದರೆ ಆಹಾರ ಬೆಳೆಗಳಿಗೆ ಒಳ್ಳೆಯ ಭೂಮಿಯ ಅವಶ್ಯಕತೆ ಇರುತ್ತದೆ.
- ಹೆಚ್ಚು ಇಳುವರಿ ನೀಡುವ ಹಾಗೂ ಕಸಿ ಮಾಡಿರುವ ಒಳ್ಳೆಯ ಸಸಿಗಳ ಆಯ್ಕೆ.
- ಬದುಗಳ ಮೇಲೆ, ಬಂಜರು ಭೂಮಿ ಹಾಗೂ ನಿರುಪಯುಕ್ತ ಸ್ಥಳಗಳಲ್ಲಿ ಮಾತ್ರ ಸಾಗುವಳಿ ಮಾಡಬೇಕು.
- ಭೌಗೋಳಿಕ ಹಾಗೂ ವಾತಾವರಣ ಬದಲಾವಣೆಗೆ ಅನುಗುಣವಾಗಿ ಗಿಡಗಳ ಆಯ್ಕೆ.
- ತೋಪುಗಳನ್ನು ನಿರ್ಮಿಸುವಲ್ಲಿ ಮಿಶ್ರ ನೆಡುತೋಪು ಆಯ್ಕೆಗೆ ಪ್ರಾಮುಖ್ಯತೆ.
- ಪ್ರಾಂತೀಯ ಜೈವಿಕ–ವೈವಿಧ್ಯತೆಯನ್ನು ನಿರ್ವಹಿಸುವು ದರೊಂದಿಗೆ. ಒಂದೇ ಜಾತಿಯ ಗಿಡ–ಮರಗಳನ್ನು ಬೆಳೆಸುವುದನ್ನು ತಡೆಗಟ್ಟಿ.

## ಕರ್ನಾಟಕದ ಮುಖ್ಯ ಜೈವಿಕ ಇಂಧನ ಗಿಡ–ಮರಗಳು :

### ಪೊಂಗೇಮಿಯ (ಪೊಂಗೇಮಿಯ ಪಿನ್ನಾಟ)

ಕನ್ನಡ : ಹೊಂಗೆ, ಸಂಸ್ಕೃತ : ಕರಂಜ್, ತೆಲುಗು : ಗಾನುಗ, ತಮಿಳು : ಪೊಂಗಮ್, ಹಿಂದಿ : ಕರಂಜ.

- ಹೂ ಬಿಡುವಿಕೆ : ಮಾರ್ಚ್–ಮೇ.
- ಕೊಯ್ಲು : ಫೆಬ್ರವರಿ–ಮಾರ್ಚ್.
- ಫಲ ನೀಡಲು : ಸರಾಸರಿ 5 ವರ್ಷಗಳು




### ಸರಾಸರಿ ಬೀಜೋತ್ಪಾದನೆ /ಮರ ಒಂದಕ್ಕೆ


- 5-6 ವರ್ಷಗಳು : 05-10 ಕೆ.ಜಿ.
- 10 ವರ್ಷಗಳ ನಂತರ : 15-20 ಕೆ.ಜಿ.
- 20 ವರ್ಷಗಳ ತರುವಾಯ : 30-40 ಕೆ.ಜಿ.
- ತೈಲ ; 27-30 %.

### ಜಟ್ರೋಪ (ಜಟ್ರೋಪ ಕರ್ಕಸ್)

ಕನ್ನಡ : ಕಾಡಹರಳು, ಸಂಸ್ಕೃತ : ಕಾನನೆರಂದ್, ತಮಿಳು : ಅಡ್ಡಲಾಯ್ ಹಿಂದಿ : ಸಫೇದ್‌ರಂದ್/ ರತನ್‌ಜ್ಯೋತ್.

- ಹೂ ಬಿಡುವಿಕೆ : ಮೇ–ಆಗಸ್ಟ್.
- ಕೊಯ್ಲು : ಆಗಸ್ಟ್– ಅಕ್ಟೋಬರ್.
- ಫಲ ನೀಡಲು ಆರಂಭ : ಸರಾಸರಿ 3 ವರ್ಷಗಳು.

### ಸರಾಸರಿ ಬೀಜೋತ್ಪಾದನೆ /ಮರ ಒಂದಕ್ಕೆ




- 3 ನೇ ವರ್ಷ : 05-10 ಕೆ.ಜಿ.
- 10 ವರ್ಷಗಳ ತರುವಾಯ : 15-20 ಕೆ.ಜಿ.
- ತೈಲ : 28-35 %

### ಮಹುವ (ಮಧುಕ ಇಂಡಿಕ)

ಕನ್ನಡ : ಹಿಪ್ಪೆ, ಸಂಸ್ಕೃತ : ಮಧುಕ, ತೆಲುಗು : ವಿಪ್ಪ, ತಮಿಳು : ಇಲ್ಲಿಪೆ, ಹಿಂದಿ : ಮಹುವ/ಮಾವರ

- ಹೂ ಬಿಡುವಿಕೆ : ಮಾರ್ಚ್– ಏಪ್ರಿಲ್
- ಕೊಯ್ಲು : ಜೂನ್ – ಆಗಸ್ಟ್
- ಫಲ ನೀಡಿಕೆ ಪ್ರಾರಂಭ : ಸರಾಸರಿ 10 ವರ್ಷಗಳು.




### ಸರಾಸರಿ ಬೀಜೋತ್ಪಾದನೆ /ಮರ ಒಂದಕ್ಕೆ

- 10 ವರ್ಷಗಳ ನಂತರ : 05-10 ಕೆ.ಜಿ.
- 25 ವರ್ಷಗಳ ನಂತರ : 30-40 ಕೆ.ಜಿ.
- ತೈಲ : 30-35 %

### ಸಿಮಾರೂಬ (ಸಿಮಾರೂಬ ಗ್ಲಾಕ) :

ಕನ್ನಡ : ಸ್ವರ್ಗದ ಮರ, ಸಾಮಾನ್ಯ ಹೆಸರು : ಸಿಮಾರೂಬ.

- ಹೂ ಬಿಡುವಿಕೆ : ಡಿಸೆಂಬರ್–ಫೆಬ್ರವರಿ
- ಕೊಯ್ಲು : ಫೆಬ್ರವರಿ–ಏಪ್ರಿಲ್
- ಉತ್ಪಾದನೆ ಆರಂಭ : ಸರಾಸರಿ 4 ವರ್ಷಗಳು.




### ಸರಾಸರಿ ಬೀಜೋತ್ಪಾದನೆ /ಮರ ಒಂದಕ್ಕೆ

- 6 ವರ್ಷಗಳ ನಂತರ : 05-10 ಕೆ.ಜಿ.
- 10 ವರ್ಷಗಳ ನಂತರ : 15-25 ಕೆ.ಜಿ.
- ತೈಲ : 30-40

### ಬೇವು (ಅಜಾದಿರಕ್ತ ಇಂಡಿಕ) :

ಕನ್ನಡ : ಬೇವು, ಸಂಸ್ಕೃತ : ನಿಂಬ, ತೆಲುಗು : ವೇಪ, ತಮಿಳು : ವೆಂಬು, ಹಿಂದಿ : ನೀಮ್.ಮಳಯಾಳಿ:ವೆಪ್ಪು

- ಹೂ ಬಿಡುವಿಕೆ : ಮಾರ್ಚ್–ಮೇ.
- ಕೊಯ್ಲು : ಜೂನ್ – ನವಂಬರ್.
- ಉತ್ಪಾದನೆ ಪ್ರಾರಂಭ : ಸರಾಸರಿ 5 ವರ್ಷಗಳು.

ಸರಾಸರಿ ಬೀಜೋತ್ಪಾದನೆ / ಮರ ಒಂದಕ್ಕೆ

- 10 ವರ್ಷಗಳ ನಂತರ : 05-10 ಕೆ.ಜಿ.
- 20 ವರ್ಷಗಳ ನಂತರ : 25-30 ಕೆ.ಜಿ.
- ತೈಲ : 25-30 %

## ರಬ್ಬರ್ (ಹೇವಿಯ ಬ್ರಾಸಿಲಿಯಾನ್ಸಿಸ್)

ಸಾಮಾನ್ಯ ಹೆಸರು : ರಬ್ಬರ್ ಮರ.

- ಎಲ್ಲೆಲ್ಲಿ ಲಭ್ಯ : ಪ್ಲಾಂಟೇಶನ್ ಕೇರಳ, ಕರ್ನಾಟಕ, ತಮಿಳುನಾಡು, ಅಂಡಮಾನ್.
- (ಅಮೇಝಾನ್ ಕಣಿವೆ ವ್ಯಾಪ್ತಿಗೆ ಸೇರಿರುವುದು)
- ಕಲೆಕ್ಷನ್/ಕೊಯ್ಲು : ಆಗಸ್ಟ್–ನವಂಬರ್
- ಉತ್ಪಾದನೆ/ಮರ ಒಂದಕ್ಕೆ : 1.5 ರಿಂದ 2 ಕೆ.ಜಿ
- ತೈಲ : 33-35%


## ಕರ್ನಾಟಕದ ಇತರೆ ಮುಖ್ಯ ಜೈವಿಕ–ಇಂಧನ ಸಸ್ಯ ಜಾತಿಗಳು:

| ಕ್ರ. ಸಂ. | ಸಾಮಾನ್ಯ ಹೆಸರು | Botanical Name |
|---|---|---|
| 1 | ಕೊಕಮ್ / ಪುನಾರ್ಪುಲಿ | Garcinia indica |
| 2 | ಕಮಲ / ಕಾಮೊಪಿಲ್ಲಕ | Mallotus phillippines |
| 3 | ಮಿಸುವ/ನಾಗಸಂಪಿಗೆ | Mesua ferrae |
| 4 | ಕುರ್ದು/ಕುಲು | Sterculia urens |
| 5 | ಹಪ್ಪು ಸ್ಯಾವೇಜ್/ಪಿರಿಕ್ | Sterculia guttata |
| 6 | ಅಮೂರ / ಮುಖ್ಯಮುತ್ತಗೆ | Aphanamixis polystachya |
| 7 | ಧೂಪ/ಕೊಪಾಲ್ ಟ್ರೀ | Veteria indica |
| 8 | ಉಂಡಿ / ತಾಮನು | Callophyllum inophyllum |
| 9 | ಲ್ಯಾಕ್ ಟ್ರೀ/ ಕ್ಯಕೊಟ/ಕುಸುಮ್ | Schychera oleosa |
| 10 | ಅಂಟುವಾಳ/ಸೋಪ್‌ನಟ್ | Sapindus mukorossi |
| 11 | ಹೆಬ್ಬೇವು | Melia azadirachta. |

## ಜೈವಿಕ–ಇಂಧನ ಉತ್ಪಾದನೆ :

### ತೈಲ ಉದ್ಧರಣೆ ಪ್ರಕ್ರಿಯೆ

ಯಾವುದೇ ಖಾದ್ಯ ಅಥವಾ ಖಾದ್ಯೇತರ ತೈಲವನ್ನು ಕೆಳಕಂಡ ಕಾರ್ಯ ವಿಧಾನದಿಂದ ಪಡೆಯಬಹುದು.



ಎಕ್ಸ್‌ಪೆಲ್ಲರ್

- ಖಾದ್ಯೇತರ ಎಣ್ಣೆ ಬೀಜಗಳನ್ನು ಅರೆಯುವ ಮುಂಚೆ ಬಿಸಿಲಿನಲ್ಲಿ ಒಣಗಿಸುತ್ತಾರೆ. ಈ ಬೀಜಗಳನ್ನು ಅರೆಯುವ ಯಂತ್ರಕ್ಕೆ ಹಾಕಿ ತೈಲವನ್ನು ಪಡೆಯುತ್ತಾರೆ.
- ನಂತರ ಸ್ವಚ್ಛ ಎಣ್ಣೆಯನ್ನು ಪಡೆಯಲು ಶೋಧಿಸಲಾಗುವುದು. ಎಕ್ಸ್‌ಪೆಲ್ಲರ್ ಘಟಕದ ಸಾಮರ್ಥ್ಯಕ್ಕೆ ಅನುಗುಣವಾಗಿ ಸರಾಸರಿ 100 ರಿಂದ 1000 ಕಿ.ಗ್ರಾಂ. ಬೀಜಗಳನ್ನು ಪ್ರತಿ ಗಂಟೆಗೆ ಅರೆಯಲಾಗುವುದು.
- ನಂತರ ಹಿಂಡಿಯಲ್ಲಿ ಉಳಿದಿರುವ ತೈಲವನ್ನು ಸಾಲ್ವೆಂಟ್ ಎಕ್ಸ್ಟ್ರಾಕ್ಷನ್ ಮೂಲಕ ಹೊರ ತೆಗೆಯಲಾಗುವುದು.
- ಈ ಪ್ರಕ್ರಿಯೆಯಲ್ಲಿ ಹಿಂಡಿಯು ಉಪ-ಉತ್ಪನ್ನವಾಗುವುದು.




### ತೈಲದಿಂದ ಜೈವಿಕ ಇಂಧನವಾಗಿ ಪರಿವರ್ತಿಸುವ ವಿಧಾನ :

ತೈಲದಿಂದ ಜೈವಿಕ-ಡೀಸಲ್ ಪರಿವರ್ತನೆಗೆ ಟ್ರಾನ್ಸ್-ಎಸ್ಟರಿಫಿಕೇಶನ್ (Trans-esterification) ಎಂದು ಕರೆಯುವರು. ಯಾವುದೇ ಸಸ್ಯ ಮೂಲದ, ಪ್ರಾಣಿ ಮೂಲದ ತೈಲ, ಕೊಬ್ಬು ಹಾಗೂ ಇತರೆ ನಿರುಪಯುಕ್ತ ಮೂಲಗಳಿಂದ ಜೈವಿಕ ಇಂಧನ ಪಡೆಯಬಹುದು. ಯಾವುದೇ ತೈಲವನ್ನು ಕ್ಯಾಟಲಿಸ್ಟ್ ಆದ ಪೊಟ್ಯಾಶಿಯಂ ಹೈಡ್ರಾಕ್ಸೈಡ್ ಅಥವಾ ಸೋಡಿಯಂ ಹೈಡ್ರಾಕ್ಸೈಡ್ (KOH OR NaOH) ಸಮ್ಮುಖದಲ್ಲಿ ಆಲ್ಕೋಹಾಲ್ (ಮಿಥೆನಾಲ್ ಅಥವಾ ಇಥೆನಾಲ್) ನೊಂದಿಗೆ ನಿಗಧಿತ ಪ್ರಮಾಣದಲ್ಲಿ ಮಿಶ್ರಣ ಮಾಡಿದಲ್ಲಿ ಈಥೈಲ್/ ಮೀಥೈಲ್ ಎಸ್ಟರ್ ಎಂಬ ರಾಸಾಯನಿಕ ವಸ್ತು ಪಡೆಯಲಾಗುವುದು. ಇದನ್ನೇ ನಾವು 'ಜೈವಿಕ-ಡೀಸಲ್' ಎಂದು ಕರೆಯುವುದು. ಈ ಪ್ರಕ್ರಿಯೆಗೆ ಟ್ರಾನ್ಸ್-ಎಸ್ಟರಿಫಿಕೇಶನ್ ಎಂದು ಕರೆಯಲಾಗುವುದು.

### ಎಣ್ಣೆ ಮತ್ತು ಕೊಬ್ಬಿನಿಂದ ಜೈವಿಕ ಡೀಸಲ್ ಉತ್ಪಾದಿಸಲು ಮೂರು ಮೂಲ ಮಾರ್ಗಗಳಿವೆ

- ತೈಲದ ಬೇಸ್ ಕ್ಯಾಟಲೈಸಡ್ ಟ್ರಾನ್ಸ್‌ಎಸ್ಟರಿಫಿಕೇಶನ್ ಪ್ರಕ್ರಿಯೆ.
- ಎಣ್ಣೆಯ ನೇರ ಆಸಿಡ್-ಕ್ಯಾಟಲೈಸಡ್ ಟ್ರಾನ್ಸ್‌ಎಸ್ಟರಿಫಿಕೇಸನ್ ಪ್ರಕ್ರಿಯೆ
- ಎಣ್ಣೆಯಿಂದ ಫ್ಯಾಟಿ ಆಸಿಡ್ಸ್ ಪಡೆದು ಜೈವಿಕ-ಡೀಸಲ್‌ಗೆ ಪರಿವರ್ತನೆ.

### ಎಣ್ಣೆಯಿಂದ ಜೈವಿಕ-ಡೀಸಲ್ ಪರಿವರ್ತನೆಯ ವಿವಿಧ ಹಂತಗಳು



## ಪಡೆಯಲಾದ ಉಪ-ಉತ್ಪನ್ನಗಳು

- ಎಣ್ಣೆ ಹಿಂಡಿ
- ದ್ರವ ರೂಪದ ಸಾಬೂನು
- ಕಚ್ಚಾ ಗ್ಲಿಸರಾಲ್.

ಎಣ್ಣೆ ಹಿಂಡಿಯು ಸಾರಜನಕ, ಸಸಾರಜನಕ ಹಾಗೂ ಪೊಟ್ಯಾಷ್ ಅಂಶವುಳ್ಳ ಒಂದು ಉತ್ತಮ ಸಾವಯವ ಜೈವಿಕ ಗೊಬ್ಬರ. ದ್ರವ ರೂಪದ ಸೋಪನ್ನು ಸ್ವಚ್ಛಗೊಳಿಸುವ ವಸ್ತು ಆಗಿ ಹಾಗೂ ಮಾರ್ಜನಕ(ಡಿಟರ್ಜೆಂಟ್) ತಯಾರಿಸಲು ಬಳಸಬಹುದು.ಕಚ್ಚಾ ಗ್ಲಿಸರಾಲ್‌ನ್ನು 'ಔಷಧೀಯ ಮಟ್ಟದ ಗ್ಲಿಸರಿನ್' ಆಗಿ ಶುದ್ಧೀಕರಿಸಬಹುದು ಹಾಗೂ ಔಷಧಿ ಹಾಗೂ ರಾಸಾಯನಿಕ ಕಂಪನಿಗಳಲ್ಲಿ ಬಳಸಬಹುದು.

## ಜೈವಿಕ-ಡೀಸಲ್ ಮಿಶ್ರಣ :

ಚಳಿಗಾಲಕ್ಕೆ ಹೊಂದಿಕೊಳ್ಳುವಂತೆ ಇಂಜಿನ್‌ಗೆ ಸೂಕ್ತವೆನಿಸುವ ರೀತಿಯಲ್ಲಿ ಬಳಸುವಂತೆ ಹಾಗೂ ಜೈವಿಕ-ಡೀಸಲ್‌ನ ಬೆಲೆ ಹೆಚ್ಚಾಗಿರುವುದರಿಂದ ಇದನ್ನು ಸಾಮಾನ್ಯ ಡೀಸಲ್‌ನೊಂದಿಗೆ ಮಿಶ್ರಣ ಮಾಡಲಾಗುವುದು. ಸಾಮಾನ್ಯ ಮಿಶ್ರಣ ಎಂದರೆ B-20. ಇದರಲ್ಲಿ ಶೇ 20 ಜೈವಿಕ-ಡೀಸಲ್ ಮಿಶ್ರಣವಾಗಿರುತ್ತದೆ ಹಾಗೂ B-2 ರಲ್ಲಿ ಶೇ 2 ರಷ್ಟು ಜೈವಿಕ-ಡೀಸಲ್ ಮಿಶ್ರಣವಾಗಿರುತ್ತದೆ.

- ಎಲ್ಲಾ ಡೀಸಲ್ ಇಂಜಿನ್‌ಗಳಲ್ಲಿ ( ಸಾಗಾಣಿಕೆ ಹಾಗೂ ಸ್ಥಿರವಾಗಿರುವ) ಡೀಸಲ್‌ಗೆ ಪರ್ಯಾಯವಾಗಿ ಬಳಸಬಹುದು.
- 2002 ರ ನಂತರ ಬರುವ ಎಲ್ಲಾ ಇಂಜಿನ್‌ಗಳು ಜೈವಿಕ-ಡೀಸಲ್‌ಗೆ ಸೂಕ್ತವಾಗುವುದರಿಂದ ಇಂಜಿನ್‌ನಲ್ಲಿ ಯಾವುದೇ ಮಾರ್ಪಾಡಿನ ಅವಶ್ಯಕತೆ ಇಲ್ಲ.
- ಪೆಟ್ರೋಲ್ ಡೀಸಲ್‌ಗೆ ಸರಿ ಸಮವಾಗಿರುವ ಗುಣಧರ್ಮಗಳೇ ಈ ಇಂಧನಕ್ಕೂ ಇದೆ.
- ಆಮ್ಲಜನಕ ಸಂಯುಕ್ತವಾಗಿರುವುದರಿಂದ ಸಮರ್ಥವಾಗಿ ದಹಿಸುತ್ತದೆ.
- ಹೆಚ್ಚಿನ ಸಿಟೇನ್ (Cetane) ಸಂಖ್ಯೆ ಇರುವುದರಿಂದ ಪೆಟ್ರೋಲಿಯಂ, ಡೀಸಲ್‌ನೊಂದಿಗೆ ಮಿಶ್ರಣ ಮಾಡಿದಾಗಲೂ ದಹಿಸುವ ಗುಣಮಟ್ಟವನ್ನು ಉತ್ತಮಗೊಳಿಸುತ್ತದೆ.
- ನೇರವಾಗಿ ಪಡೆಯಲಾದ ತೈಲದಲ್ಲಿ ಆಗುವಂತೆ ಯಾವುದೇ ಅಂಟಿನ ಪದಾರ್ಥ ಇರುವುದಿಲ್ಲ.
- ಶೇ 20 ರಷ್ಟು ಮಿಶ್ರಣ ಮಾಡಿದಲ್ಲಿ ಇಂಜಿನ್‌ನಲ್ಲಿ ಯಾವುದೇ ಪರಿವರ್ತನೆ ಬೇಕಿರುವುದಿಲ್ಲ. ಆದರೆ ಶೇ 100 ರಷ್ಟು ಮಾಡಿದಲ್ಲಿ ಕೆಲವು ಪರಿವರ್ತನೆ ಬೇಕಾಗಬಹುದು.
- ಜೈವಿಕ-ಡೀಸಲ್ ಸಾಲ್ವೆಂಟ್ ಆಗಿರುವುದರಿಂದ ರಬ್ಬರ್ ಭಾಗಗಳು ಹಾಗೂ ಹಲವು ಲೋಹಗಳಿಗೆ ತುಕ್ಕು ಹಿಡಿದು ಸವಕಲಾಗುವ ಸಾಧ್ಯತೆ ಇದೆ.

## ಜೈವಿಕ ಡೀಸಲ್ V/s ಡೀಸಲ್

- ವಾಹನಗಳಲ್ಲಿ ಹೊಗೆ ಹೊರಸೂಸುವಿಕೆ ಕಡಿಮೆ ಮಾಡುವುದರಿಂದ ಇದು ಪರಿಸರ-ಸ್ನೇಹಿ.
- ಸಾಮಾನ್ಯವಾಗಿ ಬಳಸುವ ಡೀಸಲ್ ಇಂಜಿನ್‌ಗಿಂತ ಜೈವಿಕ-ಡೀಸಲ್ ಬಳಸಿದಲ್ಲಿ, ಉರಿಯದೆ ಉಳಿಯುವ ಹೈಡ್ರೋ-ಕಾರ್ಬನ್, ಕಾರ್ಬನ್-ಮೊನಾಕ್ಸೈಡ್ ಹಾಗೂ ಧೂಳಿನ ಕಣಗಳ ಹೊರಸೂಸುವಿಕೆಯಲ್ಲಿ ಸಾಕಷ್ಟು ಕಡಿತ ಉಂಟಾಗುವುದು. (ಆದರೆ NOX ಶೇ 2 ಹೆಚ್ಚುತ್ತದೆ ಎಂಬುದು ನಿಜ)
- ಜೈವಿಕ ಡೀಸಲ್‌ನಲ್ಲಿ ಗಂಧಕದ ಅಂಶ ತುಂಬಾ ಕಮ್ಮಿ ಇರುವುದರಿಂದ (0.05%) ಆರೋಮ್ಯಾಟಿಕ್ ಇಲ್ಲದಿರುವುದ ರಿಂದ ಶೇ 10 ರಷ್ಟು ಆಮ್ಲಜನಕಯುಕ್ತ ಇರುವುದರಿಂದ ಚೆನ್ನಾಗಿ ದಹಿಸಲು ಸಹಾಯವಾಗುತ್ತದೆ.
- ಹೆಚ್ಚಿನ 'ಸಿಟೇನ್' ನಂಬರ್ ಇರುವುದರಿಂದ 51ಕ್ಕಿಂತ ಹೆಚ್ಚು ಹಾಗೂ ಡೀಸಲ್‌ನದು 48 ಇರುವುದರಿಂದ ಅಂದರೆ ಜೈವಿಕ-ಡೀಸಲ್ ಸಾಮಾನ್ಯ ಡೀಸಲ್‌ನೊಂದಿಗೆ ಮಿಶ್ರಣ ಮಾಡಿದಾಗಲೂ ದಹಿಸುವ ಗುಣವನ್ನು ಉತ್ತಮಗೊಳಿಸುವುದು.
- ಇದನ್ನು ಸಾಮಾನ್ಯ ಪೆಟ್ರೋಲ್-ಡೀಸಲ್‌ನಂತೆ ಶೇಖರಣೆ ಮಾಡಬಹುದಾದ್ದರಿಂದ ಬೇರೆ ರೀತಿಯ ವ್ಯವಸ್ಥೆ ಬೇಕಿರುವುದಿಲ್ಲ.

### ಜೈವಿಕ-ಡೀಸಲ್‌ನ ಪ್ರಯೋಜನಗಳು :

- ಜೈವಿಕ ಪಚನಗೊಳ್ಳಬಲ್ಲ ಹಾಗೂ ನವೀಕರಿಸಬಹುದಾದ ಸ್ವಭಾವ ಇರುವ ಜೈವಿಕ-ಡೀಸಲ್, ಪರಿಸರ ಸಂರಕ್ಷಣೆ ದೃಷ್ಟಿಯಿಂದ ಉತ್ಕೃಷ್ಟವಾದ ಇಂಧನವಾಗಿರುತ್ತದೆ.
- ಸೀಸ ಹಾಗೂ ಗಂಧಕ ಹೊರ ಸೂಸುವಿಕೆ ಇರುವುದಿಲ್ಲ.
- ಹೈಡ್ರೋಕಾರ್ಬನ್ ಪೂರ್ಣವಾಗಿ ಉರಿಯುವುದರಿಂದ ಇದನ್ನು ಕಾರ್ಬನ್-ನ್ಯೂಟ್ರಲ್ (Carbon-Neutral) ಇಂಧನ ಎಂದು ಕರೆಯುವರು.
- ಹಾಗೆಂದರೆ ಎಣ್ಣೆ ಬೆಳೆ ಬೆಳೆಯುವಾಗ ಇಂಗಾಲವನ್ನು ಹೀರಿಕೊಂಡಿದ್ದು ಅದು ಈಗ ಹೊರಬೀಳುವುದೆ ವಿನಃ ಯಾವುದೇ ಹೆಚ್ಚಿನ ಇಂಗಾಲ ಹೊರಸೂಸುವುದಿಲ್ಲ.
- ಉದ್ಯೋಗದ ಅವಕಾಶಗಳನ್ನು ನಿರ್ಮಿಸುತ್ತದೆ.
- ಜೈವಿಕ ಇಂಧನದ ನೆಡುತೋಪುಗಳಿಂದಾಗಿ ಬಂಜರು ಭೂಮಿ ಹಸಿರಾಗುತ್ತದೆ.
- ಎಣ್ಣೆ ಹಿಂಡಿಯಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ.
- ಈ ಇಂಧನದ ಬಳಕೆಯಿಂದಾಗಿ ಕಾರ್ಬನ್ ಕ್ರೆಡಿಟ್ (CDM) ಲಾಭ ಪಡೆಯಬಹುದು.

### ದೂರದೃಷ್ಟಿ ಮತ್ತು ಗುರಿ :

ಮುಂಬರುವ ದಿನಗಳಲ್ಲಿ ಜೈವಿಕ-ಇಂಧನವನ್ನು ರಾಷ್ಟ್ರದ ಇಂಧನ ಹಾಗೂ ಸಾಗಾಣಿಕೆ ವಲಯಗಳಲ್ಲಿ ಮುಖ್ಯ ವಾಹಿನಿಯಾಗಿಸುವುದು ನೀತಿಯ ಉದ್ದೇಶವಾಗಿರುತ್ತದೆ. ಯಾವುದೇ ನಿರ್ದಿಷ್ಟ ಸಮಯದಲ್ಲಾದರೂ ಇಂಧನ ಬೇಡಿಕೆ ಪೂರೈಸಲು, ಮಾರುಕಟ್ಟೆಯಲ್ಲಿ ಕನಿಷ್ಟ ಮಟ್ಟದಲ್ಲಾದರೂ ಜೈವಿಕ ಇಂಧನವು ಸದಾ ಲಭ್ಯವಿರುವಂತೆ ಗಮನ ವಹಿಸುತ್ತಿರುವುದು.

ಕ್ರಿ.ಶ. 2017 ರ ಹೊತ್ತಿಗೆ, ಜೈವಿಕ-ಡೀಸಲ್ ಮತ್ತು ಜೈವಿಕ-ಇಥೆನಾಲ್ ಎರಡಕ್ಕೂ ಸೂಚಿತ ಗುರಿಯಾದ ಶೇ 20 ರಷ್ಟು ಜೈವಿಕ-ಇಂಧನದ ಮಿಶ್ರಣದ ಲಭ್ಯತೆಗಾಗಿ ಪ್ರಸ್ತಾಪಿಸಲಾಗಿದೆ.

### ಅನುಷ್ಠಾನ ಮತ್ತು ತಲುಪುವಿಕೆ :

- ಬಂಜರು ಭೂಮಿ, ನಾಶಗೊಂಡಿರುವ ಅರಣ್ಯ ಪ್ರದೇಶ ಮತ್ತು ಖಾದ್ಯೇತರ ಎಣ್ಣೆ ಬೀಜಗಳು : ಬಳಸುವತ್ತ ಗಮನ ಕೇಂದ್ರೀಕರಣ.
- ಸಕ್ಕರೆ ಕಾರ್ಖಾನೆಯು ಉಪ-ಉತ್ಪನ್ನವಾದ 'ಮೊಲ್ಯಾಸಸ್' ನಿಂದ ಜೈವಿಕ-ಈಥೆನಾಲ್ ಉತ್ಪಾದನೆ.
- ರೈತರಿಗೆ ಪ್ರೋತ್ಸಾಹ ಮತ್ತು ಎಣ್ಣೆ ಬೀಜಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗಧಿ.
- ಜೈವಿಕ-ಇಂಧನ ಬಳಕೆಗೆ ಉತ್ತೇಜನ, ಅಭಿವೃದ್ಧಿ ಬೆಂಬಲಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಸೂಕ್ತ ಆರ್ಥಿಕ ನೆರವು ನೀಡುವುದು.
- ವಿವಿಧ ಸ್ಥರಗಳಲ್ಲಿ ಸಂಶೋಧನೆ, ಅಭಿವೃದ್ಧಿ ಮತ್ತು ಪ್ರಾತ್ಯಕ್ಷಿಕೆಗಾಗಿ ಪ್ರೋತ್ಸಾಹ.
- ಬಿ.ಐ.ಎಸ್.ಸ್ಟ್ಯಾಂಡರ್ಡ (ಐ.ಎಸ್. -15607) ರಂತೆ, ಗುಣಮಟ್ಟವನ್ನು ನಿಗದಿ ಪಡಿಸಲಾಗಿದೆ.
- ಮುಂಬರುವ ದಿನಗಳಲ್ಲಿ ಹೊಸ ರೀತಿಯ ತಾಂತ್ರಿಕತೆಗಳು ಖಾದ್ಯೇತರ ಕಚ್ಚಾ ಪದಾರ್ಥಗಳ ಮೇಲೆ ಅವಲಂಬಿತವಾಗುವುದನ್ನು ಖಾತರಿ ಪಡಿಸುವುದರಿಂದ ಭಾರತದ ಮಟ್ಟಿಗೆ ಆಹಾರ V/S ಇಂಧನ ಅನ್ವಯಿಸುವುದಿಲ್ಲ.

### ಅಡುಗೆ ಮನೆ ತ್ಯಾಜ್ಯ ಆಧಾರಿತ ಜೈವಾನಿಲ

ಜೈವಾನಿಲ ಘಟಕವು ಜೈವಿಕವಾಗಿ ಅವನತಿಯಾಗುವ ತ್ಯಾಜ್ಯಗಳಾದ ಅಡುಗೆ ತ್ಯಾಜ್ಯ, ಕಾಗದ, ಹುಲ್ಲು, ಸೆಗಣಿ, ಹಿಂಡಿ ಹಾಗೂ ಒಣ/ಹಸಿ ಎಲೆಗಳನ್ನು ಸಂಸ್ಕರಿಸಬಲ್ಲದು. ಇದರಿಂದಾಗಿ ಯಾವುದೇ ಕಸ ಉಳಿಯದೆ ಸಂಪೂರ್ಣ ಸಂಸ್ಕರಣವಾಗುವುದು ಹಾಗೂ ಅಧಿಕ ಗುಣಮಟ್ಟದ ಗೊಬ್ಬರ ಮತ್ತು ಮಿಥೇನ್ ಅನಿಲವನ್ನು ಒದಗಿಸುತ್ತದೆ. ಅಂತಹ ತ್ಯಾಜ್ಯಗಳಿಂದ ಉತ್ಪಾದಿತ ಕಸ ರಹಿತ ಗೊಬ್ಬರವು ಅಧಿಕ ಸಾರಜನಕ ಅಂಶಗಳನ್ನು ಒಳಗೊಂಡಿರುತ್ತದೆ ಮತ್ತು ಉತ್ಕೃಷ್ಟ ಗುಣಮಟ್ಟದ ಮಣ್ಣು ಉಂಟಾಗುತ್ತದೆ. ಅಡುಗೆ ಮನೆ, ದೊಡ್ಡ ದೊಡ್ಡ ಆಸ್ಪತ್ರೆ, ಕ್ಯಾಂಟೀನ್‌ಗಳು, ಹೋಟೇಲ್ಸ್, ಕೈಗಾರಿಕೆಗಳು, ವಾಸ-ಸಮುಚ್ಛಯಗಳಲ್ಲಿ ಉತ್ಪಾದಿತವಾಗುವ ಹಸಿ-ತ್ಯಾಜ್ಯಗಳನ್ನು ಪರಿಸರ-ಸ್ನೇಹಿ ವಿಲೇವಾರಿ ಮಾಡುವುದಕ್ಕಾಗಿ ಈ ಘಟಕವನ್ನು ಸ್ಥಾಪಿಸಬಹುದಾಗಿದೆ.

ಈ ರೀತಿ ತ್ಯಾಜ್ಯ ಸಂಸ್ಕರಣೆ ಮಾಡುವ ತಂತ್ರಜ್ಞಾನವು ಪಟ್ಟಣ ಪ್ರದೇಶಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಸಮಸ್ಯೆಗಳನ್ನು ಬಗೆಹರಿಸುವ ಅಧಿಕ ಸಾಮರ್ಥ್ಯ ಹೊಂದಿದ ಘಟಕವಾಗಿದ್ದು. ಇದು ಸಾವಯವ ಗೊಬ್ಬರವನ್ನು ಒದಗಿಸುತ್ತದೆ ಮತ್ತು ಇಂಧನವಾಗಿ ಜೈವಾನಿಲವನ್ನು ಒದಗಿಸುತ್ತದೆ.

ವಿಶ್ವದಾದ್ಯಂತ ಎದುರಿಸುತ್ತಿರುವ ಬೃಹತ್ ಸಮಸ್ಯೆಗಳಲ್ಲಿ ತ್ಯಾಜ್ಯ ವಿಲೇವಾರಿಯುದೂ ಸಹ ಒಂದು ಬೃಹತ್ ಸಮಸ್ಯೆಯಾಗಿದೆ. ಪ್ರಕೃತಿಯ ಸಂರಕ್ಷಣೆಗಾಗಿ ಇರಬೇಕಾದ ಅತಿ ಪ್ರಮುಖವಾದ ಕಾನೂನೆಂದರೆ ಸಂರಕ್ಷಣಾ ಕಾನೂನು ಈ ಕಾನೂನಿನ ಪ್ರಕಾರ ತ್ಯಾಜ್ಯ ಒಂದು ಸಮಸ್ಯೆಯೇ ಅಲ್ಲ. ಈಗ ಇರುವ ಹಲವಾರು ಸಮಸ್ಯಾ ವೃತ್ತದ ಒಂದು ಭಾಗವಷ್ಟೆ.

ನಮ್ಮ ದೇಶದಲ್ಲಿ ದಿನಂಪ್ರತಿ ಪ್ರತಿ ಒಬ್ಬ ಮನುಷ್ಯನಿಂದ ಸುಮಾರು 300 ಗ್ರಾಂ.. ನಿಂದ 500 ಗ್ರಾಂ.. ತ್ಯಾಜ್ಯವು ಉತ್ಪಾದಿತವಾಗುತ್ತದೆ. ಈ ಬೃಹತ್ ಪ್ರಮಾಣದ ತ್ಯಾಜ್ಯದ ಬಗ್ಗೆ ಎಚ್ಚರಿಕೆಯಿಂದ ವಿಶ್ಲೇಷಿಸಿದರೆ, ಲೋಹ ಮತ್ತು ಕಾಗದದಂತಹ ತ್ಯಾಜ್ಯಗಳಿಂದ ಪುನರ್-ಉತ್ಪಾದನೆ ಸಾಧ್ಯವಿದೆ. ಜೈವಿಕ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದರೆ ಪ್ರಾಕೃತಿಕ ಸಮತೋಲನವನ್ನು ಕಾಪಾಡಿಕೊಳ್ಳಬಹುದು. ಈ ಮೂಲಕ ಪ್ರಕೃತಿಯಿಂದ ಹೆಚ್ಚಿನ ಕೊಡುಗೆಯನ್ನು ನಿರೀಕ್ಷಿಸಬಹುದಾಗಿದೆ.

ಜೈವಿಕವಾಗಿ ನಾಶಹೊಂದಿದಂತಹ ತ್ಯಾಜ್ಯಗಳ ವಿಲೇವಾರಿಯನ್ನು ದಹನಗೊಳಿಸುವುದು, ಗುಂಡಿಗೆ ತುಂಬುವುದು, ಸಮುದ್ರಕ್ಕೆ ಎಸೆಯುವುದು ಅಥವಾ ಇತರೆ ನೀರಿನ ಮೂಲಗಳಿಗೆ ಬಿಸಾಡುವುದು. ಈ ತರಹದ ವಿಧಾನಗಳಿಂದ ಮಾಡಬಹುದು ಸದರಿ ವಿಧಾನಗಳು ತಮ್ಮದೇ ಆದ ಅಪಾಯವನ್ನು ಹೊಂದಿವೆ. ದಹನಗೊಳಿಸುವಿಕೆಯು ಉಸಿರಾಡದ ಖಾಯಿಲೆಗೆ ದಾರಿ ಮಾಡಿಕೊಡುವುದು. ಈ ರೀತಿ ಅಪಾಯುಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಹಲವು ವಿಧಾನಗಳನ್ನು ಅನುಸರಿಸಲಾಗಿದೆ. ಅಂತಹ ಒಂದು ವಿಧಾನವೆಂದರೆ ARTI ಮಾದರಿಯ ಒಂದು ಜೈವಾನಿಲ ಘಟಕ. ಇದು ನಿರ್ವಹಣೆ ಮತ್ತು ಬಳಕೆ ವಿಷಯದಲ್ಲಿ ತುಂಬಾ ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿರುವುದು ದೃಢಪಟ್ಟಿದೆ. ಇದಕ್ಕೆ ಮುಖ್ಯವಾಗಿ ಅಡುಗೆ ತ್ಯಾಜ್ಯವು ಕಚ್ಚಾ ಸಾಮಗ್ರಿಯಾಗಿ ಅವಶ್ಯವಿದ್ದು, ಈ ಘಟಕವನ್ನು ಪಟ್ಟಣ ಪ್ರದೇಶ/ ಕಲ್ಯಾಣಮಂಟಪಗಳು/ ಮನೆಗಳು/ ಅಪಾರ್ಟ್‌ಮೆಂಟ್‌ಗಳು ಮತ್ತು ಫಾರ್ಮ್ ಹೌಸ್‌ಗಳಲ್ಲಿ ಸ್ಥಾಪಿಸಬಹುದಾಗಿದೆ. ಯಂತ್ರರಚನೆ ಸರಳವಾಗಿದ್ದು ನಿರ್ವಹಣೆಯೂ ಸರಳ. ಒಂದೇ ಮಾತಿನಲ್ಲಿ ಹೇಳುವುದಾದರೆ ಯಂತ್ರ ಚಾಲನೆಯಲ್ಲಿ ಯಾವುದೇ ಅಡೆ-ತಡೆ ಇರುವುದಿಲ್ಲ.

ಈ ಜೈವಾನಿಲ ಘಟಕದಲ್ಲಿ ಬ್ಯಾಕ್ಟೀರಿಯಾ ಸಹಾಯದೊಂದಿಗೆ ಏರ್‌ಟೈಟ್ ಟ್ಯಾಂಕಿನಲ್ಲಿ ಸಾವಯುವ ಪದಾರ್ಥಗಳನ್ನು/ತ್ಯಾಜ್ಯಗಳನ್ನು ಜೈವಾನಿಲ ಆಗಿ ವಿಘಟಿಸಬಹುದು. ಸಂಸ್ಕರಣಾ ಸಮಯದಲ್ಲಿ ಉತ್ಪಾದಿತ ಅನಿಲವು ಪ್ರಧಾನವಾಗಿ ಇಂಗಾಲದ-ಡೈ-ಆಕ್ಸೈಡ್ ಮಿಶ್ರಿತ ಆಗಿರುತ್ತದೆ ಮತ್ತು ಇದನ್ನು ಇನ್ನಿತರ ಉದ್ದೇಶಗಳಿಗಾಗಿ ಬಳಸಬಹುದು. ನಂತರ ಉಳಿಕೆಯಾಗುವ ಘನ ಶೇಷವನ್ನು ಸಾವಯುವ ಗೊಬ್ಬರವಾಗಿ ಬಳಸಬಹುದು.



## ಮಹಾತ್ಮಗಾಂಧಿ ಸಂಸ್ಥೆಯಲ್ಲಿರವ ಅಡುಗೆ ತ್ಯಾಜ್ಯ ಆಧಾರಿತ ಜೈವಾನಿಲ ಘಟಕ

ನಮ್ಮ ಮಹಾತ್ಮಗಾಂಧಿ ಸಂಸ್ಥೆಯಲ್ಲಿ ಅಡುಗೆ ತ್ಯಾಜ್ಯ ಆಧಾರಿತ ಜೈವಾನಿಲ ಘಟಕವು ಯಾವುದೇ ಹೊಗೆ ಅಥವಾ ಮಸಿಯನ್ನು ಉತ್ಪಾದಿಸದೆ ಮಿಥೇನ್ ನೀಲಿ ಜ್ವಾಲೆಯಾಗಿ ಉರಿಯುತ್ತದೆ. ಹೀಗಾಗಿ ಇದೊಂದು ಪರಿಸರ-ಸ್ನೇಹಿ ಅಡುಗೆ ವ್ಯವಸ್ಥೆ. ಹೀಗೆ ಇದು ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ಸಂಸಾರಗಳು ಹಸಿ ತ್ಯಾಜ್ಯ ಬಳಕೆ ಮಾಡಲು ಉಪಯೋಗಿ ಮಾತ್ರವಲ್ಲ : ಕಟ್ಟಿಗೆ ಉರಿಸುವುದ ರಿಂದ ಹೊರಹೊಮ್ಮುವ ಹೊಗೆ/ಕಪ್ಪು ಕಣ/ಧೊಳು ಇತ್ಯಾದಿ....ಗಳಿಂದ ಉಂಟಾಗುವ ರೋಗಗಳನ್ನು ತಡೆಗಟ್ಟಲೂ ಸಹ ಉಪಯೋಗಿಯಾಗಿದೆ. ಮುಂದುವರಿದಂತೆ ಮಾಲಿನ್ಯ ಕಡಿತ ಮತ್ತು ಇಂಧನ ಕ್ಷಮತೆ ಸಾಧ್ಯ. ಪಳೆಯುಳಿಕೆ ಇಂಧನಗಳ ಬದಲಾಗಿ ಉಪಯೋಗಿತ ಈ ವ್ಯವಸ್ಥೆಯಿಂದಾಗಿ ಹಸಿರುಮನೆ ಇಂಧನಗಳ ಹೊರ ಸೂಸುವಿಕೆ ಕಡಿತವಾಗುತ್ತದೆ. ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿನ ಅಂದಾಜಿನಂತೆ ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ಮನೆಗಳಲ್ಲಿ ಉತ್ಪಾದಿತ ಜೈವಾನಿಲವು 100 ಕಿ.ಗ್ರಾಂ. ನಷ್ಟು ಎಲ್.ಪಿ.ಜಿ ಅಥವಾ 250 ಲೀ.,ನಷ್ಟು ಸೀಮೆಎಣ್ಣೆಯನ್ನು ಪ್ರತಿ ವರ್ಷ ಉಳಿಸುತ್ತದೆ. ಇದು ವಾರ್ಷಿಕ 300 ಕಿ.ಗ್ರಾಂ.ನಿಂದ 600 ಕಿ.ಗ್ರಾಂ.ನಷ್ಟು ಇಂಗಾಲದ ಡೈ ಆಕ್ಸೈಡ್‌ಗೆ ಸರಿಸಮವಾಗುತ್ತದೆ. ಗ್ರಾಮೀಣ ಸಂಸಾರಗಳು ಪ್ರತಿ ವರ್ಷ 3 ಟನ್ನಷ್ಟು ಕಟ್ಟಿಗೆಯನ್ನು ಉಳಿಸಬಲ್ಲದಾಗಿದ್ದು, ಈ 3 ಟನ್ ಕಟ್ಟಿಗೆ ಉರಿದರೆ ಸುಮಾರು 5ಟನ್ನಷ್ಟು ಇಂಗಾಲದ-ಡೈ-ಆಕ್ಸೈಡ್ ಉತ್ಪಾದಿತವಾಗುತ್ತದೆ.

## ಇದು ಹೇಗೆ ಕೆಲಸ ಮಾಡುತ್ತದೆ?

ಈ ಚಿಕ್ಕ ಚೊಕ್ಕದಾದ ಘಟಕವನ್ನು ಅಧಿಕ ಸಾಂದ್ರತೆಯುಳ್ಳ ಪಾಲಿಥಿನ್ ವಾಟರ್ ಟ್ಯಾಂಕುಗಳಿಂದ ನಿರ್ಮಿಸಲಾಗಿದೆ. ಈ ಮಾದರಿ ಘಟಕವು 2 ಟ್ಯಾಂಕುಗಳನ್ನು ಹೊಂದಿದ್ದು. 0.75 M3 ಮತ್ತು 1M3 ಘನವುಳ್ಳದ್ದಾಗಿದೆ. ಚಿಕ್ಕ ಟ್ಯಾಂಕು ಗ್ಯಾಸ್ ಹೋಲ್ಡರ್ ಆಗಿದೆ ಮತ್ತು ಇದನ್ನು ದೊಡ್ಡ ಹೋಲ್ಡರ್ ಮೇಲೆ ಬೋರಲು ಹಾಕಲಾಗಿದೆ. ದೊಡ್ಡ ಟ್ಯಾಂಕು ವಿಘಟತಗೊಳ್ಳಬಲ್ಲ ಕಚ್ಚಾ ಮಿಶ್ರಣ ಮತ್ತು ನೀರು (ಸ್ಲರಿ) ಹೊಂದಿರುತ್ತದೆ. ಕಚ್ಚಾ ಸಾಮಾಗ್ರಿ ದೂಡಲು ಒಂದು ಒಳಮಾರ್ಗವನ್ನು ಒದಗಿಸಲಾಗಿದೆ ಮತ್ತು ಹೆಚ್ಚುವರಿ ಮಿಶ್ರಣವನ್ನು ಘಟಕದೊಳಗೆ ಪುನರ್ ದೂಡಲಾಗುವುದು. ಅನಿಲ ಉತ್ಪಾದಿತವಾದಂತೆಲ್ಲಾ ಗ್ಯಾಸ್ ಹೋಲ್ಡರ್ ಕ್ರಮೇಣ ಉಬ್ಬುವುದು ಮತ್ತು ಅನಿಲ ಉಪಯೋಗಿಸಿದಂತೆಲ್ಲಾ ಹೋಲ್ಡರ್ ತಗ್ಗುವುದು. ಅನಿಲ ಭಾರವನ್ನು ಹೆಚ್ಚಿಸಲು ಗ್ಯಾಸ್ ಹೋಲ್ಡರ್ ಮೇಲೆ ಭಾರವನ್ನು ಇಡಲಾಗುವುದು.

| ಸಾಂಪ್ರದಾಯಿಂಕ ಜೈವಾನಿಲ ಅಡುಗೆ ತ್ಯಾಜ್ಯ ಜೈವಾನಿಲ ಘಟಕದೊಂದಿಗೆ ಹೋಲಿಕೆ | ಸಾಂಪ್ರಾದಾಯಿಕ ಜೈವಾನಿಲ ವ್ಯವಸ್ಥೆ | ಅಡುಗೆ ತ್ಯಾಜ್ಯ ಜೈವಾನಿಲ ವ್ಯವಸ್ಥೆ |
|---|---|---|
| ಅಗತ್ಯವಿರುವ ಕಚ್ಚಾ ಪದಾರ್ಥಗಳ ಪ್ರಮಾಣ | 40 ಕಿ.ಗ್ರಾಂ ಸೆಗಣಿ + 40ಲೀ.,ನೀರು | 1-1.5 ಕಿ.ಗ್ರಾಂ.+15ಲೀ.ನೀರು |
| ವಿಲೇವಾರಿಗೊಳಿಸಬೇಕಾದ ಸ್ಲರಿ ಪ್ರಮಾಣ ಮತ್ತು ಸಹಜಗುಣ | 80 ಲೀ.,ಸ್ಲಡ್ಜ್ | 15ಲೀ., ನೀರು |
| ಕಚ್ಚಾ ಸಾಮಗ್ರಿಯ ಪೂರ್ಣ ಬಳಕೆಗಾಗಿ ಪ್ರತಿಕ್ರಿಯಾ ಸಮಯ | 40 ದಿನಗಳು | 48 ಗಂಟೆಗಳು |
| ಮನೆ ಬಳಕೆಗೆ ಮಾದರಿ ಅಳತೆ | 4000ಲೀ., | 1000-1500 ಲೀ., |

ಅಡುಗೆ ತ್ಯಾಜ್ಯ ಜೈವಾನಿಲ-ವ್ಯವಸ್ಥೆಯಲ್ಲಿ, 1.5 ಕಿ.ಗ್ರಾಂ., ಕಚ್ಚಾ ಸಾಮಗ್ರಿಯು ಸುಮಾರು 500 ಗ್ರಾಂನಷ್ಟು ಮಿಥೇನ್ ಉತ್ಪಾದಿತವಾಗುವುದು ಮತ್ತು ಪ್ರತಿಕ್ರಿಯೆಯು 48 ಗಂಟೆಗಳಲ್ಲಿ ಮುಕ್ತಾಯವಾಗುವುದು. ಸಾಂಪ್ರದಾಯಕ ಜೈವಾನಿಲ ವ್ಯವಸ್ಥೆಯಲ್ಲಿ ದನಕರುಗಳ ಗೊಬ್ಬರ ಅಥವಾ ಮಾನವ ವಿಸರ್ಜಿತವನ್ನು ಉಪಯೋಗಿಸಲಾಗುವುದು ಮತ್ತು ಅಷ್ಟೇ ಪ್ರಮಾಣದ ಮಿಥೇನ್ ಉತ್ಪಾದಿಸಲು 40 ಕಿ.ಗ್ರಾಂ., ನಷ್ಟು ಕಚ್ಚಾ ಸಾಮಗ್ರಿ ಬೇಕಾಗುವುದು.

ಸಾಂಪ್ರದಾಯಕ ಜೈವಾನಿಲ ವ್ಯವಸ್ಥೆಯಲ್ಲಿ ಪ್ರತಿಕ್ರಿಯಾ ಅವಧಿಯು 40 ದಿನಗಳು.ಹೀಗೆ ಅಡುಗೆ ತ್ಯಾಜ್ಯ ಜೈವಾನಿಲ ವ್ಯವಸ್ಥೆಯು ಸಾಂಪ್ರದಾಯಕ ಜೈವಾನಿಲ ವ್ಯವಸ್ಥೆ ಪ್ರಕ್ರಿಯೆಗಿಂತ 800 ಪಟ್ಟು ಅಧಿಕ ಸಾಮರ್ಥ್ಯದ್ದಾಗಿದೆ.

ಕಚ್ಚಾ ಸಾಮಗ್ರಿಗಳು: ತ್ಯಾಜ್ಯ ಹಿಟ್ಟು, ತರಕಾರಿ ತ್ಯಾಜ್ಯಗಳು, ತ್ಯಾಜ್ಯ ಆಹಾರ, ಕೊಳೆತ ಹಣ್ಣುಗಳು, ಬಿಸಾಡಿದ ಆಹಾರ ಪದಾರ್ಥಗಳು ಒಳಗೊಂಡಂತೆ ಹೆಚ್ಚಿನ ಅಡುಗೆ ತ್ಯಾಜ್ಯಗಳನ್ನು ಚೆನ್ನಾಗಿ ಕೊಳೆಯಲು ಬಿಡಲಾಗುವುದು. ಹುಳಿ ಹಣ್ಣು ಹಾಗೂ ಆಹಾರ ಪದಾರ್ಥವನ್ನು ಹಾಕಬಾರದು.

## ಪ್ರಯೋಜನಗಳು:

ಜೈವಾನಿಲ ಘಟಕವು ಅನೇಕ ಉದ್ದೇಶ್ಯಗಳನ್ನು ಪೂರೈಸುವುದಾಗಿದ್ದು ಅವೆಂದರೆ,

1. ತ್ಯಾಜ್ಯವನ್ನು ಪರಿಸರ-ಸ್ನೇಹಿಯಾಗಿ ವಿಲೇವಾರಿ ಮಾಡುತ್ತದೆ.
2. ಒಳ್ಳೆಯ ಜೈವಾನಿಲ ಉತ್ಪಾದನೆ ಮಾಡಬಲ್ಲುದು, ಇದು ಇಂಧನ ಸಂಪನ್ಮೂಲ ಉತ್ಪಾದನೆಗೆ ಬೆಂಬಲಿಸುವುದು.
3. ಅಧಿಕ ಗುಣಮಟ್ಟದ ಗೊಬ್ಬರ ಉತ್ಪಾದನೆ. ಅದು ಕಳೆಯಿಂದ ಹೊರತಾಗಿದ್ದು ಮಣ್ಣಿಗೆ ಸಾರಭರಿತ ಗೊಬ್ಬರವಾಗುವುದು.
4. ಕಸದ ತೊಟ್ಟಿಯಲ್ಲಿ ಇರುವ ತ್ಯಾಜ್ಯ ವಸ್ತುಗಳಿಂದ ಬೀದಿನಾಯಿಗಳ ಹಾಗೂ ಇನ್ನಿತರ ಪ್ರಾಣಿಗಳ ಹಾವಳಿ ಕಡಿಮೆಯಾಗುವುದು.
5. ಜೈವಾನಿಲವು ಬಣ್ಣರಹಿತ, ವಾಸನೆ ರಹಿತ ಮತ್ತು ದಹನಗೊಳ್ಳಬಲ್ಲ ಅನಿಲವಾಗಿದೆ. ಈ ಘಟಕದಲ್ಲಿ ಉತ್ಪಾದಿತ ಅನಿಲವನ್ನು ಸ್ವಾಭಾವಿಕ ಅನಿಲವಾಗಿ ಬಳಸಬಹುದು.ಜೈವಾನಿಲ ಘಟಕಗಳೆಂದರೆ,

| | | |
|---|---|---|
| ಮಿಥೇನ್ (CH4) | : | 70-75% |
| ಇಂಗಾಲದ ಡೈ ಆಕ್ಸೈಡ್ | : | 10-15% |
| ನೀರಿನ ಆವಿ | : | 5-10% |

## ಎಲ್ಲೆಲ್ಲಿ ಅನ್ವಯಿಸುವುದು:

ಜೈವಾನಿಲ ಘಟಕದಲ್ಲಿ ತ್ಯಾಜ್ಯಗಳನ್ನು ಸಂಸ್ಕರಿಸಬಹುದಾಗಿದೆ. ಆ ತ್ಯಾಜ್ಯಗಳೆಂದರೆ ಜೈವಿಕ-ನಾಶಹೊಂದಬಲ್ಲ ಅಡುಗೆ ತ್ಯಾಜ್ಯ, ನಿರುಪಯೋಗಿ ಕಾಗದ, ಹಸಿರು-ಹುಲ್ಲು, ಕಸ-ಕಡ್ಡಿ, ಆಸ್ಪತ್ರೆ ತ್ಯಾಜ್ಯಗಳು, ಹಸಿರು ಗಿಡ ಮರಗಳ ತ್ಯಾಜ್ಯ, ಸೆಗಣಿ, ಉಳಿಕೆ ದವಸ ಧಾನ್ಯ, ಕಬ್ಬು ಇತ್ಯಾದಿ....

ಪೌರಾಡಳಿತ ನಿಗಮಗಳು,ಆಸ್ಪತ್ರೆಗಳು, ಹೋಟೆಲ್ಸ್, ಗೃಹ-ಸಂಸ್ಥೆಗಳು, ಸರ್ಕಾರಿ ಸಂಘ ಸಂಸ್ಥೆಗಳು, ನಗರಪಾಲಿಕೆಗಳು, ಗ್ರಾಮ ಪಂಚಾಯತಿಗಳು. ಫಾರ್ಮ ಹೌಸ್‌ಗಳು ಮುಂತಾದೆಡೆ ಉಪಯುಕ್ತ.

ಪ್ರತಿ ದಿನವೂ ಉತ್ಪತ್ತಿಯಾಗುವ ಅಪಾರ ಮೊತ್ತದ ಜೈವಿಕ ಅವನತಿ ಹೊಂದಬಲ್ಲಂತಹ ತ್ಯಾಜ್ಯಗಳ ನಿರ್ವಹಣೆಯನ್ನು ಮಾಡಬೇಕಾದ ನಿರ್ದಿಷ್ಟವಾದ ಅಗತ್ಯತೆ ಇದೆ. ಹೀಗೆ ಅಡುಗೆ ಮನೆಯಲ್ಲಿ ಉತ್ಪಾದಿತವಾಗುವ ತ್ಯಾಜ್ಯ ಪದಾರ್ಥಗಳನ್ನು ಮಾರ್ಪಾಟಿತ ಜೈವಾನಿಲ ಘಟಕದಲ್ಲಿ ಸಂಸ್ಕರಿಸಬಹುದಾಗಿದೆ.

## ಮುನ್ನೆಚ್ಚರಿಕೆ:

ಜೈವಾನಿಲ ಘಟಕವು ಆಮ್ಲಯುಕ್ತಗೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಇದಕ್ಕೆ ಅತೀ ಹೆಚ್ಚು ಕಚ್ಚಾ ಸಾಮಗ್ರಿಯನ್ನು ದೂಡಿದರೆ ಘಟಕದ ಕಾರ್ಯ ನಿರ್ವಹಣಾ ಸಾಮರ್ಥ್ಯವು ತಗ್ಗುವುದು. ❑




# ವಿಪತ್ತು ನಿರ್ವಹಣಾ ವ್ಯವಸ್ಥೆ ಮತ್ತು ಸಮುದಾಯದ ಸಹಭಾಗಿತ್ವ




**ಪ್ರೊ. ಎ.ಎಚ್. ಮಾಸಾಪತಿ** *

**ಮೊಬೈಲ್ : 93435 35229**


ಕಳೆದ 20 ವರ್ಷಗಳಲ್ಲಿ, ಸುಮಾರು 5 ಭೂಕಂಪಗಳು ಭಾರತದ ಸಾರ್ವಜನಿಕ ಜೀವನದ ಮೇಲೆ ದುಷ್ಪರಿಣಾಮ ಬೀರಿವೆ. ಇತ್ತೀಚೆಗಿನ ಒಂದು ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ಶೇಕಡಾ 60ರಷ್ಟು ಭಾಗದಲ್ಲಿ ಭೂಕಂಪದಿಂದ ಗಂಡಾಂತರ ಉಂಟಾಗುವ ಸಾಧ್ಯತೆ ಇದೆ.

ಸಮಗ್ರ ಜಗತ್ತಿನಲ್ಲಿ ಹಲವಾರು ವಿಪತ್ತುಗಳಿಗೆ ಗುರಿಯಾಗಿರುವ ರಾಷ್ಟ್ರಗಳಲ್ಲಿ, ಭಾರತವೂ ಸಹ ಒಂದಾಗಿದೆ. ಭಾರತದ ಈಶಾನ್ಯ ಭಾಗದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಮಳೆ ಬೀಳುತ್ತದೆ. ಆದರೆ, ವಾಯವ್ಯ ಪ್ರದೇಶದ ಥಾರ್ ಮರುಭೂಮಿಯು ಅತಿ ಕಡಿಮೆ ಮಳೆ ಬೀಳುವಂತಹ ಒಣ ಪ್ರದೇಶವಾಗಿದೆ. ಭಾರತದ ಉತ್ತರ ಗಡಿಯಲ್ಲಿ ಸಾವಿರಾರು ಕಿ.ಮೀ. ಗಳಷ್ಟು ವಿಸ್ತಾರವಾಗಿ ವ್ಯಾಪಿಸಿರುವ ಹಿಮಾಲಯ ಪರ್ವತದ ರುದ್ರ-ರಮಣೀಯ ಹಿಮಾಚ್ಛಾದಿತ ಶಿಖರಗಳು ವಿಶ್ವವಿಖ್ಯಾತವಾಗಿವೆ. ಪ್ರಖ್ಯಾತ ನದಿ/ಉಪ ನದಿಗಳು ಉದ್ಭವಿಸಿ, ಗುಡ್ಡಗಾಡು ಪ್ರದೇಶಗಳಲ್ಲಿ ಹರಿದು ಸುವಿಶಾಲವಾದ ಬಯಲು ಪ್ರದೇಶವನ್ನು ಪ್ರವೇಶಿಸುತ್ತವೆ. ಹಿಮಾಲಯದ ಅಪಾರ ಹಿಮರಾಶಿಯಿಂದ ಅತ್ಯಧಿಕ ಶೀತ ಪ್ರದೇಶ ರೂಪುಗೊಂಡಿದ್ದರೆ ವಾಯವ್ಯದ ಮರುಭೂಮಿಯಲ್ಲಿ ವಿಪರೀತ ತಾಪಮಾನವಿದೆ.

ಭಾರತದ ಭೌಗೋಳಿಕ ಪರಿಸ್ಥಿತಿ, ಮಿತಿಮೀರಿದ ಜನಸಂಖ್ಯೆ ಮತ್ತು ಹವಾಮಾನ ವೈಪರೀತ್ಯದ ದೆಸೆಯಿಂದ ಭೂ-ಕುಸಿತ, ಚಂಡಮಾರುತ, ಶೀತಗಾಳಿ, ಹಿಮಪಾತ, ಮಹಾಪೂರ, ಉಷ್ಣ-ತರಂಗ ಇತ್ಯಾದಿ ಪ್ರಾಕೃತಿಕ ವಿಕೋಪಗಳನ್ನು ಎದುರಿಸಬೇಕಾಗಿದೆ. ಭಾರತದ ಭೌಗೋಳಿಕ ವಿಸ್ತೀರ್ಣದ ಶೇಕಡಾ 4ರಷ್ಟು (ಸುಮಾರು 40 ದಶಲಕ್ಷ ಹೆಕ್ಟೇರ್) ಭಾಗವು ಮಹಾಪೂರಕ್ಕೆ ಗುರಿಯಾಗುತ್ತದೆ. 5 ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿದಂತಹ ಸುಮಾರು 35 (ಮೂವತ್ತೈದು) ಮಹಾನಗರಗಳು, ಭೂಕಂಪ ವಲಯದ 4 ಹಾಗೂ 5ನೇ ವಿಭಾಗದಲ್ಲಿವೆ. ರಿಕ್ಟರ್ ಮಾಪಕದ 6 ಅಂಶಕ್ಕೂ ಹೆಚ್ಚುವರಿಯಾದ ಶೀಘ್ರ ಸ್ವರೂಪದ ಭೂಕಂಪನಕ್ಕೆ ಬಲಿಯಾಗುವ ಸಂಭವವಿದೆ.

ವಿಶ್ವಬ್ಯಾಂಕ್ ಅಧ್ಯಯನದ ಪ್ರಕಾರ, ಶೇಕಡಾ 97ರಷ್ಟು ವಿಪತ್ತು ಸಂಬಂಧಿತ ಮರಣಗಳು, ಹಿಂದುಳಿದ ರಾಷ್ಟ್ರಗಳಲ್ಲಿ ಸಂಭವಿಸುತ್ತವೆ. ವಿಶ್ವದ ಬಡಜನರ ಪೈಕಿ ಶೇಕಡಾ 63ರಷ್ಟು ಏಷ್ಯಾ ಪೆಸಿಫಿಕ್ ಪ್ರದೇಶದ ಬಡವರು ವಿವಿಧ ಪ್ರಕಾರದ ಪ್ರಾಕೃತಿಕ ಹಾಗೂ ಮಾನವಕೃತ ದುರಂತಗಳಿಗೆ ಗುರಿಯಾಗುತ್ತಾರೆ. ಪ್ರತಿ ವರ್ಷ ನೈಸರ್ಗಿಕ ವಿಕೋಪದಿಂದ ಲಕ್ಷಾಂತರ ಜನರ ಪ್ರಾಣಹರಣವಾಗುವುದರ ಜೊತೆಗೆ ಸ್ಥಿರಾಸ್ತಿ, ಮೂಲ ಸೌಕರ್ಯ ಮತ್ತು ಇತರ ಸ್ವತ್ತುಗಳಿಗೆ ಅಪಾರ ನಷ್ಟ ಉಂಟಾಗುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಅಭಿವೃದ್ಧಿ ಕಾರ್ಯಕ್ರಮದ ವರದಿಯ (UNDP, 2004) ಮೇರೆಗೆ 1960ರ ದಶಕದಲ್ಲಿ ವಾಸ್ತವಿಕವಾದ ವಾರ್ಷಿಕ ಹಾನಿಯು ಅಂದಾಜು 75.5 ಶತಕೋಟಿ ಡಾಲರ್‌ಗಳಾಷ್ಟಾಗಿದ್ದರೆ, 1970ರ ದಶಕದಲ್ಲಿ 138.4 ಶತಕೋಟಿ


* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು-560 032.

ಡಾಲರ್‌ಗಳು, 1980ರ ದಶಕದಲ್ಲಿ 213.9 ಶತಕೋಟಿ ಡಾಲರ್‌ಗಳು ಹಾಗೂ 1990ರ ದಶಕದಲ್ಲಿ 659.9 ಶತಕೋಟಿ ಡಾಲರ್‌ಗಳಷ್ಟಾಗಿದೆ.

ಆಧುನಿಕ ಜಗತ್ತು ಅನಿಶ್ಚಿತತೆ/ಆತಂಕಗಳಿಂದ ಆವೃತವಾಗಿದೆ. ಪ್ರಾಕೃತಿಕ ಮತ್ತು ಮಾನವ ಕೃತ ವಿಪತ್ತುಗಳು ಯೋಜನಾಬದ್ಧ ಅಭಿವೃದ್ಧಿಗೆ ವಿಪರೀತ ಹಿನ್ನಡೆಯನ್ನುಂಟುಮಾಡಿವೆ. ನೆರೆ ಹೊರೆಯ ದೇಶಗಳ ವಿಶ್ವಾಸ ಘಾತುಕ ಕೃತ್ಯಗಳಿಂದ ಭಾರತದ ಅಮೌಲ್ಯ ಸಂಪನ್ಮೂಲಗಳು ನಾಶವಾಗುತ್ತವೆ. ಗಡಿಯಾಚೆಗಿನ ಭಯೋತ್ಪಾದಕ ಚಟುವಟಿಕೆಗಳು ರಾಷ್ಟ್ರದ ಸಾಮಾಜಿಕ/ಆರ್ಥಿಕ ವ್ಯವಸ್ಥೆಗೆ ಮಾರಕವಾಗಿವೆ. ಇಂತಹ ವಿಭಿನ್ನ ಪ್ರಕಾರದ ವಿಪತ್ತುಗಳನ್ನು ನಿರ್ವಹಿಸಲು ಸರ್ಕಾರದ ಜೊತೆಗೆ ಸಮುದಾಯಗಳ ಸಹಭಾಗಿತ್ವ ಅಗತ್ಯವಾಗಿದೆ.

## ಪ್ರಾಕೃತಿಕ ವಿಕೋಪ

ಇತ್ತೀಚೆಗಿನ ವರ್ಷಗಳಲ್ಲಿ ಪ್ರಾಕೃತಿಕ ವಿಕೋಪ ಮತ್ತು ಸಂತ್ರಸ್ತರ ಸಂಖ್ಯೆಯು ಹೆಚ್ಚುತ್ತಿರುವ ಸಂಗತಿಯು ಸ್ಪಷ್ಟವಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ಅಭಿವೃದ್ಧಿ ಕಾರ್ಯಕ್ರಮ (UNDP) ಯ ಸಮೀಕ್ಷೆಯ ಮೇರೆಗೆ, 1980 ರಿಂದ 2000 ಅವಧಿಯಲ್ಲಿ ಜಗತ್ತಿನ ಶೇಕಡಾ 75ರಷ್ಟು ಜನರು ಭೂಕಂಪ, ಬಿರುಗಾಳಿ, ಮಹಾಪೂರ ಅಥವಾ ಬರಗಾಲ ಪೀಡಿತ ಪ್ರದೇಶಗಳಲ್ಲಿ ವಾಸಿಸುತ್ತಾರೆ. 2006ರಲ್ಲಿ ಸುಮಾರು 426 ವಿಪತ್ತುಗಳಿಂದ 108 ರಾಷ್ಟ್ರಗಳಲ್ಲಿ 143 ದಶಲಕ್ಷ ಜನರು ಸಂಕಟಗ್ರಸ್ತರಾಗಿದ್ದಾರೆ. ಮತ್ತು 34.6 ಶತಕೋಟಿ ಡಾಲರ್‌ಗಳಷ್ಟು ಆರ್ಥಿಕ ನಷ್ಟ ಸಂಭವಿಸಿದೆ. 2008ರಲ್ಲಿ ಸಂಭವಿಸಿದ 300ಕ್ಕೂ ಹೆಚ್ಚಿನ ವಿಕೋಪಗಳಲ್ಲಿ ಎರಡು ಲಕ್ಷ ಮೂವತ್ತೈದು ಸಾವಿರ ಜನರು ಮರಣ ಹೊಂದಿದ್ದು, 200 ದಶಲಕ್ಷ ಜನರು ಸಂತ್ರಸ್ತರಾಗಿದ್ದಾರೆ. 2008ರಲ್ಲಿ ಸಂಭವಿಸಿದ ಅತ್ಯಂತ ಆತಂಕಕಾರಿ ವಿಕೋಪಗಳೆಂದರೆ : ಚೀನಾದ ಭೂಕಂಪ ಹಾಗೂ ಮಾನ್ಮಾರ್‌ದ ಚಂಡಮಾರುತ. ಆನಂತರದ 2 ಅಥವಾ 3 ವರ್ಷಗಳಲ್ಲಿ ಸಂಭವಿಸಿದ ದೈತ್ಯಾಕಾರದ ಸಮುದ್ರ ಅಲೆಗಳು ಹಾಗೂ ಜಪಾನಿನ ಭೂಕಂಪ ಇತ್ಯಾದಿ ದುರಂತಗಳು.

ನೈಸರ್ಗಿಕ ವಿಕೋಪದಿಂದ ರಾಷ್ಟ್ರದ ಸಂಪನ್ಮೂಲಗಳ ಮೇಲೆ ವಿಪರೀತ ಭಾರ ಬೀಳುತ್ತದೆ. ಪ್ರತಿ ವರ್ಷ ಸುಮಾರು 3450 ಜನರು ಮತ್ತು 40,000 ಪ್ರಾಣಿಗಳ ಮರಣ, 25 ಲಕ್ಷ ಮನೆಗಳು ನೆಲ ಸಮ ಹಾಗೂ ಮೂಲ ಸೌಕರ್ಯಗಳಿಗೆ ಸಂಭವಿಸುವ ಅಪಾರ ಹಾನಿಯ ಮೌಲ್ಯಮಾಪನವು ಕಷ್ಟಸಾಧ್ಯವಾಗಿದೆ. ಬೃಹದ್ ಪ್ರಮಾಣದ ಜೀವ ಹಾಗೂ ಸಂಪತ್ತಿನ ನಷ್ಟವು ಒಟ್ಟು ದೇಶೀಯ ಉತ್ಪನ್ನದ ಶೇಕಡಾ 2.25 ರಷ್ಟೆಂದು ಅಂದಾಜು ಮಾಡಲಾಗಿದೆ. ಇಂತಹ ವಿಪತ್ತುಗಳಿಂದ ಸಾರ್ವಜನಿಕರ ಜೀವನಮಟ್ಟ ಶೋಚನೀಯ ಸ್ಥಿತಿಯನ್ನು ತಲುಪಿ ರಾಷ್ಟ್ರದ ಸಾಮಾಜಿಕ/ಆರ್ಥಿಕ ಅಭಿವೃದ್ಧಿಗೆ ವಿಪರೀತ ಹಿನ್ನಡೆಯಾಗುತ್ತದೆ. ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ವಿಪತ್ತು ನಿರ್ವಹಣೆಗಾಗಿ ಬಳಕೆ ಮಾಡಬೇಕಾದಂತಹ ಅನಿವಾರ್ಯತೆ ಉಂಟಾಗುವುದು.

ಹಿಂದುಳಿದ ದೇಶಗಳಲ್ಲಿ ಪ್ರಾಕೃತಿಕ ವಿಕೋಪದಿಂದ ಸಂಭವಿಸಿದ ಆರ್ಥಿಕ ನಷ್ಟವನ್ನು ಮುಂದುವರಿದ ರಾಷ್ಟ್ರಗಳ ನೈಸರ್ಗಿಕ ವಿಪತ್ತಿನಿಂದ ಉಂಟಾದ ಹಾನಿಯೊಂದಿಗೆ ತುಲನೆ ಮಾಡಿದಾಗ ಒಟ್ಟು ದೇಶೀಯ ಉತ್ಪನ್ನದ ಶೇಕಡಾ 20ರಷ್ಟು ಏರಿಕೆ ಕಂಡುಬಂದಿದೆ. ಜಾಗತಿಕ ಬ್ಯಾಂಕಿನ ಅಂದಾಜಿನ ಪ್ರಕಾರ, ನೈಸರ್ಗಿಕ ವಿಕೋಪದಿಂದ ಸಂಭವಿಸಿದ ವಾರ್ಷಿಕ ನಷ್ಟದ ಪ್ರಮಾಣವು ವಿಕೋಪಕ್ಕೆ ಗುರಿಯಾದ ರಾಷ್ಟ್ರಗಳ ಒಟ್ಟು ದೇಶೀಯ ಉತ್ಪಾದನೆಯ ಶೇಕಡಾ 2 ರಿಂದ 15 ರಷ್ಟು ಆಗಿದೆ. 2004ರಲ್ಲಿ ಕೆರಿಬಿನ್ಸ್‌ದ ಗ್ರೆನೆಡಾ ದ್ವೀಪದಲ್ಲಿ ಸಂಭವಿಸಿದ 'ಐವಾನ್' ಬಿರುಗಾಳಿಯಿಂದ ಅಪಾರ ನಷ್ಟ ಸಂಭವಿಸಿದೆ. ಅಲ್ಲಿಯ ಆಂತರಿಕ ಉತ್ಪಾದನೆಯ ಶೇಕಡಾ 200ರಷ್ಟು ಹಾನಿ ಆಗಿದೆ.

2010ರ ಜನವರಿ ತಿಂಗಳಿನಲ್ಲಿ ಸಂಭವಿಸಿದ ಹೈಟಿ ದುರಂತದ ದೃಶ್ಯಗಳು ಭಯಾನಕವಾಗಿವೆ. ಹೈಟಿಯ ರಾಜಧಾನಿ ಪೋರ್ಟ್ ಅವ್ ಪಿನ್ಸ್‌ದಲ್ಲಿ ಉಂಟಾದ ಭೀಕರ ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 7 ಅಂಶದಷ್ಟು ದಾಖಲೆ ಹೊಂದಿದೆ. ಅಲ್ಲಿಯ ಒಟ್ಟು ಜನಸಂಖ್ಯೆ ಸುಮಾರು 9 ದಶಲಕ್ಷವಾದರೆ, ಭೂಕಂಪದಲ್ಲಿ ಸತ್ತವರ ಸಂಖ್ಯೆ ಅಂದಾಜು 5 ಲಕ್ಷಕ್ಕಿಂತಲೂ ಅಧಿಕವಾಗಿದೆ.

ಕಳೆದ 20 ವರ್ಷಗಳಲ್ಲಿ, ಸುಮಾರು 5 ಭೂಕಂಪಗಳು ಭಾರತದ ಸಾರ್ವಜನಿಕ ಜೀವನದ ಮೇಲೆ ದುಷ್ಪರಿಣಾಮ ಬೀರಿವೆ. ಇತ್ತೀಚೆಗಿನ ಒಂದು ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ಶೇಕಡಾ 60ರಷ್ಟು ಭಾಗದಲ್ಲಿ ಭೂಕಂಪದಿಂದ ಗಂಡಾಂತರ ಉಂಟಾಗುವ ಸಾಧ್ಯತೆ ಇದೆ. ಇಂತಹ ವಿಪತ್ತಿನ ಹಿನ್ನೆಲೆಯಲ್ಲಿ ಭೂಕಂಪದ ತೀವ್ರತೆಯ ಪ್ರಮಾಣವನ್ನು ಆಧರಿಸಿ ರಾಷ್ಟ್ರವನ್ನು ನಾಲ್ಕು ವಲಯಗಳಲ್ಲಿ ವಿಂಗಡಿಸಲಾಗಿದೆ. ದೆಹಲಿ, ಮುಂಬೈ, ಕೊಲ್ಕೊತ್ತಾ, ಚೆನ್ನೈ, ಅಹ್ಮದಾಬಾದ್ ಇತ್ಯಾದಿ ಮಹಾನಗರಗಳು ಅಧಿಕ ಪ್ರಮಾಣದ ವಿಪತ್ತನ್ನು ಎದುರಿಸುವ ಸಂಭವವಿದೆ. ಜನನಿಬಿಡ ಪ್ರದೇಶಗಳಲ್ಲಿ ಉಂಟಾಗುವ ಭೂಕಂಪದಿಂದ ಅತ್ಯಧಿಕ ಪ್ರಮಾಣದ ಪ್ರಾಣಹಾನಿ, ಸ್ಥಿರಾಸ್ತಿ, ಮೂಲ ಸೌಕರ್ಯ ಮತ್ತು ಇತರ ಸಂಪತ್ತಿಗೆ ನಷ್ಟವಾಗುವುದು.

ಕಳೆದ ಶತಮಾನದ ಅಂತಿಮ ದಶಕ ಹಾಗೂ ಈ ಶತಮಾನದ ಪ್ರಥಮ ದಶಕದಲ್ಲಿ ಸಂಭವಿಸಿದ ನೈಸರ್ಗಿಕ ವಿಪತ್ತುಗಳಿಂದ ಭಾರತದ ಆರ್ಥಿಕಾಭಿವೃದ್ಧಿಯು ಕುಂಠಿತವಾಗಿದೆ. ಲಾತೂರ್ ಭೂಕಂಪ (1993), ಒರಿಸ್ಸಾ ಚಂಡಮಾರುತ (1999), ಭುಜ್ ಭೂಕಂಪ (2001), ಸುನಾಮಿ ಅಲೆಗಳ ದುರಂತ (2004), ಕಾಶ್ಮೀರ ಭೂಕಂಪ (2005) ಇತ್ಯಾದಿ ಪ್ರಾಕೃತಿಕ ವಿಕೋಪಗಳಿಂದ ಪಾಠ ಕಲಿತು, ಅವುಗಳನ್ನು ಸಮರ್ಥವಾಗಿ ಎದುರಿಸಲು ಅಥವಾ ಪ್ರತಿಬಂಧಿಸಲು ಸುಸಂಘಟಿತವಾದ ಪ್ರಯತ್ನಗಳು ಅಗತ್ಯವಾಗಿವೆ. ಪ್ರಾಕೃತಿಕ ವಿಪತ್ತುಗಳು 'ವಿಧಿವಿಲಾಸ' ಅಥವಾ 'ದೈವನಿಯಾಮಕ' ಎಂಬ ಪಲಾಯನವಾದಿತ್ವವನ್ನು ತ್ಯಜಿಸಿ, ಇಂತಹ ಸಮಸ್ಯೆಯನ್ನು ಎದುರಿಸಲು ಸಾರ್ವಜನಿಕರಿಗೆ ಸೂಕ್ತವಾದ ಪ್ರೇರಣೆ ನೀಡಬೇಕು. ನೈಸರ್ಗಿಕ ವಿಕೋಪದ ನಂತರ ಸಂತ್ರಸ್ತರಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸುವ ದಿಶೆಯಲ್ಲಿ, ಲಕ್ಷ್ಯವನ್ನು ಕೇಂದ್ರೀಕರಿಸ ಲಾಗುತ್ತದೆ. ಆದರೆ, ಪ್ರತಿಬಂಧಕ ಉಪಾಯ, ಸಿದ್ಧತೆ, ಪ್ರತಿಸ್ಪಂದನ ಮತ್ತು ಮರುಸ್ಥಾಪನೆಗೆ ಆದ್ಯತೆ ನೀಡುವಂತಹ ಧೋರಣೆ/ಕಾರ್ಯ ವಿಧಾನಗಳು ರೂಪಗೊಳ್ಳಬೇಕು.

## ಮಾನವ ನಿರ್ಮಿತ ವಿಪತ್ತು

ಪ್ರಾಕೃತಿಕ ಕಾರಣಗಳಿಂದ ನೈಸರ್ಗಿಕ ವಿಪತ್ತುಗಳು ಉದ್ಭವಿಸಿದರೆ, ಮಾನವನ ಗಂಡಾಂತರಕಾರಿ ಕೃತ್ಯಗಳಿಂದ 'ಮಾನವ ನಿರ್ಮಿತ ದುರಂತ'ಗಳು ಸಂಭವಿಸುತ್ತವೆ. ಇಂತಹ ವಿಪತ್ತುಗಳು ಸಾರ್ವಜನಿಕ ಆಡಳಿತ ಹಾಗೂ ಸಾಮಾಜಿಕ/ಆರ್ಥಿಕ ವ್ಯವಸ್ಥೆಯ ಮೇಲೆ ಗಂಭೀರ ಸ್ವರೂಪದ ದುಷ್ಪರಿಣಾಮಗಳನ್ನುಂಟು ಮಾಡುತ್ತವೆ. ರಸ್ತೆ ಅಪಘಾತ, ಉದ್ದಿಮೆ/ಕಾರ್ಖಾನೆಗಳಲ್ಲಿ ದುರಂತ, ಅಗ್ನಿ ಅವಘಡ, ಕಟ್ಟಡ/ಸೇತುವೆಗಳ ಕುಸಿತ, ಭಯೋತ್ಪಾದಕರ ವಿನಾಶಕಾರಿ ಕೃತ್ಯ, ಸರಣಿ ಬಾಂಬ್ ಸ್ಫೋಟ, ಜೈವಿಕ, ರಾಸಾಯನಿಕ ಮತ್ತು ಪರಮಾಣು ಶಸ್ತ್ರಾಸ್ತ್ರಗಳ ದುರ್ಬಳಕೆ, ಪರಿಸರನಾಶ, ಜಲ/ವಾಯು ಮಾಲಿನ್ಯ, ತೈಲ/ವಿಷಾನಿಲ ಸೋರಿಕೆ, ಅಪೌಷ್ಟಿಕತೆ, ವಿವಿಧ ಪ್ರಕಾರದ ಸಾಂಕ್ರಾಮಿಕ ರೋಗಗಳು ಇತ್ಯಾದಿ.

ನೀರು, ನೀರಾವರಿ ಹಾಗೂ ನೆರೆಹಾವಳಿ/ಮಹಾಪೂರಕ್ಕೆ ಸಂಬಂಧಿಸಿದ ಕೆಲವು ವಿಭಾಗಗಳ ನಾಮಫಲಕಗಳಲ್ಲಿ ಬದಲಾವಣೆ ಮಾಡಲಾಗಿದೆ. ಉದಾಹರಣೆಗಾಗಿ ನೀರಾವರಿ ಇಲಾಖೆಗೆ 'ಜಲ ಸಂಪನ್ಮೂಲ ಇಲಾಖೆ', ಪ್ರವಾಹ ನಿಯಂತ್ರಣಕ್ಕೆ 'ಪ್ರವಾಹ ನಿರ್ವಹಣೆ/ಪರಿಹಾರ ಇಲಾಖೆ' ಮತ್ತು ಪುನರ್ವಸತಿ ವಿಭಾಗಕ್ಕೆ 'ವಿಪತ್ತು ನಿರ್ವಹಣಾ ಇಲಾಖೆ ಎಂದು ಪುನರ್ ನಾಮಕರಣ ಮಾಡಲಾಗಿದೆ. ಆದರೆ ಇಲಾಖೆಗಳ ನಾಮಫಲಕ ಪರಿವರ್ತನೆಯಿಂದ ಇಲಾಖೆಗಳ ಕಾರ್ಯದಲ್ಲಿಯೂ ಸಹ ಬದಲಾವಣೆ ಆಗಿದೆ ಎಂಬ ಭ್ರಮೆಯನ್ನು ಸೃಷ್ಟಿಸಲಾಗಿದೆ. ಪ್ರವಾಹಗಳನ್ನು ಕುರಿತು ತೀಕ್ಷ್ಣವಾದ ಚರ್ಚೆ ಮುಂದುವರಿಯುತ್ತದೆ. ಅನೇಕರು ಪ್ರವಾಹವನ್ನು 'ಪ್ರಾಕೃತಿಕ ವಿಪತ್ತು' ಎಂದು ಭಾವಿಸಿದ್ದಾರೆ. ಆದರೆ ಮಾನವನ ಮಧ್ಯ ಪ್ರವೇಶ (Human Intervention) ದಿಂದ ಪ್ರವಾಹ ಪರಿಸ್ಥಿತಿ ಉಂಟಾಗುವುದರಿಂದ ಅದನ್ನು 'ಮಾನವ ನಿರ್ಮಿತ ವಿಪತ್ತೆಂದು' ಕೆಲವರು ಭಾವಿಸುತ್ತಾರೆ.

ನದಿಗಳು ಮತ್ತು ತೀರಗಳಿಗೆ ತಡೆಗೋಡೆ ನಿರ್ಮಿಸುವ ಮೂಲಕ 'ಮಾನವನ ಹಸ್ತಕ್ಷೇಪ'ವಾಗಿದೆ. ತಡೆಗೋಡೆ ನಿರ್ಮಾಣದಿಂದ ನದಿ ಹಾಗೂ ಮಾನವರ ನಡುವೆ ಸುದೃಢವಾದ ಗೋಡೆ ನಿಲ್ಲಿಸಲು ಸಾಧ್ಯವೆಂಬ ಕೆಲವು ಇಂಜಿನೀಯರರ ವಿಶ್ವಾಸದಲ್ಲಿ ದೌರ್ಬಲ್ಯವಿದೆ. ದಂಡೆ ನಿರ್ಮಿಸುವ ಮೂಲಕ ಪ್ರವಾಹದಿಂದ ರಕ್ಷಣೆ ಪಡೆಯಬಹುದೆಂಬ ನಿರೀಕ್ಷಣೆಯು ಮಿಥ್ಯವಾಗಿದೆ. ನದಿಗಳ ದಂಡೆಗಳು ಭಗ್ನವಾಗಿರುವಂತಹ ನೆರೆಹೊರೆಯ ಪ್ರದೇಶಗಳಲ್ಲಿ ವಾಸಿಸುವ ಜನರು ಜಲಸಮಾಧಿ ಹೊಂದುವರು. ನದಿ ದಂಡೆಗಳು ಒಡೆಯುವ ಗಂಡಾಂತರದಿಂದ ಸಂಪೂರ್ಣವಾಗಿ ಮುಕ್ತವಾಗಲು ಸಾಧ್ಯವಾಗುವುದಿಲ್ಲ. ಇಂತಹ ಭೀತಿಯನ್ನು ಹಲವಾರು ಮುಂದುವರಿದ ರಾಷ್ಟ್ರಗಳಲ್ಲಿಯೂ ಕಾಣಬಹುದಾಗಿದೆ. ಭಾರತ ಸ್ವಾತಂತ್ರ್ಯ ಪಡೆದ ನಂತರ ಗಂಗಾ ಹಾಗೂ ಬ್ರಹ್ಮಪುತ್ರ ನದಿಗಳ ಪಾತ್ರದಲ್ಲಿ ದಂಡೆ ನಿರ್ಮಿಸುವ ಬೃಹದ್ ಕಾರ್ಯ ಕೈಗೊಳ್ಳಲಾಗಿದೆ. ಹೂಳು ತುಂಬಿದ ನದಿಗೆ ದಂಡೆ ನಿರ್ಮಿಸಿದಾಗ ನದಿಯೊಳಗಿನ ಹೂಳು, ದಂಡೆಯ ವ್ಯಾಪ್ತಿಯಲ್ಲಿ ಸಿಲುಕಿಕೊಳ್ಳುವುದರಿಂದ ನದಿಯ ತಳಮಟ್ಟ ಏರುತ್ತದೆ. ಅದರಿಂದ ದಂಡೆಯ ಎತ್ತರವನ್ನು ಹೆಚ್ಚಿಸುವ ಅನಿವಾರ್ಯತೆ ಉಂಟಾಗುತ್ತದೆ. ನದಿ ದಂಡೆಯ ಹೆಚ್ಚಳ ಹಾಗೂ ನಿರ್ವಹಣಾ ಪ್ರಕ್ರಿಯೆಗೆ ಮಿತಿ ಇದೆ. ಕೆಲವು ರಾಜ್ಯಗಳಲ್ಲಿ (ಅಸ್ಸಾಮ್, ಪಶ್ಚಿಮ ಬಂಗಾಳ, ಒರಿಸ್ಸಾ, ಪೂರ್ವ ಉತ್ತರ ಪ್ರದೇಶ ಇತ್ಯಾದಿ) ಪ್ರವಾಹದ ತೀವ್ರತೆಯ ದೆಸೆಯಿಂದ ಪ್ರವಾಹ ನಿಯಂತ್ರಕ್ಕಾಗಿ ಅಧಿಕ ಪ್ರಮಾಣದಲ್ಲಿ ಹಣದ ಹೂಡಿಕೆಯಾಗುತ್ತದೆ. ಇಂತಹ ಪ್ರವಾಹ ಪರಿಸ್ಥಿತಿಯ ನಿರ್ಮಾಣದಲ್ಲಿ ಮಾನವನ ಹಸ್ತಕ್ಷೇಪವಿರುವುದರಿಂದ ಅದು 'ಮಾನವ ನಿರ್ಮಿತ ವಿಪತ್ತು' ಎಂದು ಪರಿಗಣಿಸಲ್ಪಡುತ್ತದೆ.

*(ಮುಂದುವರಿಯುತ್ತದೆ)*




# ಆರೋಗ್ಯವೇ ಭಾಗ್ಯ



**ಡಾ. ಟಿ.ಎ. ಈಶ್ವರಯ್ಯ** *
**ಮೊಬೈಲ್ : 9449173703**

"ಆರೋಗ್ಯ ಮನುಷ್ಯ ಜೀವನದ ಪ್ರಮುಖ ಅಂಶ. ಉತ್ತಮ ಆಹಾರ ಮತ್ತು ದೈಹಿಕ ವ್ಯಾಯಾಮಗಳಿಂದ ಆರೋಗ್ಯವನ್ನು ಕಾಪಾಡಿಕೊಳ್ಳ ಬಹುದು. ಚಿಕಿತ್ಸೆಗಿಂತ ಮುಂಗಾವಲು ಮೇಲು."

* ವಿಶ್ವ ಆರೋಗ್ಯ ಸಂಸ್ಥೆ (WHO) ವ್ಯಾಖ್ಯಾನದ ಪ್ರಕಾರ ಆರೋಗ್ಯವೆಂದರೆ ಸಂಪೂರ್ಣ ದೈಹಿಕ, ಮಾನಸಿಕ ಸಾಮಾಜಿಕ ಹಾಗೂ ಆಧ್ಯಾತ್ಮಿಕವಾಗಿ ಸುಖ ಜೀವನ ನಡೆಸುವುದು ಎಂದರ್ಥ. ಕೇವಲ ತಾತ್ಕಾಲಿಕವಾಗಿ ರೋಗದಿಂದ ಮುಕ್ತ, ಇಲ್ಲವೆ ಅಸ್ಥಿರತೆ ಇಲ್ಲದಿರುವುದೆಂದಲ್ಲ.
* ಸಾಮಾನ್ಯ ಜನರಿಗೆ ಹೇಳುವುದಾದರೆ ಅದು ಸದೃಢ ಮನಸ್ಸು, ಸದೃಢ ದೇಹದಲ್ಲಿ ಸದೃಢ ಪರಿವಾರ. ಸದೃಢ ಸಮುದಾಯ, ಸದೃಢ ಆಂತರಿಕ, ಬಾಹ್ಯ ಪರಿಸರ.
* ಆರೋಗ್ಯ ಒಂದು ಸುಸ್ಥಿತಿ ನಿಂತ ನೀರಲ್ಲ. ಹರಿಯುವ ನೀರು. Health is a State not static. But Dynamic.
* WHO ಪ್ರಕಾರ ಅದಕ್ಕೆ ನಾಲ್ಕು ಆಯಾಮಗಳಾಗಿ ವಿಂಗಡಿಸಿದೆ (ಸಮಗ್ರ ಆರೋಗ್ಯ) ಅವು ಯಾವುವೆಂದರೆ,

  1) ದೈಹಿಕ (ಶಾರೀರಿಕ) ಆರೋಗ್ಯ, 2) ಮಾನಸಿಕ ಆರೋಗ್ಯ, 3) Social (ಸಾಮಾಜಿಕ) ಆರೋಗ್ಯ, 4) ಆಧ್ಯಾತ್ಮಿಕ (Spiritual) ಆರೋಗ್ಯ.

## ದೈಹಿಕ ಆರೋಗ್ಯ

ಮಾನವನ ನಿರಂತರ ಜೀವನದಲ್ಲಿ ನಡೆಯುವ ದೈಹಿಕ ಕ್ರಿಯೆ ಉಸಿರಾಟ, ರಕ್ತ ಪರಿಚಲನೆ, ಚಲನ ವಲನ, ಪಚನ, ವಿಸರ್ಜನೆ ಇತ್ಯಾದಿ ಸಮರ್ಪಕವಾಗಿ ಸುಲಲಿತವಾಗಿ ನಡೆಯುವುದು ಎಂದರ್ಥ. ಇದು ಆರೋಗ್ಯದ ಒಂದು ಭಾಗ ಮಾತ್ರ. ಇದು ಶರೀರದ ಸದೃಢತೆ ದೇಹದಾರ್ಢ್ಯತೆಗೆ (Fitness) ಸಂಬಂಧಿಸಿರುತ್ತದೆ. ಯೋಗ್ಯ ದೇಹ ಗಟ್ಟಿಮುಟ್ಟಾದ ಮೈಕಟ್ಟು.

## ಮಾನಸಿಕ ಆರೋಗ್ಯ

ಮನಸ್ಸು ಸರಿ ಇದ್ದರೆ ಆರೋಗ್ಯ ಸರಿಯಾಗಿರುತ್ತದೆ. ಇಲ್ಲದಿದ್ದರೆ ಮನೋರೋಗ ಬರುತ್ತದೆ. ಇದು ಆರು ಯೋಗ್ಯ ಇಂದ್ರಿಯಗಳಿಗೆ ಸಂಬಂಧಿಸಿದುದು. ಕಾಮ, ಕ್ರೋಧ, ಮದ, ಮತ್ಸರ, ಲೋಭ, ಮೋಹ ಇವುಗಳು ಚಿತೆಗೂ-ಚಿಂತೆ ಎಂಬಂತೆ ಇಲ್ಲದಿದ್ದರೆ ರಕ್ತದ ಏರೊತ್ತಡ, ಮಧುಮೇಹ, ಹೃದಯಾಘಾತ, ಹೊಟ್ಟೆಯುರಿ, ಮಾನಸಿಕ ರೋಗಗಳು ಉದ್ಭವಿಸುತ್ತದೆ. ಮೈ-ಮನ ನಾಣ್ಯದ ಎರಡು ಮುಖಗಳಿದ್ದಂತೆ.

## ಸಾಮಾಜಿಕ ಆರೋಗ್ಯ

ಎಲ್ಲರ ಆರೋಗ್ಯ ಸಮಾಜದ ಆರೋಗ್ಯದಲ್ಲಿ ಅಡಗಿದೆ. ಎಲ್ಲರ ಸ್ವಾಸ್ಥ್ಯ ನಮ್ಮ ಸ್ವಾಸ್ಥ್ಯ. ಆದ್ದರಿಂದ ಸಮುದಾಯದ ಆರೋಗ್ಯದ ಬಗ್ಗೆ ಕಾಳಜಿ ಎಲ್ಲರಿಗೂ ಮುಖ್ಯ. ಪರಿವಾರ ಹಾಗೂ ಪರಿಸರ ನೈರ್ಮಲ್ಯವೂ ಮುಖ್ಯ. ಶಿಸ್ತು, ಸಂಯಮ, ತಾಳ್ಮೆ, ಸಹಿಷ್ಣುತೆ, ಹೊಂದಾಣಿಕೆ, ಜವಾಬ್ದಾರಿ ಹೊಣೆಗಾರಿಕೆ ಇತ್ಯಾದಿ ಬಗ್ಗೆ ಗಮನವಿರಬೇಕು.

* ಮಕ್ಕಳ ಮತ್ತು ಹದಿಹರೆಯ ಮಕ್ಕಳ ತಜ್ಞರು, ಜಿಲ್ಲಾ ಆಸ್ಪತ್ರೆ, ತುಮಕೂರು.

### ಆಧ್ಯಾತ್ಮಿಕ ಆರೋಗ್ಯ

ಒಳ್ಳೆಯವರಾಗಿರೋಣ, ಒಳ್ಳೆಯದನ್ನು ಮಾಡೋಣ, ಒಳ್ಳೆಯದನ್ನು ಬಯಸೋಣ, ಒಳಿತಿಗಾಗಿ ದುಡಿಯೋಣ.

Be good, Do good, See good, Hear good, Act good.

### ಆರೋಗ್ಯಕ್ಕೆ ಅಷ್ಟ ದಿಕ್ಪಾಲಕರು

1) ಅನಿಲ – ಆಮ್ಲಜನಕ
2) ಅಕ್ವ – ಶುದ್ಧ ಜಲ
3) ಆಹಾರ – ಹೊಟ್ಟೆಗೆ ಅನ್ನಾಹಾರ
4) ಅರಿವೆ – ಬಟ್ಟೆ ಮೈ ಮಾನಕ್ಕೆ
5) ಆಶ್ರಯ – ಆಸರೆ, ಸೂರು
6) ಅರಿವು – ತಿಳುವಳಿಕೆ, ಆಶಯ
7) ಅಭ್ಯಾಸ – ಅಭಿರುಚಿ, ಆಕಾಂಕ್ಷೆ
8) ಆದಾಯ – ಆಸ್ತಿ, ಅಕ್ಷರ

### Seven H of Health

1) Hygeiene, 2) Habit, 3) Hobby, 4) Humor/ Happiness, 5) Heart, 6) Head, 7) Hands

**ಉತ್ತಮ ಆರೋಗ್ಯಕ್ಕೆ :** ತಲೆಯನ್ನು ತಣ್ಣಗಿಡಿ, ಹೊಟ್ಟೆಯನ್ನು ಸಡಿಲವಾಗಿಡಿ, ಪಾದವನ್ನು ಬೆಚ್ಚಗಿಡಿ. ಸ್ವಾಸ್ಥವೇ ಸರ್ವಸ್ವ.

### ಆರೋಗ್ಯ ಸೌಭಾಗ್ಯಕ್ಕೆ ದ್ವಾದಶ (Dozen) ತತ್ವಗಳು

1) **ಪರಿಶುದ್ಧವಾದ ಗಾಳಿ** – ನಮಗೆ ಮೊದಲು ಬೇಕಾದದ್ದು ಪ್ರಾಣವಾಯುವಾದ ಆಮ್ಲಜನಕ. ಆದರೆ ಈಗ ಜಗವೆಲ್ಲಾ ವಾಯು ಮಾಲಿನ್ಯದಿಂದ ಕೂಡಿದೆ. ಆದ್ದರಿಂದ ಇದರ ಬಗ್ಗೆ ಗಮನಹರಿಸಬೇಕು. ತಾಜಾ ವಾತಾವರಣದ ಗಿಡ ಮರಗಳ ನಡುವೆ ನಡಿಗೆ, ವಿಹಾರ, ಪರಿಸರ–ಪ್ರವಾಸ ಅತ್ಯುತ್ತಮ.

2) **ಕುಡಿಯಲು ಯೋಗ್ಯವಾದ ನೀರು** – ವಾಯು ಮಾಲಿನ್ಯದಂತೆ ಜಲಮಾಲಿನ್ಯವೂ ಸರ್ವೇಸಾಮಾನ್ಯವಾಗಿದೆ. ಆದ್ದರಿಂದ ನಾವು ಕುಡಿಯುವ ಜಲವನ್ನು ಕಲ್ಮಶಗೊಳಿಸದೆ, ಪ್ರದೂಷಣೆ ಮುಕ್ತವಾಗಿಡಬೇಕು. ಬೇಕಾದಷ್ಟು ಯೋಗ್ಯವಾದ ನೀರನ್ನು ಕುಡಿಯಬೇಕು. ಸರಿ ಸುಮಾರು ಒಬ್ಬ ಮನುಷ್ಯ ತನ್ನ ತೂಕವನ್ನು 20 ರಿಂದ ಭಾಗಿಸಿದಾಗ ಬರುವಷ್ಟು ಲೀಟರ್ ನೀರನ್ನು ದಿನಾಲು 10–12 ಬಾರಿ ವಿಭಜಿಸಿ ಕುಡಿಯಬೇಕು (3–5 ಲೀಟರ್ ದೇಹ ಶುಚಿಗೊಳಿಸಲು, ಚಯಾಪಚಯ ಕ್ರಿಯಾ ಹಾಗೂ ವಿಸರ್ಜನೆಗೆ ಇದು ಅತಿ ಮುಖ್ಯ.

3) **ದೇಹದ ತೂಕ ನಿಗಾವಣೆ** – ದೇಹದಾರ್ಢ್ಯತೆಯನ್ನು ಕಾಪಾಡಬೇಕು. ಸದೃಢಕಾಯತೆ ಸಂಸ್ಥಾಪಿಸಬೇಕು. ಕೃಷ ಕಾಯ, ಸ್ಥೂಲಕಾಯ ಬೇಡ. ಅವರವರ ಉದ್ದಕ್ಕೆ (ಎತ್ತರ)ಕ್ಕೆ ಸರಿಯಾಗಿ ದೇಹದ ಭಾರ ಮಿತಿಯಲ್ಲಿರಬೇಕು. ಭೂಮಿಗೆ ಭಾರವಾಗಬಾರದು ಅಥವಾ ಗಾಳಿಗೆ ತೇಲಿ ಹೋಗಬಾರದು. ಆದರ್ಶ ತೂಕ ಉಳಿಸಿಕೊಳ್ಳಬೇಕು.

1. **ಬ್ರೋಕಾ ಮಾಪಕ** – ನಮ್ಮ ಎತ್ತರ (ಸೆ.ಮೀ.) ದಲ್ಲಿ 100 ಕಳೆದಾಗ ಉಳಿಯುವ ಶೇಷದಷ್ಟಿರಬೇಕು.

ಉದಾ 165–100=65 ಕೆ.ಜಿ.

2. **Life Table** – ನಮ್ಮ ಎತ್ತರ (ಸೆಂ.ಮೀ.) ಕೊನೆಯ ಎರಡು ಅಂಕಿಗಳು ± 5.

ಉದಾ : 165 ± 5 ನಷ್ಟಿರಬೇಕು. 60–70 ಕೆ.ಜಿ.

3. **BMI (Body Mass Index)** – ಶರೀರ ರಾಶಿ ಮಾಪಕ ಅಳತೆ

$$\text{BMI} = \frac{\text{Weight (Kg)}}{(\text{Height})^2 \text{ mtrs}}$$

ಸಹಜವಾಗಿ 18–25 ಒಳಗಿರಬೇಕು (ಉದ್ದ ಮತ್ತು ಅಗಲ)

< 18 – ಅಪೌಷ್ಟಿಕತೆ
> 25 – ಅತಿ ತೂಕ
> 30 – ಬೊಜ್ಜು
ಎಂದು ತಿಳಿಯಬೇಕು

4. **ಸೊಂಟದ ಸುತ್ತಳತೆ** – ಗಂಡಸರಲ್ಲಿ 90 ಸೆಂ.ಮೀ.
– ಹೆಂಗಸರಲ್ಲಿ 80 ಸೆಂ.ಮೀ.

$\frac{\text{ಸೊಂಟ}}{\text{ನಿತಂಬ}}$ ಅನುಪಾತ ಗಂ. – 0.9, ಹೆಂ. 0.8

ಜಾಸ್ತಿ ಇದ್ದರೆ ಅತಿತೂಕ ಅಥವಾ ಬೊಜ್ಜು ಎಂದು ಅರ್ಥೈಸಬೇಕು. ಸೊಂಟದ ಸುತ್ತಳತೆ ಕಡಿಮೆ ಮಾಡಿ ಜೀವನದ ಪರಿಧಿ ಜಾಸ್ತಿ ಮಾಡಿರಿ.

5. **ವೈಯಕ್ತಿಕ ಶುಚಿತ್ವ /ಪರಿಸರ ನೈರ್ಮಲ್ಯ**

ಶುಚಿತ್ವವೇ ದೇವರು. ಅದು ಜೀವನದ ವಿಧಾನವಾಗಬೇಕು. ದೇಹದ ಎಲ್ಲಾ ಭಾಗಗಳು ತಲೆಯಿಂದ ಪಾದದವರೆಗೆ ಕಾಪಾಡಬೇಕು. ಜೊತೆಗೆ ಪರಿವಾರ/ಪರಿಸರದ ನೈರ್ಮಲ್ಯವನ್ನು ಕಾಪಾಡಬೇಕು.

6. **ಒಳ್ಳೆಯ ಅಭ್ಯಾಸ, ಹವ್ಯಾಸಗಳು** – ನಿರೂಪಣೆ, ವಿನ್ಯಾಸ ರೋಧಿಸುವುದು. ಆರೋಗ್ಯಾತ್ಮಕ, ಗುಣಾತ್ಮಕ ಅಭ್ಯಾಸಗಳು, ದೇಹದ ಭಾಗಗಳು, ದುಶ್ಚಟ, ದುರ್ವ್ಯಸನ, ಮದ್ಯಪಾನ, ಧೂಮಪಾನ ದಿಡೀರ್ ಆಹಾರ ಇತ್ಯಾದಿ.

7. **ಜೀವನ ಕಲೆ :** ಹಾಸ್ಯ, ಲಾಸ್ಯ, ನಗೆ, ಮನರಂಜನೆ, ಸಂತೋಷ.

   – ನಗೆಯೇ ಪರಮ ಔಷಧಿ

   – ಅತಿ ಆಸೆ ದುಃಖಕ್ಕೆ ಮೂಲ

   – ಹಾಸಿಗೆಯಿದ್ದಷ್ಟು ಕಾಲುಚಾಚು

   **"ಆಹಾರ, ನಮ್ರತೆ, ಸಂತೋಷ ಅತ್ಯುತ್ತಮ ವೈದ್ಯರು."**

8. **ಜೀವನ ಶೈಲಿ** – ಒಳ್ಳೆಯ ಆರೋಗ್ಯಕರ, ಧನಾತ್ಮಕ ನಡೆ ನುಡಿ ವಿಚಾರ, ಆಚಾರ. ಇರಲಿ. ಬೇಗ ಮಲಗಿ ಬೇಗ ಎದ್ದರೆ ನೀವಾಗುವಿರಿ ಬುದ್ಧಿವಂತ ಆರೋಗ್ಯವಂತ ಸಿರಿವಂತ.

9. ಆಟ/ಓಟ ವ್ಯಾಯಾಮ ಪ್ರಾಣಾಯಾಮ, ಯೋಗ ಸದೃಢ ಮನಸ್ಸು ಸದೃಢ ದೇಹದಲ್ಲಿರುತ್ತದೆ. ಉತ್ಸಾಹ, ಉಲ್ಲಾಸ ತಾಜಾತನ ತುಂಬುತ್ತದೆ. ಸರ್ವರೋಗಗಳಿಗೆ ಪ್ರಣಾಯಾಮ ಸಂಜೀವಿನಿ.

10. ಪ್ರವಾಸ, ವಿಹಾರ, ವಿನೋದ, ವಿಶ್ರಾಂತಿ, ನಿದ್ದೆ, ಧ್ಯಾನ, ಧಾನ, ಪ್ರಕೃತಿ ಮಾತೆಯ ಮಡಿಲು, ಮಮತೆಯ ಒಡಲು. ನೀವೇ ನಿಮ್ಮ ಬಾಳಿನ ರೂವಾರಿ.

11. ನಿಯಮಿತ ಆರೋಗ್ಯ ತಪಾಸಣೆ – ಔಷಧೋಪಚಾರ.

12. ಒತ್ತಡ, ಸಮಯ ನಿರ್ವಹಣೆ, ವಿವೇಚನೆ, ಸಲಹೆ ಸಮಾಲೋಚನೆ.

    Good Health is above wealth

    Maintain Ideal Weight

    Decrease the Weight

    Increase the grace

    Decrease the waist line increase the life span

    ಸೊಂಟದ ಸುತ್ತಳತೆ ಕಡಿಮೆ ಮಾಡಿ ಜೀವನದ ಪರಿಧಿ ಜಾಸ್ತಿ ಮಾಡಿ.

**ಆಹಾರ** – ಆಹಾರ ದೇಹದ ಕೆಲಸಗಳಿಗೆ ಇಂಧನವಿದ್ದಂತೆ. ಅದು ಶಕ್ತಿ ಒದಗಿಸುತ್ತದೆ. ಆದರೆ ನಮಗೆ ಎಷ್ಟು ಬೇಕೋ ಅಷ್ಟೇ ಆಹಾರ ಸೇವಿಸಬೇಕು. ಅತಿಯಾದರೆ ಅಮೃತವೂ ವಿಷಯವಾಗುತ್ತಂತೆ. ಅಂತೆಯೇ ಆಹಾರ ಕಡಿಮೆ ತಿಂದರೆ ಅಪೌಷ್ಟಿಕತೆ. ಜಾಸ್ತಿ ತಿಂದರೆ ಬೊಜ್ಜುತನ ಬೆಳೆಸುತ್ತದೆ. ಸಮತೋಲನ ಆಹಾರ ಮುಖ್ಯ. ನಾನಾ ಬಗೆಯ ಅಗತ್ಯವಾದ ಆಹಾರಗಳನ್ನು ಹಿತ ಮಿತವಾಗಿ ಋತುಮಾನಕ್ಕನುಗುಣವಾಗಿ ಸೇವಿಸುವುದು.

**"ನಾವು ಬದುಕಲು ತಿನ್ನಬೇಕೇ ಹೊರತು**
**ತಿನ್ನಲಿಕ್ಕಾಗಿಯೇ ಬದುಕಬಾರದು."**

**ಊಟದ ಸಮಯದಲ್ಲಿ ಗಮನಿಸಬೇಕಾದ ಅಂಶಗಳು :**

ಆಹಾರವೇ ಔಷಧವಾಗಲಿ ಔಷಧವೇ ಆಹಾರವಾಗದಿರಲಿ. ಅನ್ನ, ಚಪಾತಿ, ಮುದ್ದೆ, ರೊಟ್ಟಿ, ಸೂಪ್ಪು ತರಕಾರಿ ಪಲ್ಯವಿರಲಿ, ಹಣ್ಣು, ಬೆಣ್ಣೆ, ಎಣ್ಣೆ. ನಮ್ಮ ಕೆಲಸಕ್ಕೆ ತಕ್ಕಂತೆ ಅವಶ್ಯಕತೆಗೆ ತಕ್ಕಂತೆ ಸಮತೋಲನ ಆಹಾರವಿರಲಿ.

ಮರೆಯದಿರಿ ಬೆಳಗಿನ ಉಪಹಾರ
ನಾಲಿಗೆಯ ಚಪಲಕ್ಕೆ ರುಚಿ ಬೇಕೆ
ದೇಹದ ಬೆಂಬಲಕ್ಕೆ ಅಭಿರುಚಿ ಬೇಕೆ.

**"ಊಟ ಬಲ್ಲವನಿಗೆ ರೋಗವಿಲ್ಲ,**
**ಮಾತು ಬಲ್ಲವನಿಗೆ ಜಗಳವಿಲ್ಲ."**

ಉಪಹಾರವನ್ನು ರಾಜನಂತೆ ಸೇವಿಸಿರಿ.

ಊಟವನ್ನು ರಾಣಿಯಂತೆ ಸೇವಿಸಿರಿ.

ರಾತ್ರಿ ಊಟವನ್ನು ಮಂತ್ರಿಯಂತೆ ಸೇವಿಸಿರಿ.

ವಿಶ್ವದಲ್ಲಿ ಆಹಾರ ತಿನ್ನದೆ ಸಾಯುವುದಕ್ಕಿಂತ, ಹೆಚ್ಚು ಆಹಾರ ತಿಂದು ಸಾಯುವವರೇ ಜಾಸ್ತಿ.

**ಪಾಲಿಸಿರಿ ಆಹಾರ ಸಲಹೆಗಾರರ ತತ್ವ**

Gene Loads the gun

Diet pull the Trigger

ನೀವು ಏನನ್ನು ಸೇವಿಸುತ್ತಿರೋ ಅಂತೆಯೇ ನೀವಾಗುವಿರಿ. You are what you eat. ನಾರು ಆರೋಗ್ಯಕ್ಕೆ ಬೇಕು. ❑



# ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಮಹಿಳೆಯರ ಸಬಲೀಕರಣ




**ಅನುರಾಧ ಎಸ್.** *
**ಮೊಬೈಲ್ : 7204163645**


ಪುರುಷ ಪ್ರಧಾನ ಸಮಾಜದ ಕಪಿಮುಷ್ಟಿಯಲ್ಲಿ ಬಾಳುತ್ತಿದ್ದ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ವಂಚಿತರಾಗಿದ್ದ ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಗ್ರಾಮೀಣ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸುವರ್ಣ ಅವಕಾಶ ಮಾಡಿಕೊಟಿದೆ.

'ದೇಶದ ಭವಿಷ್ಯವನ್ನು ನಿರ್ಧರಿಸುವಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಬಹುಮುಖ್ಯವಾದುದು" **– ಮಹಾತ್ಮಗಾಂಧಿ**

1993–94ರಲ್ಲಿ ಜಾರಿಗೆ ಬಂದ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಗ್ರಾಮೀಣ ರಾಜಕೀಯದಲ್ಲಿ ಮಹಿಳೆಯರಿಗೆ ಶೇ. 33.33ರಷ್ಟು ಮೀಸಲಾತಿಯನ್ನು ಕಲ್ಪಿಸಿಕೊಟ್ಟು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡಲಾಗಿದೆ. ಇದು ರಾಜಕೀಯ ವ್ಯವಸ್ಥೆಯಲ್ಲಿ ಉತ್ತಮ ಬೆಳವಣಿಗೆಯಾಗಿದೆ. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಆಡಳಿತ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಪ್ರಜಾಪ್ರಭುತ್ವದ ಯಶಸ್ಸಿನ ಗುಟ್ಟು. ಹಾಗಾಗಿ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ಕೂಡ ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸಬೇಕಾದುದು ತುಂಬಾ ಅವಶ್ಯಕವಾಗಿದೆ. ತುಂಬಾ ವರ್ಷಗಳಿಂದಲೂ ಪುರುಷ ಪ್ರಧಾನ ಸಮಾಜದ ಕಪಿಮುಷ್ಟಿಯಲ್ಲಿ ಬಾಳುತ್ತಿದ್ದ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ವಂಚಿತರಾಗಿದ್ದ ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಗ್ರಾಮೀಣ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸುವರ್ಣ ಅವಕಾಶ ಮಾಡಿಕೊಟ್ಟಿದ್ದರಿಂದಾಗಿ ಮಹಿಳೆಯರಿಗೆ ಸಾರ್ವಜನಿಕ ರಂಗದಲ್ಲಿ ಪ್ರಮುಖ ಪಾತ್ರವಹಿಸಲು ಸುಗಮಮಾರ್ಗವಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡಿರುವ ಹಲವಾರು ನಿದರ್ಶನಗಳಿವೆ. ಅವುಗಳಲ್ಲಿ ಮೈಸೂರು ಜಿಲ್ಲೆಯ ಗ್ರಾಮೀಣ ಮಹಿಳಾ ಸದಸ್ಯರು ರಾಜಕೀಯ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿರುತ್ತಾರೆ. ಈ ರಾಜಕೀಯ ಭಾಗವಹಿಸುವಿಕೆಯಿಂದ ಮಹಿಳೆಯರಿಗೆ ಸಾಕಷ್ಟು ಅನುಕೂಲವಾಗಿರುವುದನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾಗಿ

## 1) ವ್ಯಕ್ತಿತ್ವ ವಿಕಾಸಕ್ಕೆ ಮುಕ್ತ ಅವಕಾಶ

ಮೈಸೂರು ಜಿಲ್ಲೆಯ ಗ್ರಾಮಪಂಚಾಯತ್ ತಾಲ್ಲೂಕ್ ಪಂಚಾಯತ್ ಹಾಗೂ ಜಿಲ್ಲಾಪಂಚಾಯತ್‌ಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುವ ಮಹಿಳೆಯರಿಗೆ ಮನೆಯಿಂದ ಹೊರಗೆ ಬಂದು ತಮ್ಮ ವ್ಯಕ್ತಿತ್ವ ವಿಕಾಸ ಮಾಡಿಕೊಳ್ಳಲು ಸ್ವಾತಂತ್ರ್ಯ ಸಿಕ್ಕಿದೆ ಎಂಬ ಅಭಿಪ್ರಾಯವನ್ನು 80%ರಷ್ಟು ಮಹಿಳಾ ಸದಸ್ಯರು ವ್ಯಕ್ತಪಡಿಸಿರುತ್ತಾರೆ. ಅಂದರೆ ಮನೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಗೃಹಿಣಿಯೆಂಬ ಹೆಸರಿನಲ್ಲಿ ಗುಲಾಮಳಾಗಿ ಬಂಧಿಯಾಗಿದ್ದ ಮಹಿಳೆಗೆ ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ಗ್ರಾಮೀಣ ರಾಜಕೀಯದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿದ್ದರಿಂದಾಗಿ ಅವರ ವ್ಯಕ್ತಿತ್ವ ವಿಕಾಸಕ್ಕೆ ಮುಕ್ತ ಅವಕಾಶ ದೊರೆತಂತಾಗಿದೆ. ಈ ವ್ಯವಸ್ಥೆಯಿಂದ ನಿಜಕ್ಕೂ ಮಹಿಳೆಯರಿಗೆ ಸ್ವತಂತ್ರ ಸಿಕ್ಕಿದೆ. ಭಯ, ಸಂಕೋಚ, ಹಿಂಜರಿಕೆ


* ಶಿಕ್ಷಕ ಸಂಶೋಧಕಿ, ಗಾಂಧೀ ಅಧ್ಯಯನ ಸಂಸ್ಥೆ, ಗಾಂಧೀಭವನ, ಮಾನಸಗಂಗೋತ್ರಿ, ಮೈಸೂರು

ಮನೋಭಾವನೆಯಿಂದ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟ ಮಹಿಳಾ ಸದಸ್ಯರು ಈ ಎಲ್ಲ ಅಂಶಗಳ ದೂರತಳ್ಳಿ "ಹಳ್ಳಿಯಲ್ಲಿ ಹುಟ್ಟಿದ್ದರೂ ದಿಲ್ಲಿಗೆ ಹೋಗಿ ಏನೇ ಕೆಲಸವನ್ನಾದರೂ ಮಾಡಿಕೊಂಡು ಬರುವಷ್ಟು ಧೈರ್ಯ, ಸಾಮರ್ಥ್ಯ, ತಿಳಿವಳಿಕೆ ಬಂದಿದೆ" ಎನ್ನುತ್ತಾರೆ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀಮತಿ ಸುಧಾಮಣಿಯವರು.

ಮಹಿಳಾ ಸದಸ್ಯರಿಗೆ ಸ್ವತಂತ್ರ ಸಿಕ್ಕಿದ್ದರಿಂದಾಗಿ ಪುರುಷರ ಅವಲಂಬನೆಯಿಂದ ಇರುವುದು ಬಹುಮಟ್ಟಿಗೆ ಕಡಿಮೆಯಾಗಿದೆಯೆಂಬುದು 65%ರಷ್ಟು ಮಹಿಳಾ ಸದಸ್ಯರ ಅಭಿಪ್ರಾಯವಾಗಿದೆ. ಅಲ್ಲದೇ ಅವರ ಹೆಣ್ಣು ಮಕ್ಕಳಿಗೂ ಕೂಡ ಹೊರಗೆ ಕಳುಹಿಸಿ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಲು ಅನುಕೂಲವಾಗಿದೆಯಂತೆ. ಹಾಗೆಯೇ ಸದಸ್ಯರು ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚೆಯಲ್ಲಿ ಭಾಗವಹಿಸಿದುದರ ಪರಿಣಾಮವಾಗಿ ಅವರಲ್ಲಿ ತಮ್ಮ ಮಕ್ಕಳನ್ನು ಈ ರೀತಿ ಉನ್ನತ ಅಧಿಕಾರಿಗಳನ್ನಾಗಿ ಮಾಡಬೇಕೆಂಬ ಹಂಬಲ ಉಂಟಾಗಿ ತಮ್ಮ ಮಕ್ಕಳಿಗೂ ಉನ್ನತ ಶಿಕ್ಷಣ ಕೊಡಿಸಲು ಅನುಕೂಲವಾಯಿತೆಂಬುದು 1995 ಹಾಗೂ 2000ನೇ ವರ್ಷದಲ್ಲಿ ಮೈಸೂರಿನ ಜಿಲ್ಲಾಪಂಚಾಯತ್ ಸದಸ್ಯರಾಗಿದ್ದ ಹಾಗೂ ಅಧ್ಯಕ್ಷರಾಗಿದ್ದ ಶಿವಗಾಮೆ ಹಾಗೂ ವನಜಾಕ್ಷಿಯವರ ಅಸ್ಪಷ್ಟ ಅಭಿಪ್ರಾಯವಾಗಿದೆ. ಹಾಗೆಯೇ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗಾದ ಅನುಭವವನ್ನು ತಮ್ಮ ಮಕ್ಕಳಿಗೂ ತಿಳಿಯಪಡಿಸಿ ಮುಂದೆ ಉತ್ತಮ ಪ್ರಜೆ ಹಾಗೂ ದಕ್ಷ ರಾಜಕೀಯ ನಾಯಕರನ್ನಾಗಿ ಮಾಡಬೇಕೆಂಬ ಹಂಬಲ ಉಂಟಾಗಿದೆಯಂತೆ. ಅಲ್ಲದೆ ಅವರು ನಿರ್ವಹಿಸುವ ಹಲವಾರು ಉತ್ತಮ ಕಾರ್ಯಗಳಿಂದ ಅವರಿಗೆ ಸಮಾಜದಲ್ಲಿ ಗೌರವ, ಉತ್ತಮ ಸ್ಥಾನಮಾನ ದೊರಕಿದೆ. ಹೀಗೆ ಮಹಿಳಾ ಸದಸ್ಯರಿಗೆ ರಾಜಕೀಯ ಭಾಗವಹಿಸುವಿಕೆಯಿಂದಾಗಿ ಹೆಚ್ಚಿನ ಸ್ವಾತಂತ್ರ್ಯ ದೊರೆತು ವೈಯಕ್ತಿಕವಾಗಿ ಅಭಿವೃದ್ಧಿ ಹೊಂದಿ ತಮ್ಮ ಮಕ್ಕಳ ಭವಿಷ್ಯವನ್ನು ಉತ್ತಮಪಡಿಸಲು ಅವಕಾಶ ವಾಗಿದೆ.

## 2) ಗ್ರಾಮೀಣ ಜನರ ಸಮಸ್ಯೆಗಳನ್ನು ಅರಿಯಲು ಹಾಗೂ ಅನುಕೂಲ ಮಾಡಿಕೊಡಲು ಅವಕಾಶ

ಮೈಸೂರು ಜಿಲ್ಲೆಯ ಗ್ರಾಮೀಣ ಮಹಿಳಾ ಸದಸ್ಯರು ತಮ್ಮ ಕ್ಷೇತ್ರ ವ್ಯಾಪ್ತಿಗೆ ಬರುವ ಪ್ರತಿಯೊಂದು ಗ್ರಾಮಕ್ಕೂ ಭೇಟಿ ನೀಡಿದ್ದು ಅಲ್ಲಿನ ಜನರ ಸಮಸ್ಯೆಗಳನ್ನು ಕೇಳಿ ತಿಳಿದು ಕೊಂಡಿರುತ್ತಾರೆ. ಗ್ರಾಮೀಣ ಜನರು ಏನೆಲ್ಲ ಸಮಸ್ಯೆಗಳನ್ನು, ಕುಂದುಕೊರತೆಗಳನ್ನು ಎದುರಿಸುತ್ತಿದ್ದಾರೆ, ಅವರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಬೇಕು ಎಂಬುದರ ಬಗ್ಗೆ ಅರಿವುಂಟಾಗಿದ್ದು ಆ ನಿಟ್ಟಿನಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಎಲ್ಲಾ ಸದಸ್ಯರಿಗೂ ಗ್ರಾಮೀಣ ಜನರ ಬಡತನ, ಅಜ್ಞಾನ ಹಾಗೂ ಭ್ರಷ್ಟಚಾರದಿಂದ ಬಡಜನರ ಮೇಲೆ ಉಂಟಾಗುವ ಪರಿಣಾಮ, ಅನಾಹುತಗಳ ಬಗ್ಗೆ ಅರಿವುಂಟಾಗಿದ್ದು ಆದಷ್ಟು ಅವರಿಗೆ ಅನುಕೂಲ ಮಾಡಿಕೊಟ್ಟು ಹೆಚ್ಚಿನ ಜನರ ಸೇವೆ ಮಾಡಬೇಕೆಂಬ ಮನೋಭಾವನೆ ಅವರಲ್ಲಿ ಮೂಡಿದೆ. ಅಲ್ಲದೆ ಜನರ ಸಮಸ್ಯೆಗಳಲ್ಲಿ ಇದು ಸರಿ ತಪ್ಪು ಎಂದು ಹೇಳುವಷ್ಟು ಸಾಮಾರ್ಥ್ಯ ಹಾಗೂ ಸ್ವಂತ ನಿರ್ಧಾರ ತೆಗೆದುಕೊಳ್ಳುವಷ್ಟು ಧೈರ್ಯಬಂದಿದೆ. ಆ ಸಮಸ್ಯೆಗಳನ್ನು ಬಗೆಹರಿಸುವ ವಿಧಾನಗಳನ್ನು ತಿಳಿದು ಕೊಂಡಿರುತ್ತಾರೆ. ಹೇಗೆಂದರೆ ರಾಜಕೀಯ ಕ್ಷೇತ್ರದಲ್ಲಿನ ಪ್ರವೇಶ ದಿಂದಾಗಿ ಉನ್ನತ ಅಧಿಕಾರಿಗಳ ಪರಿಚಯವಾಗಿದ್ದು ಯಾವ ಯಾವ ಇಲಾಖೆಯಿಂದ ಜನರಿಗೆ ಏನೇನೂ ಸೌಲಭ್ಯಗಳು ಸಿಗುತ್ತದೆ ಯಾವ ಇಲಾಖೆಯಿಂದ ಜನರ, ಜನರ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ಸಾಧ್ಯವೆಂಬುದನ್ನು ತಿಳಿದುಕೊಂಡು ಜನರಿಗೆ ಮಾರ್ಗದರ್ಶನ ಮಾಡಲು ಅವಕಾಶವಾಗಿದೆ. ಹಾಗೆಯೇ ಗ್ರಾಮೀಣ ಮಹಿಳೆಯರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅರಿವುಂಟಾಗಿದ್ದು ಅವರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಇರುವ ಕಾನೂನಿನ ಬಗ್ಗೆ ತಿಳುವಳಿಕೆಯುಂಟಾಗಿದ್ದು ತುಂಬಾ ಅನುಕೂಲವಾಗಿದೆ ಎಂಬುದು ಎಲ್ಲಾ ಮಹಿಳಾ ಸದಸ್ಯರ ಅಭಿಪ್ರಾಯವಾಗಿದೆ. ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸಲು ಅನೇಕ ಮಹಿಳಾ ಸದಸ್ಯರು ಧೈರ್ಯವಾಗಿ ಪೋಲೀಸ್‌ಠಾಣೆಗಳ ಮೆಟ್ಟಿಲೇರಿರುತ್ತಾರೆ. ಅಲ್ಲದೆ ಸರ್ಕಾರದಿಂದ ಬರುವ ಅನುದಾನ ಹಾಗೂ ಸೌಲಭ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದಿದ್ದು ಜನರಿಗೆ ಅವುಗಳನ್ನು ತಲುಪಿಸಲು ಬಹಳಷ್ಟು ಅನುಕೂಲವಾಗಿದೆಯೆಂಬುದು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮಪಂಚಾಯತ್ ಮಹಿಳಾ ಸದಸ್ಯರ ಅಭಿಪ್ರಾಯವಾಗಿದೆ.

ಹೀಗೆ ಮಹಿಳಾ ಸದಸ್ಯರಲ್ಲಿ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಹುದ್ದೆಗೇರಿ ಜನರಿಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂಬ ಆಸಕ್ತಿ ಮೂಡಿರುವುದು ನಿಜಕ್ಕೂ ಶ್ಲಾಘನೀಯವಾದುದು. ಅಲ್ಲದೆ ಜಿಲ್ಲಾಪಂಚಾಯತ್ ಹಾಗೂ

ತಾಲ್ಲೂಕು ಪಂಚಾಯತ್ ಸದಸ್ಯರುಗಳು ಅಭಿವೃದ್ಧಿ ಕಾರ್ಯಗಳನ್ನು ವೀಕ್ಷಿಸಲು ಬೇರೆ ರಾಜ್ಯಗಳಿಗೆ ಪ್ರವಾಸ ಹೋಗಿದ್ದರಿಂದಾಗಿ ನೀರಿನ ಸದ್ಬಳಕೆ, ಅಂತರ್ಜಲ ಕಾಪಾಡುವುದರ ಬಗ್ಗೆ ಹಾಗೂ ಗ್ರಾಮಾಭಿವೃದ್ಧಿಗಳ ಬಗ್ಗೆ ಹೆಚ್ಚಿನ ಮಾರ್ಗೋಪಾಯಗಳನ್ನು ತಿಳಿದುಕೊಂಡಿದ್ದು ತಮ್ಮ ಕ್ಷೇತ್ರದ ಜನರಿಗೆ ಅವುಗಳ ಬಗ್ಗೆ ಅರಿವು ಮೂಡಿಸಿರುವುದು ತುಂಬಾ ಅನುಕೂಲವಾಗಿದೆ ಹಾಗೂ ಜನಪ್ರತಿನಿಧಿಗಳಾಗಿದ್ದರಿಂದ ಹೆಚ್ಚಿನ ಜನರಿಗೆ ಸೇವೆ ಸಲ್ಲಿಸಲು ಉತ್ತಮ ಅವಕಾಶ ಸಿಕ್ಕಿದೆಯೆಂಬುದು ಎಲ್ಲಾ ಮಹಿಳಾ ಸದಸ್ಯರ ಅಭಿಪ್ರಾಯ ವಾಗಿದೆ.

### 3) ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸಬೇಕೆಂಬ ಆಸಕ್ತಿ ಹೆಚ್ಚಾಗಿದೆ

ಮಹಿಳಾ ಸದಸ್ಯರ ಪ್ರಕಾರ ಅವರು ಮನೆಯಿಂದ ಹೊರಬಂದು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದಾಗ ರಾಜಕೀಯ ಎಂದರೇನು? ಸದಸ್ಯರ ಅಧಿಕಾರ ಮತ್ತು ಕಾರ್ಯಗಳೇನು? ಸಭೆಗಳು ನಡೆಯುವ ರೀತಿನೀತಿಗಳೇನು ಎಂಬುದರ ಬಗ್ಗೆ ಯಾವುದೇ ತಿಳುವಳಿಕೆ ಇರಲಿಲ್ಲ. ಆದರೆ ಅವರು ರಾಜಕೀಯ ಕ್ಷೇತ್ರಕ್ಕೆ ಬಂದ ಒಂದೆರಡು ವರ್ಷದೊಳಗೆ ಮೇಲಿನ ಎಲ್ಲ ವಿಷಯಗಳ ಬಗ್ಗೆ ಅರಿವು ಉಂಟಾಗಿ ಉಳಿದ ಅವಧಿಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಇದರಿಂದ ಮಹಿಳಾ ಸದಸ್ಯರಿಗೆ ರಾಜಕೀಯ ಕ್ಷೇತ್ರದಲ್ಲಿ ಅವರಿಗೆ ಹೆಚ್ಚಿನ ಅನುಭವ ತಿಳುವಳಿಕೆ ಉಂಟಾಗಿರುವುದನ್ನು ಗಮನಿಸಬಹುದು. "ಪ್ರಾರಂಭದಲ್ಲಿ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟಾಗ ಹೇಗಪ್ಪ ರಾಜಕೀಯ ಕಾರ್ಯಗಳನ್ನು ನಿಭಾಯಿಸುವುದು ಎನ್ನುವ ಭಾವನೆ ಹೊಂದಿದ್ದ ಮಹಿಳಾ ಸದಸ್ಯರುಗಳಿಗೆ ಈಗ ಹೇಗಪ್ಪ ರಾಜಕೀಯ ಬಿಡೋದು" ಎನ್ನಿಸಿದೆಯಂತೆ. ಹಾಗಾಗಿ ಮಹಿಳೆಯರು ರಾಜಕೀಯ ಕ್ಷೇತ್ರದಿಂದ ಹೆಚ್ಚಿನ ಸ್ಫೂರ್ತಿ ಪಡೆದುಕೊಂಡಿದ್ದು ಈ ಕ್ಷೇತ್ರದಲ್ಲಿ ಮುಂದುವರೆಯಲು ಬಹಳ ಉತ್ಸುಕರಾಗಿದ್ದಾರೆ ಹಾಗೂ ಉಳಿದ ಮಹಿಳೆಯರಿಗೂ ಮಾದರಿ ಎನಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಅವರಿಗಾದ ಉತ್ತಮ ಅನುಭವದಿಂದಾಗಿ ಅವರಲ್ಲಿ ರಾಜಕೀಯ ಜ್ಞಾನ ಹೆಚ್ಚಾಗಿ ಈ ಕ್ಷೇತ್ರದಲ್ಲಿ ಮುಂದುವರಿಯಬಹುದೆಂಬ ಆತ್ಮ ವಿಶ್ವಾಸ ಮೂಡಿದೆ. ಈ ಆತ್ಮವಿಶ್ವಾಸದಿಂದ ಯಾರ ಬೆಂಬಲವೂ ಇಲ್ಲದೆ ಮುನ್ನುಗ್ಗಬಹುದೆಂಬ ಅರಿವು ಉಂಟಾಗಿದೆ. ಹೇಗೆಂದರೆ ದಕ್ಷತೆಯಿಂದ ಪ್ರಾಮಾಣಿಕವಾಗಿ ಕೆಲಸಮಾಡಿ ಜನರ ಮನ್ನಣೆ ಗಳಿಸಿದರೆ ನಾವು ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸಬಹುದೆಂಬುದು ಉತ್ತಮವಾಗಿ ಕಾರ್ಯನಿರ್ವಹಿಸಿರುವ ಮಹಿಳಾ ಸದಸ್ಯರ ಅಭಿಪ್ರಾಯವಾಗಿದೆ. ಹಾಗಾಗಿ ಗ್ರಾಮ ಪಂಚಾಯತ್ ಸದಸ್ಯರಿಗೆ ತಾಲ್ಲೂಕು ಪಂಚಾಯತ್ ಸದಸ್ಯರಾಗಬೇಕೆಂಬುದು, ತಾಲ್ಲೂಕು ಪಂಚಾಯತ್ ಸದಸ್ಯರಿಗೆ ಜಿಲ್ಲಾ ಪಂಚಾಯತ್ ಸದಸ್ಯರಾಗಬೇಕೆಂಬುದು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರಿಗೆ ಕೇಂದ್ರ ಹಾಗೂ ರಾಜ್ಯಶಾಸಕಾಂಗಗಳ ಸದಸ್ಯರಾಗಬೇಕೆಂಬ ಉನ್ನತ ಅಕಾಂಕ್ಷೆ ಹೊಂದಿದ್ದಾರೆ. ಹೀಗೆ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳನ್ನು ಪಡೆದು ಗ್ರಾಮೀಣ ಜನರ ಬದುಕನ್ನು ಹಸನು ಮಾಡಬೇಕೆಂಬುದು ಅವರ ಮನದಾಳದ ಮಾತಾಗಿದೆ. ಈ ಬೆಳವಣಿಗೆಯನ್ನು ಗಮನಿಸಿದಾಗ ಇಷ್ಟು ವರ್ಷಗಳ ಕಾಲ ರಾಜಕೀಯ ಕ್ಷೇತ್ರಕ್ಕೆ ಬರಲು ನಿರಾಸಕ್ತಿ ಹೊಂದಿದ್ದ ಮಹಿಳೆಯರು ಇತ್ತೀಚೆಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ರಾಜಕೀಯ ಕ್ಷೇತ್ರದಲ್ಲಿ ಉಂಟಾದ ಉತ್ತಮ ಬದಲಾವಣೆ ಎನ್ನಬಹುದು. ಇಂದು ಮಹಿಳಾ ಸದಸ್ಯರು ರಾಜಕೀಯ ಕ್ಷೇತ್ರದಲ್ಲಿ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಹಾಗೂ ಆಡಳಿತ ನಡೆಸುವ ಸಾಮರ್ಥ್ಯ ಪಡೆದುಕೊಂಡಿರುತ್ತಾರೆ. ಇದರಿಂದ ಮೀಸಲಾತಿ ಸ್ಥಾನಗಳಲ್ಲದೆ ಸಾಮಾನ್ಯ ಕ್ಷೇತ್ರಗಳಲ್ಲೂ ಪುರುಷರ ಜೊತೆ ಸ್ಪರ್ಧಿಸಿ ಜಯ ಗಳಿಸಿ ರಾಜಕೀಯ ಕ್ಷೇತ್ರದಲ್ಲಿ ಪ್ರಮುಖಪಾತ್ರ ವಹಿಸಿರುವುದು ಕಂಡುಬಂದಿದೆ. ಹಾಗಾಗಿ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳನ್ನು ಗಳಿಸಿ ತಮ್ಮದೇ ಆದ ಕೊಡುಗೆಗಳನ್ನು ನೀಡಿ ಸಮಾಜದಲ್ಲಿ ಉತ್ತಮ ಬದಲಾವಣೆ ತರಬೇಕೆಂಬ ಉದ್ದೇಶ ಅವರಲ್ಲಿ ಉಂಟಾಗಿರುವುದು ರಾಜಕೀಯ ಭಾಗವಹಿಸುವಿಕೆಗೆ ತುಂಬಾ ಅನುಕೂಲಕರವಾಗಿದೆ.

"ಸಬಲೀಕರಣದ ಉದ್ದೇಶ ಸಾಧಿಸಲು ಸದೃಢ ವಿಶ್ವಾಸ, ಸ್ವಪ್ರತಿಷ್ಠೆ, ಶ್ರೇಷ್ಠ ವ್ಯಕ್ತಿತ್ವ ಮುಂತಾದ ಗುಣಗಳನ್ನು ಹೊಂದಿರುವ ಸಮರ್ಥ ಮಹಿಳಾ ನಾಯಕರ ಉದುಸುವಿಕೆಯ ಅವಶ್ಯಕತೆ ಇದೆ ಎಂದಿದ್ದ ಮಹಾತ್ಮ ಗಾಂಧೀಜಿಯವರ ಆಶಯ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಈಡೇರುತ್ತಿದೆ ಎಂಬುದು ಸಂತಸದ ಸಂಗತಿಯಾಗಿದೆ".

❑

## ನುಡಿ ನಿರ್ಮಲ

ಗ್ರಾಮೀಣ ಪ್ರದೇಶಗಳಲ್ಲಿ ಕಾಲರಾ, ಕಾಮಾಲೆ, ಅತಿಸಾರಬೇಧಿ, ವಿಷಮಶೀತ ಜ್ವರ, ಅನಿಮಿಯಾ, ಉದರ ಸಂಬಂಧಿ ಕಾಯಿಲೆ ಮುಂತಾದ ರೋಗಗಳು ನಿರಂತರವಾಗಿ ಕಾಡುತ್ತಿರುತ್ತವೆ. ಅದರಲ್ಲೂ ಮಳೆಗಾಲ ಬಂತೆಂದರೆ ಈ ಕಾಯಿಲೆಗಳು ಇನ್ನಷ್ಟು ಹೆಚ್ಚು ಉಲ್ಬಣಗೊಳ್ಳುತ್ತವೆ. ಇದಕ್ಕೆ ಮುಖ್ಯ ಕಾರಣ ಗ್ರಾಮೀಣ ಜನರ ನೈರ್ಮಲ್ಯ ಸಂಬಂಧಿ ಅಭ್ಯಾಸಗಳು. ಶುದ್ದ ನೀರು ಮತ್ತು ಸ್ವಚ್ಛತೆಯ ಅಭ್ಯಾಸಗಳು ಜನರ ಜೀವನ ಸುಧಾರಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಅಂಶಗಳಾಗಿವೆ. ಆದ್ದರಿಂದಲೇ ಸಂಪೂರ್ಣ ಗ್ರಾಮ ನೈರ್ಮಲ್ಯದ ಮೂಲಕ ಗ್ರಾಮೀಣ ಭಾರತವನ್ನು ಸುಧಾರಣೆಯತ್ತ ಕೊಂಡೊಯ್ಯುವ ಮಹತ್ತರ ಉದ್ದೇಶದೊಂದಿಗೆ ಕೇಂದ್ರ ಸರ್ಕಾರವು ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಜಾರಿಗೊಳಿಸುತ್ತಿದೆ. ಅಷ್ಟೇ ಅಲ್ಲದೆ, ಸಂಪೂರ್ಣ ನೈರ್ಮಲ್ಯವನ್ನು ಸಾಧಿಸಿದ ಗ್ರಾಮ ಪಂಚಾಯಿತಿಗಳಿಗೆ ನಿರ್ಮಲ ಗ್ರಾಮ ಪುರಸ್ಕಾರವನ್ನು ನೀಡಿ ಗೌರವಿಸುತ್ತಿದೆ. ಕೇಂದ್ರ ಸರ್ಕಾರ ಈ ಪ್ರಶಸ್ತಿಯನ್ನು ಸ್ಥಾಪಿಸುವಲ್ಲಿ ಮಹತ್ವದ ಉದ್ದೇಶವನ್ನು ಹೊಂದಿದೆ. ಸಂಪೂರ್ಣ ನೈರ್ಮಲ್ಯ ಸಾಧನೆಗೆ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಜನ ಸಮುದಾಯ ಸ್ವಚ್ಛತೆಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಈ ಪ್ರಶಸ್ತಿಯ ಬಹುಮುಖ್ಯ ಆಶಯವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ನೈರ್ಮಲ್ಯವನ್ನು ತರುವುದು ಈ ಯೋಜನೆಯ ಪ್ರಮುಖ ಉದ್ದೇಶ. ಪ್ರತಿ ಕುಟುಂಬವೂ ಶೌಚಾಲಯವನ್ನು ಹೊಂದಿರಬೇಕು ಹಾಗೂ ಮಲ–ಮೂತ್ರಗಳ ವಿಸರ್ಜನೆಗೆ ಶೌಚಾಲಯವನ್ನೇ ಬಳಸಬೇಕು. ಶಾಲೆ ಮತ್ತು ಅಂಗನವಾಡಿಗಳ ಪುಟ್ಟ ಮಕ್ಕಳೂ ಶೌಚಾಲಯಗಳನ್ನು ಬಳಸಬೇಕು. ಈ ಮೂಲಕ ಚಿಕ್ಕವಯಸ್ಸಿನಿಂದಲೇ ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಮನೆಯ ಕಸ, ಸಮುದಾಯದ ಕಸ, ಬಳಸಿದ ನೀರು ವ್ಯವಸ್ಥಿತವಾಗಿ ವಿಲೇವಾರಿಯಾಗುವಂತೆ ನೋಡಿಕೊಳ್ಳಬೇಕು. ವ್ಯಕ್ತಿಗಳು, ಮನೆಗಳು, ಮನೆಯ ಅಂಗಳ, ಗ್ರಾಮದ ಬೀದಿಗಳು ಹಾಗೂ ಒಟ್ಟಾರೆ ಗ್ರಾಮ ಪಂಚಾಯಿತಿಯಲ್ಲಿ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸಬೇಕು. ಸಂಪೂರ್ಣ ನೈರ್ಮಲ್ಯವನ್ನು ಸಾಧಿಸಿದ ಗ್ರಾಮ ಪಂಚಾಯಿತಿಗಳು ಮಾತ್ರ ಕೇಂದ್ರ ಸರ್ಕಾರ ನೀಡುವ ನಿರ್ಮಲ ಗ್ರಾಮ ಪುರಸ್ಕಾರವನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ.

ಪ್ರಸಕ್ತ ಸಾಲಿನಲ್ಲಿ ರಾಜ್ಯದಿಂದ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವ ಗ್ರಾಮ ಪಂಚಾಯಿತಿಗಳು ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿರುತ್ತದೆ. ಸಂಪೂರ್ಣ ನೈರ್ಮಲ್ಯ ಸಾಧನೆಯ ಜೊತೆಗೆ ಸುಸ್ಥಿರತೆಯನ್ನು ಕಾಪಾಡುವ ಮೂಲಕ ಕೇಂದ್ರ ಸರ್ಕಾರದಿಂದ ನಡೆಸಲಾಗುವ ಮೂರನೇ ವ್ಯಕ್ತಿ/ಸಂಸ್ಥೆಗಳ ಮೌಲ್ಯ ಮಾಪನದಲ್ಲಿ ಶಿಫಾರಸ್ಸುಗೊಳ್ಳಬೇಕಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲ ಗ್ರಾಮ ಪಂಚಾಯಿತಿಗಳೂ ಕಾರ್ಯೋನ್ಮುಖವಾಗಲಿ ಹಾಗೂ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಲಿ ಎಂಬ ಆಶಯ ನನ್ನದು.

– **ಡಾ|| ಜೆ. ರವಿಶಂಕರ್,** ಐ.ಎ.ಎಸ್
ನಿರ್ದೇಶಕರು,
ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ

# ಗ್ರಾಮೀಣ ನೈರ್ಮಲ್ಯ ಅನುಷ್ಠಾನಕ್ಕೆ ವಿಶೇಷ ಆದ್ಯತೆ



ಗ್ರಾಮೀಣ ಸ್ವಚ್ಛತೆ ಎಂಬುದು ಅತ್ಯಂತ ಸಂಕೀರ್ಣ ಸ್ವರೂಪದ್ದಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ. ನೈರ್ಮಲ್ಯದ ವಿಷಯದಲ್ಲಿ ಗ್ರಾಮೀಣ ಜನರು ಹೊಂದಿರುವ ನಂಬಿಕೆಗಳು, ಮನೋಭಾವನೆಗಳು, ರೂಢಿಸಿಕೊಂಡಿರುವ ಅಭ್ಯಾಸಗಳು, ಬೆಳೆಸಿಕೊಂಡಿರುವ ವರ್ತನೆಗಳು ಮುಂತಾದ ಸಂಗತಿಗಳಿಂದಾಗಿ ಗ್ರಾಮೀಣ ನೈರ್ಮಲ್ಯ ಕ್ಷೇತ್ರದಲ್ಲಿ ಸುಧಾರಣೆಯ ಪ್ರಕ್ರಿಯೆಗಳು ಕ್ಷಿಪ್ರ ಗತಿಯಲ್ಲಿ ಸಾಗುತ್ತಿಲ್ಲ. ರಾಜ್ಯದಲ್ಲಿ 1985ರಿಂದಲೂ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳು ಜಾರಿಗೊಂಡಿದ್ದರೂ ಸಹ ಗ್ರಾಮೀಣ ಜನತೆ ಆ ಎಲ್ಲ ಯೋಜನೆಗಳನ್ನು ಸ್ವೀಕರಿಸುವಲ್ಲಿ ನಿರ್ಲಕ್ಷ್ಯ ತೋರಿದ್ದಂತೂ ದಿಟ. ಯಾಕೆಂದರೆ ಹಳ್ಳಿಗಾಡಿನ ಜನತೆ ನೂರಾರು ವರ್ಷಗಳಿಂದ ತಮ್ಮ ಮಲ-ಮೂತ್ರಗಳ ವಿಸರ್ಜನೆಗೆ ಬಯಲನ್ನೇ ಅವಲಂಬಿಸಿದ್ದರು. ಅದು ಅವರ ಬದುಕಿನ ಹಾಗೂ ಅಭ್ಯಾಸಗಳ ಭಾಗವಾಗಿ ಹೋಗಿತ್ತು. ಇಂತಹ ಒಂದು ರೂಢಿಗತ ಅಭ್ಯಾಸವನ್ನು ತಡೆಗಟ್ಟಲು ಕೇವಲ ಒಂದು ಶೌಚಾಲಯ ನಿರ್ಮಿಸಿಕೊಟ್ಟ ಮಾತ್ರಕ್ಕೆ ಸಾಧ್ಯವಾಗಲಿಲ್ಲ. ಬದಲಾಗಿ ಈಗಾಗಲೇ ಅವರಲ್ಲಿ ನೆಲೆಗೊಂಡಿದ್ದ ಮನೋಸ್ಥಿತಿಯನ್ನು ಬದಲಾಯಿಸುವುದು ಅತ್ಯಂತ ಪ್ರಮುಖ ಸಂಗತಿಯಾಗಿತ್ತು. ಗ್ರಾಮೀಣ ಜನರ ವರ್ತನೆ, ಮನೋಸ್ಥಿತಿ ಹಾಗೂ ಅನೈರ್ಮಲ್ಯದ ಅಭ್ಯಾಸಗಳಲ್ಲಿ ಬದಲಾವಣೆ ತರದೆ ಕೇವಲ ಶೌಚಾಲಯಗಳ ನಿರ್ಮಾಣದಿಂದ ಬದಲಾವಣೆ ತರುವುದು ಅಸಾಧ್ಯದ ಸಂಗತಿಯಾಗಿತ್ತು. ಈ ಮಹತ್ವದ ಅನುಭವ, ಆಶಯ ಹಾಗೂ ಅಂಶಗಳ ಹಿನ್ನೆಲೆಯಲ್ಲಿ ರೂಪುಗೊಂಡದ್ದೇ ಸಂಪೂರ್ಣ ಸ್ವಚ್ಛತಾ ಆಂದೋಲನ. ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳ ಮೂಲಕ, ಜನಜಾಗೃತಿ ಕಾರ್ಯಕ್ರಮಗಳ ಮೂಲಕ, ಪಂಚಾಯತ್ ರಾಜ್ ಸಂಸ್ಥೆಗಳು, ಜನಸಮುದಾಯ, ಸ್ವಯಂಸೇವಾ ಸಂಸ್ಥೆಗಳು ಹಾಗೂ ಅಧಿಕಾರಿಗಳು ಹೀಗೆ ಎಲ್ಲರೂ ಸೇರಿ ಜನಾಂದೋಲನ ಮಾದರಿಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.



ಸಂಪೂರ್ಣ ಸ್ವಚ್ಛತಾ ಆಂದೋಲನವು ಜಾರಿಯಾದ ನಂತರದ ಆರು ವರ್ಷಗಳಲ್ಲಿ ರಾಜ್ಯದಲ್ಲಿ ಸಾಕಷ್ಟು ಸ್ವಚ್ಛತೆಯ ಕೆಲಸಗಳಾಗಿವೆ. ಆದರೆ ಸಾಧಿಸಬೇಕಾದ್ದು ಇನ್ನೂ ಸಾಕಷ್ಟಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ದಕ್ಷಿಣ ಭಾಗದ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ ಉತ್ತಮ ಸಾಧನೆ ಮಾಡಲಾಗಿದೆ. ಈ ಜಿಲ್ಲೆಗಳ ಹೆಚ್ಚು ಹೆಚ್ಚು ಜನರು ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಂಡಿದ್ದಾರೆ. ಹಾಗೆಯೇ ರಾಜ್ಯದ ಬೆಳಗಾವಿ, ಧಾರವಾಡ, ಹಾಸನ, ಮೈಸೂರು, ಬೆಂಗಳೂರು ನಗರ, ದಾವಣಗೆರೆ, ಮಂಡ್ಯ ಮುಂತಾದ ಜಿಲ್ಲೆಗಳಲ್ಲೂ ಸ್ವಚ್ಛತೆಯ ಕೆಲಸಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿವೆ. ಬಾಗಲಕೋಟೆ, ಗದಗ, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮುಂತಾದ ಜಿಲ್ಲೆಗಳಲ್ಲಿ



ಉತ್ತಮ ಮಟ್ಟದ ಪ್ರಯತ್ನಗಳು ನಡೆಯುತ್ತಿವೆ. ಆದಾಗ್ಯೂ ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಬಿಜಾಪುರ, ರಾಯಚೂರು, ಚಾಮರಾಜನಗರ, ಗುಲ್ಬರ್ಗ, ಯಾದಗಿರಿ, ಕೊಪ್ಪಳ, ಬೀದರ್, ಬಳ್ಳಾರಿ ಮತ್ತು ಹಾವೇರಿ ಮುಂತಾದ ಜಿಲ್ಲೆಗಳು ಅತ್ಯಂತ ಹಿಂದುಳಿದಿವೆ. ಈ ಜಿಲ್ಲೆಗಳಲ್ಲಿ ಸ್ವಚ್ಛತೆಯ ಸಾಧನೆಯನ್ನು ತ್ವರಿತಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸಿ, ಜವಾಬ್ದಾರಿ ನೀಡುವ ಮೂಲಕ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.



ನೈರ್ಮಲ್ಯದ ಅಭ್ಯಾಸದಲ್ಲಿ ತೀರ ಹಿಂದುಳಿದಿರುವ ಹೈದ್ರಾಬಾದ್ ಕರ್ನಾಟಕ ಭಾಗದ ಆರು ಜಿಲ್ಲೆಗಳಲ್ಲಿ ಇದುವರೆಗೆ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮ ಅಷ್ಟೊಂದು ಹೇಳಿಕೊಳ್ಳುವಂತಹ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧಿಸಿಲ್ಲ, ಆದ್ದರಿಂದ ಈ ಕಾರ್ಯಕ್ರಮಕ್ಕೆ ಕಾಯಕಲ್ಪ ನೀಡಬೇಕು, ಸದರಿ ಜಿಲ್ಲೆಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಮೊದಲ ಆದ್ಯತೆಯಾಗಿ ತೆಗೆದುಕೊಂಡು ಪ್ರಗತಿಯನ್ನು ಇಮ್ಮಡಿಗೊಳಿಸಬೇಕು, ಎಂಬ ಅಂಶಗಳ ಬಗ್ಗೆ ಚಿಂತನ ಮಂಥನ ನಡೆಸಲು ಹಾಗೂ ಉತ್ತಮ ಕಾರ್ಯತಂತ್ರಗಳೊಂದಿಗೆ ಸ್ವಚ್ಛತೆಯ ಪ್ರಗತಿಯನ್ನು ತೀವ್ರಗೊಳಿಸಲು ಹಾಗೂ ಪ್ರಗತಿ ಹಿಂದುಳಿದಿರುವ ಜಿಲ್ಲೆಗಳಲ್ಲಿ ಗ್ರಾಮೀಣ ನೈರ್ಮಲ್ಯ ಪ್ರಗತಿಯನ್ನು ತೀವ್ರಗೊಳಿಸುವ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ॥ ಅಮಿತಾ ಪ್ರಸಾದ್ ಸೂಚನೆಯ ಮೇರೆಗೆ ಹಾಗೂ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ನಿರ್ದೇಶಕರಾದ ಡಾ॥ ಜೆ. ರವಿಶಂಕರ್ ಅವರ ಸಲಹೆಯ ಮೇರೆಗೆ ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸಲು ತೀರ್ಮಾನಿಸಲಾಯಿತು. ಅದರಂತೆ ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಕೊಪ್ಪಳ, ಬಳ್ಳಾರಿ, ಬೀದರ್, ಯಾದಗಿರಿ, ಗುಲ್ಬರ್ಗ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸಲಾಗಿತ್ತು.



ಸಂಪೂರ್ಣ ಸ್ವಚ್ಛತಾ ಆಂದೋಲನದ ತ್ವರಿತಗತಿಯ ಅನುಷ್ಠಾನಕ್ಕಾಗಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಅಪರ ನಿರ್ದೇಶಕರು, ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ನೆರವು ಘಟಕದ ಅಧಿಕಾರಿಗಳು ಹಾಗೂ ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ತಾಲ್ಲೂಕು ಹಾಗೂ ಕ್ಲಸ್ಟರ್ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಇತರ ಅಧಿಕಾರಿಗಳು ಭಾಗವಹಿಸಿದ್ದರು.





ಸದರಿ ಕಾರ್ಯಾಗಾರಗಳಲ್ಲಿ ಕಾರ್ಯಾಗಾರದ ಉದ್ದೇಶ, ಜಿಲ್ಲೆಯ ಪ್ರಸ್ತುತ ನೈರ್ಮಲ್ಯ ಪರಿಸ್ಥಿತಿ, ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯಲ್ಲಿ ಇದುವರೆಗೆ ಸಾಧಿಸಲಾದ ಪ್ರಗತಿ, ಇನ್ನುಳಿದಿರುವ ಬಾಕಿ ಗುರಿ, ಅದನ್ನು ಸಾಧಿಸಲು ಯಾವ ರೀತಿಯ ಕಾರ್ಯತಂತ್ರಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸಬೇಕು, ಯಾವ ಕಾಲಮಿತಿಯೊಳಗೆ ಸಾಧಿಸಬೇಕು ಹಾಗೂ ಯಾರು ಯಾವ ಜವಾಬ್ದಾರಿಗಳನ್ನು ನಿರ್ವಹಿಸಬೇಕು, ಎಂಬುದರ ಕುರಿತು ಸವಿವರವಾಗಿ ಚಿಂತನ–ಮಂಥನ ನಡೆಸಲಾಯಿತು. ಈ ಕುರಿತು ನೈಜವಾದ, ನಿರ್ದಿಷ್ಟವಾದ ಹಾಗೂ ಕಾಲಮಿತಿಯ ಕ್ರಿಯಾ ಯೋಜನೆಯನ್ನು ತಯಾರಿಸಿ, ಅದರಂತೆ ಕಾರ್ಯನಿರ್ವಹಿಸುವ ಕುರಿತು ತೀರ್ಮಾನಿಸಲಾಯಿತು.

ಕಾರ್ಯಾಗಾರದ ಫಲಶೃತಿಯಂತೆ ಜುಲೈ–2011 ರಿಂದ ಸೆಪ್ಟೆಂಬರ್–2011 ರವರೆಗಿನ 3 ತಿಂಗಳ ಅವಧಿಗೆ ತಾಲ್ಲೂಕುವಾರು ಗುರಿ ನಿಗದಿಪಡಿಸಿಕೊಂಡು ನಿಗದಿತ ಗುರಿಯನ್ನು 3 ತಿಂಗಳ ಅವಧಿಯಲ್ಲಿ ಸಾಧಿಸುವ ಕುರಿತು ತಾಲ್ಲೂಕುವಾರು ತಂಡಗಳಿಂದ ಕ್ರಿಯಾಯೋಜನೆಯನ್ನು ತಯಾರಿಸಲಾಯಿತು. ಆಯಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಿಯಾಯೋಜನೆಯನ್ನು ಮಂಡಿಸಿ ಅದರಂತೆ ಕಾರ್ಯನಿರ್ವಹಿಸುತ್ತೇವೆಂದು ಘೋಷಿಸಿದರು. ಕಾಲಮಿತಿಯೊಳಗೆ ಕ್ರಿಯಾಯೋಜನೆಯ ಅನುಷ್ಠಾನದ ಕುರಿತು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಅಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಮಂಡಿಸಲಾದ ಕ್ರಿಯಾಯೋಜನೆಯಂತೆ ಕಾರ್ಯಾನುಷ್ಠಾನ ಮಾಡುವುದು ಅತ್ಯಂತ ಮುಖ್ಯವಾಗಿದ್ದು, ಈ ಕುರಿತು ಕ್ರಮವಹಿಸಿ ಗುರಿ ಸಾಧಿಸುವಂತೆ ತಿಳಿಸಲಾಯಿತು.



ದಿನಾಂಕ : 30–6–2011 ರಂದು ನಡೆದ ಯಾದಗಿರಿ ಜಿಲ್ಲಾ ಮಟ್ಟದ ಕಾರ್ಯಾಗಾರದ ನೇತೃತ್ವವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಗುರುಮಿತ್ ತೇಜ್ ಅವರು ವಹಿಸಿದ್ದರು. ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಅಪರ ನಿರ್ದೇಶಕರಾದ ಶ್ರೀ ಪಿ. ಕುಮಾರ್ ಹಾಗೂ ಜಿಲ್ಲಾ ಪಂಚಾಯತ್‌ನ ಸಹಭಾಗಿ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು. ದಿನಾಂಕ : 30–6–2011 ರಂದು ನಡೆದ ಬೀದರ್ ಜಿಲ್ಲಾ ಮಟ್ಟದ ಕಾರ್ಯಾಗಾರದ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು ವಹಿಸಿದ್ದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಜಿತೇಂದ್ರ ನಾಯಕ್ ಹಾಗೂ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಅಪರ ನಿರ್ದೇಶಕರಾದ ಶ್ರೀ ಎಂ. ಕೃಷ್ಣಪ್ಪ, ಹಾಗೂ ಜಿಲ್ಲಾ ಪಂಚಾಯತ್‌ನ ಸಹಭಾಗಿ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು. ದಿನಾಂಕ : 8–7–2011 ರಂದು ನಡೆದ ಬಿಜಾಪುರ ಜಿಲ್ಲಾ ಮಟ್ಟದ ಕಾರ್ಯಾಗಾರದ ನೇತೃತ್ವವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎ.ಎನ್. ಪಾಟೀಲ್ ಅವರು ವಹಿಸಿದ್ದರು. ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಉಪ ನಿರ್ದೇಶಕರಾದ ಶ್ರೀಮತಿ ಎಂ.ಎಸ್. ಅರ್ಚನ ಹಾಗೂ ಜಿಲ್ಲಾ ಪಂಚಾಯತ್‌ನ ಸಹಭಾಗಿ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

– **ಪ್ರವೀಣ್ ಹುಲಿಕುಂಟೆ,** ಐ.ಇ.ಸಿ. ಸಂಯೋಜಕರು

**ಸಂವಹನ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕ, ಕ. ಗ್ರಾ. ನೀ. ಸ. ನೈ. ಸಂಸ್ಥೆ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು - ೫೬೦ ೦೦೯.**

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/52/ಗ್ರಾಪಂನ್ಯಾ/2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 29–10–2011.

## ಸುತ್ತೋಲೆ

**ವಿಷಯ** : ಪಂಚಾಯತ್ ರಾಜ್ ಸಂಸ್ಥೆಗಳ ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಆಗುತ್ತಿರುವ ಕರ್ತವ್ಯಲೋಪದ ಬಗ್ಗೆ.

* * *

ರಾಜ್ಯದ ಹಲವಾರು ಪಂ.ರಾಜ್ ಸಂಸ್ಥೆಗಳ ವಿರುದ್ಧ ಹೂಡಲಾಗಿರುವ ನ್ಯಾಯಾಲಯ ಪ್ರಕರಣಗಳಲ್ಲಿ ನ್ಯಾಯಾಲಯಗಳ ತೀರ್ಮಾನದಂತೆ ಕಾಲಮಿತಿಯಲ್ಲಿ ಕ್ರಮ ಅನುಷ್ಠಾನಗೊಳಿಸದೇ ಇರುವುದರಿಂದ ಹಾಗು ಸಂಸ್ಥೆಯ ಮತ್ತು ಸರ್ಕಾರದ ಪರವಾಗಿ ಪೂರ್ಣ ಪ್ರಮಾಣದಲ್ಲಿ ದಾಖಲಾತಿ ಒದಗಿಸದೇ ಹಾಗು ವಕೀಲರ ಮುಖಾಂತರ ಯಶಸ್ವಿಯಾಗಿ ವಾದ ಮಂಡಿಸುವಲ್ಲಿ ಬಹುತೇಕ ಪ್ರಕರಣಗಳಲ್ಲಿ ಜಿ.ಪಂ. ಅಧಿಕಾರಿಗಳು/ ತಾ.ಪಂ. ಅಧಿಕಾರಿಗಳು ಹಾಗು ಗ್ರಾ.ಪಂ. ಅಧಿಕಾರಿಗಳು ವಿಫಲರಾಗಿರುತ್ತಾರೆ. ಇದರಿಂದ, ಸರ್ಕಾರಕ್ಕೆ ಮುಜುಗರ ಉಂಟಾಗಿರುವುದಲ್ಲದೆ ಹಾಗು ತುರ್ತು ನೋಟೀಸಿನೊಂದಿಗೆ ನ್ಯಾಯಾಂಗ ನಿಂದನಾ ಅರ್ಜಿಗಳು ಸರ್ಕಾರವನ್ನು ಪ್ರತಿವಾದಿಯನ್ನಾಗಿ ಮಾಡುತ್ತಿರುವುದನ್ನು ಗಮನಿಸಲಾಗಿದೆ.

ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 58, ಪ್ರಕರಣ 145 ಮತ್ತು ಪ್ರಕರಣ 184 ರಲ್ಲಿ ಪಂ.ರಾಜ್ ಸಂಸ್ಥೆಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ವಿವರಿಸಲಾಗಿದೆ. ಈ ಕರ್ತವ್ಯಗಳು ಶಾಸನಾತ್ಮಕ ಕರ್ತವ್ಯಗಳಾಗಿರುತ್ತವೆ. ಈ ಕರ್ತವ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಸಂಬಂಧಪಟ್ಟ ಚುನಾಯಿತ ಸಂಸ್ಥೆ ಹಾಗು ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳೆ ನೇರ ಹೊಣೆ ಹೊರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಇಂತಹ ಪ್ರಕರಣಗಳಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರುಗಳಿಗೆ ಸೂಚಿಸಿದೆ.

(1) ಜಿಲ್ಲಾ ಪಂಚಾಯತಿ. ತಾಲ್ಲೂಕು ಪಂಚಾಯತಿ ಹಾಗು ಗ್ರಾಮ ಪಂಚಾಯತಿಗಳ ವಿರುದ್ಧ ದಾವೆಗಳಿಗೆ ಸಂಬಂಧಿಸಿದಂತೆ ನುರಿತ ವಕೀಲರನ್ನು ನೇಮಿಸಿಕೊಳ್ಳುವುದು.

(2) ಜಿಲ್ಲಾ ಪಂಚಾಯತಿ ಹಂತದಲ್ಲಿ ನುರಿತ ವಕೀಲರ ತಂಡವನ್ನು ಪಾರದರ್ಶಕವಾಗಿ ರಚಿಸಬೇಕು.

(3) ವಕೀಲರಿಗೆ ಪ್ರತಿ ಪ್ರಕರಣಕ್ಕೆ ನೀಡಬೇಕಾದ ಗೌರವ ಧನದ ಬಗ್ಗೆ ಕಾಲಕಾಲಕ್ಕೆ ಕಾನೂನು ಇಲಾಖೆ ಹೊರಡಿಸುವ ದರದಂತೆ ಪಾವತಿಸುವುದು.

(4) ಕಾನೂನು ಹಾಗು ನ್ಯಾಯಾಲಯ ಪ್ರಕರಣಗಳ ಬಗ್ಗೆ ಅಧಿಕಾರಿಗಳಿಗೆ ಅರಿವು ಮೂಡಿಸಲು ಜಿಲ್ಲಾ ಹಾಗು ತಾಲ್ಲೂಕು ಮಟ್ಟದಲ್ಲಿ ಕಾನೂನು ತಜ್ಞರಿಂದ ಸಮಾವೇಶ/ಉಪನ್ಯಾಸ/ತರಬೇತಿ ಕಾರ್ಯಾಗಾರಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳುವುದು.

(5) ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿದಾಗ ಕೂಡಲೆ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಹಾಗು ಜಿಲ್ಲಾ ಪಂಚಾಯತಿ ಅಧಿಕಾರಿಗಳು (ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು) ಕಂಡಿಕೆವಾರು ಉತ್ತರಗಳನ್ನು ತಯಾರಿಸಿ ವಕೀಲರ ಮುಖಾಂತರ ಕಾಲಮಿತಿಯಲ್ಲಿ ಸಲ್ಲಿಸಬೇಕು.

(6) ಗ್ರಾಮ ಪಂಚಾಯತಿ ದಾವೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಹಾಗು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಕ್ರಮವಾಗಿ ಜವಾಬ್ದಾರರಾಗಿರುತ್ತಾರೆ.

(7) ಗ್ರಾಮ ಪಂಚಾಯತಿ ದಾವೆ ಪ್ರಕರಣಗಳಿಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ವಿವಿಧ ಇಲಾಖೆಗಳ ಜೊತೆಯಲ್ಲಿ ಸಮನ್ವಯ ಸಾಧಿಸಿ ನ್ಯಾಯಾಲಯದ ಆದೇಶವನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು.

(8) ತಾಲ್ಲೂಕು ಪಂಚಾಯತಿ ದಾವೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ. ಈ ಅಧಿಕಾರಿಗಳು ವಿವಿಧ ಇಲಾಖೆಗಳ ಜೊತೆಯಲ್ಲಿ ಸಮನ್ವಯ ಸಾಧಿಸಿ ನ್ಯಾಯಾಲಯದ ಆದೇಶವನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು.

(9) ಜಿಲ್ಲಾ ಪಂಚಾಯತಿ ದಾವೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗು ಸಂಬಂಧಪಟ್ಟ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ. ಈ ಅಧಿಕಾರಿಗಳು ವಿವಿಧ ಇಲಾಖೆಗಳ ಜೊತೆಯಲ್ಲಿ ಸಮನ್ವಯ ಸಾಧಿಸಿ ನ್ಯಾಯಾಲಯದ ಆದೇಶವನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು.

(10) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹಾಗು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪ್ರತಿ ನಿತ್ಯ ಮಾನ್ಯ ಸರ್ವೋಚ್ಚ ನ್ಯಾಯಾಲಯ, ಮಾನ್ಯ ಉಚ್ಚ ನ್ಯಾಯಾಲಯ ಹಾಗು ಕೆಳ ಹಂತದ ನ್ಯಾಯಾಲಯಗಳ ವೆಬ್‌ಸೈಟ್‌ಗಳನ್ನು ಪರಿಶೀಲಿಸಿ ಅದೇ ದಿನ ಉತ್ತರಗಳನ್ನು ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಒದಗಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

(11) ಈ ರೀತಿ ಕ್ರಮ ತೆಗೆದುಕೊಳ್ಳದೆ ಸರ್ಕಾರಕ್ಕೆ ಮಾರ್ಗದರ್ಶನಕ್ಕೆ, ಸ್ಪಷ್ಟೀಕರಣಕ್ಕೆ ಪತ್ರ ವ್ಯವಹಾರ ಮಾಡುವುದು ಹಾಗು ಅಂತಿಮ ಹಂತದಲ್ಲಿ ಸರ್ಕಾರಕ್ಕೆ ನ್ಯಾಯಾಂಗ ನಿಂದನೆಯಂತಹ ಮುಜುಗರಕ್ಕೆ ಸಿಲುಕಿಸದಂತೆ ಕಟ್ಟುನಿಟ್ಟಿನ ಎಲ್ಲಾ ಅಗತ್ಯ ಕ್ರಮಗಳನ್ನು ನ್ಯಾಯೋಚಿತವಾಗಿ, ನಿಯಮಾನುಸಾರ ಕೈಗೊಳ್ಳುವುದು.

(12) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನ್ಯಾಯಾಲಯದ ಆದೇಶವನ್ನು ಪಾಲಿಸಲು ವಿಫಲವಾದಲ್ಲಿ ಅಥವಾ ವಿಳಂಬ ಧೋರಣೆ ತಾಳಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲಾಗುವುದು.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ ತರಬೇತಿ ಕೇಂದ್ರವನ್ನು ಧಾರವಾಡದಲ್ಲಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ಬಗ್ಗೆ.

* * *

### ಪ್ರಸ್ತಾವನೆ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ, ಇಲಾಖೆಯ ಅನುಷ್ಠಾನಾಧಿಕಾರಿಗಳಿಗೆ, ನೌಕರರುಗಳಿಗೆ ಹಾಗೂ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳಿಗೆ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು, ಆಡಳಿತ ವಿಕೇಂದ್ರೀಕರಣ ಮತ್ತು ಇಲಾಖೆಗಳ ಯೋಜನೆಗಳ ಬಗ್ಗೆ ಸಮಕಾಲಿನ ತಾಂತ್ರಿಕ ವ್ಯವಸ್ಥೆಯ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ವಿವಿಧ ತರಬೇತಿ ಆಯಾಮಗಳು ಅಂದರೆ ವಿಷಯ ಮಂಡನೆ, ಪರಿಣಿತರ ಚರ್ಚೆ, ಪ್ರಾತ್ಯಕ್ಷತೆ ಮತ್ತು ಉಪನ್ಯಾಸ , ಪ್ರಕರಣಗಳ ಅಧ್ಯಯನ, ಅನುಭವಗಳ ಪರಿಚಯಾತ್ಮಕ ಚರ್ಚೆ, ಕ್ಷೇತ್ರ ಭೇಟಿ, ಯಶೋಗಾಥೆಗಳ ಬಗ್ಗೆ ಕಿರುಚಿತ್ರ ಪ್ರದರ್ಶನ ಮತ್ತು ಪುನರ್ ಮನನ ತರಬೇತಿ ಕಾರ್ಯಕ್ರಮಗಳ ಕುರಿತಾದ ತರಬೇತಿ, ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

ಈ ಸೌಲಭ್ಯವನ್ನು ಉತ್ತರ ಕರ್ನಾಟಕ ಭಾಗದ ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಕಾರ್ಯಕಾರಿ ಸಮೂಹಕ್ಕೆ ವಿಸ್ತರಿಸಿ, ಪರಿಣಾಮಕಾರಿಯಾಗಿ ತರಬೇತಿ ನೀಡಲು ಆ ಭಾಗದ ಪ್ರಮುಖ ಕೇಂದ್ರದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ತರಬೇತಿ ಕೇಂದ್ರದ ಒಂದು ವಿಭಾಗವನ್ನು ಸ್ಥಾಪಿಸುವುದು ಅತ್ಯಾವಶ್ಯಕವೆಂದು ಮನಗಂಡು ಆ ಕೇಂದ್ರವನ್ನು ಧಾರವಾಡದಲ್ಲಿ ಸೂಕ್ತ ಸಿಬ್ಬಂದಿಯೊಂದಿಗೆ ಸ್ಥಾಪಿಸಿ ಆ ಸಂಸ್ಥೆಯ ಮುಖಾಂತರ ಚುನಾಯಿತ ಪ್ರತಿನಿಧಿಗಳಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ತರಬೇತಿ ಚಟುವಟಿಕೆಗಳನ್ನು ಆಯೋಜಿಸಲು ಸರ್ಕಾರ ಉದ್ದೇಶಿಸಿದೆ.

ಇದಲ್ಲದೆ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸಂಶೋಧನೆ ಹಾಗೂ ವಿಶ್ಲೇಷಣೆ ಪಂಚಾಯುತ್ ರಾಜ್ ಸಂಸ್ಥೆಗಳ ಜವಾಬ್ದಾರಿ ನಿರ್ವಹಣೆ, ಪರಸ್ಪರ ಹೊಂದಾಣಿಕೆ ಹಾಗೂ ಕಾರ್ಯಚಟುವಟಿಕೆ ನಕ್ಷೆಗಳಲ್ಲಿನ ಜವಾಬ್ದಾರಿಗಳನ್ನು ನಿರ್ವಹಿಸಲು ಸೂಕ್ತ ಸಲಹೆಗಾರ ಹಾಗೂ ಪ್ರೇರಕ ಶಕ್ತಿಯಾಗಿ ಹಾಗೂ ಜಿಲ್ಲಾ /ತಾಲ್ಲೂಕು/ ಗ್ರಾಮ ಪಂಚಾಯತ್‌ಗಳು ಸ್ಥಳೀಯ ಅಭಿವೃದ್ಧಿಗಾಗಿ ರೂಪಿಸುವ ಯೋಜನೆಗಳನ್ನು ಗ್ರಾಮ ಪಂಚಾಯುತಿಗಳ ಮುಖಾಂತರ ಫಲಾನುಭವಿಗಳಿಗೆ ಸೂಕ್ತ ಮಾರ್ಗದರ್ಶನ ದೊರಕಿಸುವ ಉದ್ದೇಶದಿಂದ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲ ಕೇಂದ್ರವೊಂದನ್ನು ಸಹ ಬೆಂಗಳೂರಿನ ಮಹಾತ್ಮಾಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಸೂಕ್ತ ಸಿಬ್ಬಂದಿಯೊಂದಿಗೆ ಸ್ಥಾಪಿಸಲು ನಿರ್ಧರಿಸಿದೆ.

ಸರ್ಕಾರಿ ಆದೇಶ ಸಂಖ್ಯೆ.ಗ್ರಾಅಪ 111 ತಾಪಸ 2010, ಬೆಂಗಳೂರು ದಿನಾಂಕ 21-10-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಪ್ರಾದೇಶಿಕ ಕೇಂದ್ರವನ್ನು ಧಾರವಾಡದಲ್ಲಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲ ಕೇಂದ್ರವನ್ನು ಬೆಂಗಳೂರಿನ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಕೆಳಕಂಡ ಹುದ್ದೆಗಳ ಸೃಜನೆಯೊಂದಿಗೆ ಸ್ಥಾಪಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಪ್ರಾದೇಶಿಕ ಕೇಂದ್ರ ಧಾರವಾಡ

| ಕ್ರ. ಸಂ | ಹುದ್ದೆಯ ಹೆಸರು | ವೇತನ ಶ್ರೇಣಿ | ನೇಮಕಾತಿ ವಿಧಾನ | ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಉಪನಿರ್ದೇಶಕರು | ₹ 14050-25050 | ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆಯಿಂದ ನಿಯೋಜನೆ ಮೇರೆಗೆ | 1 |
| 2. | ಪರಿಣಿತ ಬೋಧಕರು (ಕೋರ್ ಫ್ಯಾಕಲ್ಟಿಸ್) | ₹ 11400-21600 ಅಥವಾ ₹ 25000 /- ಪ್ರತಿ ತಿಂಗಳಿಗೆ (ಕ್ರೋಢೀಕೃತ ವೇತನ) | ನಿಯೋಜನೆ/ ಹೊರಗುತ್ತಿಗೆ ಮೇರೆಗೆ | 2 |
| 3. | ಡಾಟಾ ಎಂಟ್ರಿ ಆಪರೇಟರ್/ ಟೈಪಿಸ್ಟ್/ ಸ್ಟೆನೋಗ್ರಾಫರ್ | ₹ 15000/- ಪ್ರತಿ ತಿಂಗಳಿಗೆ (ಕ್ರೋಢಿಕೃತ ವೇತನ) | ನಿಯೋಜನೆ/ ಹೊರಗುತ್ತಿಗೆ ಮೇರೆಗೆ | 1 |
| 4. | ಆಡಳಿತ ಹಾಗೂ ಲೆಕ್ಕಾಧಿಕಾರಿ | ₹ 10000 - 18150 | ನಿಯೋಜನೆ/ ಹೊರಗುತ್ತಿಗೆ ಮೇರೆಗೆ | 1 |
| 5. | ಕಚೇರಿ ಸಹಾಯಕರು/ ಕಂ-ಟೈಪಿಸ್ಟ್ | ₹ 7275 - 13350 | ನಿಯೋಜನೆ ಹೊರಗುತ್ತಿಗೆ ಮೇರೆಗೆ | 2 |
| 6. | ಗ್ರೂಪ್ ಡಿ | ₹ 7000/- ಪ್ರತಿ ತಿಂಗಳಿಗೆ (ಕ್ರೋಢಿಕೃತ ವೇತನ) | ಹೊರಗುತ್ತಿಗೆ ಮೇರೆಗೆ | 1 |

2. ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲ ಕೇಂದ್ರ ಬೆಂಗಳೂರು.

| ಕ್ರ. ಸಂ | ಹುದ್ದೆಯ ಹೆಸರು | ವೇತನ ಶ್ರೇಣಿ | ನೇಮಕಾತಿ ವಿಧಾನ | ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಹೆಚ್ಚುವರಿ ನಿರ್ದೇಶಕರು | ₹ 22125-30300 | ಗ್ರಾ.ಅ. & ಪಂ.ರಾಜ್ ಇಲಾಖೆಯಿಂದ ನಿಯೋಜನೆ ಮೇರೆಗೆ | 1 |
| 2. | ಸಂಶೋಧನಾ ಅಧಿಕಾರಿ | ₹ 15400 - 25650 ಅಥವಾ ₹ 30000/ ಪ್ರತಿ ತಿಂಗಳಿಗೆ (ಕ್ರೋಢೀಕೃತ ವೇತನ) | ನಿಯೋಜನೆ/ಹೊರಗುತ್ತಿಗೆ ಆಧಾರದ ಮೇರೆಗೆ | 3 |
| 3. | ಆಡಳಿತ ಹಾಗೂ ಲೆಕ್ಕಾಧಿಕಾರಿ | ₹ 10000-18150 | ನಿಯೋಜನೆ/ಹೊರಗುತ್ತಿಗೆ ಮೇರೆಗೆ | 1 |
| 4. | ಪೂರಕ ಸಿಬ್ಬಂದಿ/ ಆಡಳಿತ ಹಾಗೂ ಲೆಕ್ಕಪತ್ರ | ₹ 11400 -21600 | ನಿಯೋಜನೆ/ಹೊರಗುತ್ತಿಗೆ ಮೇರೆಗೆ | 2 |
| 5. | ಗ್ರೂಪ್ ಡಿ | ₹ 7000/- ಪ್ರತಿ ತಿಂಗಳಿಗೆ (ಕ್ರೋಡಿಕೃತ ವೇತನ) | ಹೊರಗುತ್ತಿಗೆ ಮೇರೆಗೆ | 1 |

ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಪ್ರಾದೇಶಿಕ ಕೇಂದ್ರ ಧಾರವಾಡ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲ ಕೇಂದ್ರ, ಬೆಂಗಳೂರು ಇವುಗಳಿಗೆ ತಗಲುವ ಆವರ್ತಕ ನಿಧಿಯನ್ನು 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2515-00-101-09-101 (ಯೋಜನೆ) ಅನುದಾನದಡಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು. ಮುಂದಿನ ಆರ್ಥಿಕ ವರ್ಷದ ಸಾಲಿನಿಂದ ಇದಕ್ಕೆ ತಗಲುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-102-0-08 (ಯೋಜನೆ) ಇದರಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಅನುಷ್ಠಾನಗೊಳಿಸುವ ಸಂಬಂಧ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಅಗತ್ಯ ಕ್ರಮ ವಹಿಸತಕ್ಕದ್ದು ಹಾಗು ಈ ಎರಡು ಸಂಸ್ಥೆಗಳು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಆಡಳಿತ ನಿಯಂತ್ರಣದಲ್ಲಿ ಕರ್ತವ್ಯ ನಿರ್ವಹಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಯೋಇ 54 ಜಿಯೋವಿ 2011 ದಿ:22–7–2011 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD:372:Exp6/2011, ದಿನಾಂಕ 29.09.2011ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ನಂ. ಗ್ರಾಅಪ/308/ಗ್ರಾಪಂಅ/2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 09–11–2011

## ಸುತ್ತೋಲೆ

**ವಿಷಯ** : ಹೊಸದಾಗಿ ಪಡಿತರ ಚೀಟಿ ನೀಡುವ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಗಳಿಗೆ ವಹಿಸುವ ಬಗ್ಗೆ.

**ಉಲ್ಲೇಖ** : ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕಡತ ಸಂಖ್ಯೆ : ಆನಾಸ 298 ಇಭತ 2011.

* * *

ಈ ಹಿಂದೆ ಪಡಿತರ ಚೀಟಿಗಳನ್ನು ನೀಡುವ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿತ್ತು. ಆದರೆ ಈ ವ್ಯವಸ್ಥೆಯು ಸಮರ್ಪಕವಾಗಿ ನಡೆಯದೆ, ಅಧಿಕ ಸಂಖ್ಯೆಯಲ್ಲಿ ಅನರ್ಹ ಪಡಿತರ ಚೀಟಿಗಳು ನೀಡಲ್ಪಟ್ಟು, ಬಹಳ ಸಂಖ್ಯೆಯಲ್ಲಿ ಅರ್ಹ ಕುಟುಂಬಗಳು ಪಡಿತರ ವ್ಯವಸ್ಥೆಯಿಂದ ವಂಚಿತರಾಗಿರುವುದನ್ನು ಗಮನಿಸಲಾಗಿದೆ. ಆದುದರಿಂದ ಇನ್ನು ಮುಂದೆ ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ಚೀಟಿ ಬಯಸುವ ಕುಟುಂಬಗಳ ಅಗತ್ಯ ಮಾಹಿತಿಯನ್ನು "ಪಂಚತಂತ್ರ" ಕಂಪ್ಯೂಟರ್ ವ್ಯವಸ್ಥೆ ಮೂಲಕ ಸಂಸ್ಕರಿಸುವ ಜವಾಬ್ದಾರಿಯನ್ನು ಸಂಬಂಧಿಸಿದ ಪಂಚಾಯಿತಿಗಳಿಗೆ ವಹಿಸಲು ನಿರ್ಧರಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಪಡಿತರ ಚೀಟಿ ಬಯಸುವವರ ಮಾಹಿತಿಯನ್ನು ಪಂಚಾಯಿತಿ ಕಛೇರಿಗಳಲ್ಲಿ ಇರುವ ಕಂಪ್ಯೂಟರ್ ವ್ಯವಸ್ಥೆ ಬಳಸಿ ಸಂಸ್ಕರಿಸುವ ಜವಾಬ್ದಾರಿಯನ್ನು ರಾಜ್ಯದ 5627 ಗ್ರಾಮ ಪಂಚಾಯಿತಿಗಳಿಗೆ ವಹಿಸಿದಲ್ಲಿ, ವ್ಯವಸ್ಥೆಯಲ್ಲಿ ಪಾರದರ್ಶಕತೆ, ನಿಖರತೆ, ಸಾಮಾಜಿಕ ನ್ಯಾಯಗಳು ಮತ್ತು ಮುಖ್ಯವಾಗಿ ಅರ್ಹ ಕುಟುಂಬಗಳು ಪಡಿತರ ಚೀಟಿ ಪಡೆಯುವಲ್ಲಿ ಇರುವ ತೊಂದರೆಗಳನ್ನು ನಿವಾರಿಸಬಹುದಾಗಿರುತ್ತದೆ ಎಂದು ಪರಿಗಣಿಸಲಾಗಿದೆ.

ಈ ಮೇಲಿನ ಕಾರಣಗಳಿಗಾಗಿ, ಗ್ರಾಮ ಪಂಚಾಯತಿಗಳಿಗೆ ಈ ಕೆಳಗಿನ ಜವಾಬ್ದಾರಿಗಳನ್ನು ವಹಿಸಲು ನಿರ್ಧರಿಸಲಾಗಿದೆ.

1. ಹೊಸದಾಗಿ ಪಡಿತರ ಚೀಟಿ ಬಯಸುವ ಕುಟುಂಬದ ಸದಸ್ಯರ ಮಾಹಿತಿಗಳನ್ನು "ಪಂಚ ತಂತ್ರ" ಕ್ಕೆ ದಾಖಲಿಸುವುದು;
2. ಗ್ರಾಮೀಣ ಪ್ರದೇಶಗಳ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ನಿರ್ಧರಿಸಿ ಅಂತ್ಯೋದಯ ಅನ್ನ ಯೋಜನೆ (ಎಎವೈ), ಬಿಪಿಎಲ್ ಮತ್ತು ಎಪಿಎಲ್ ವರ್ಗೀಕರಣವನ್ನು ಕಂಪ್ಯೂಟರ್‌ಗೆ ದಾಖಲಿಸುವುದು;
3. ಅನರ್ಹ ಪಡಿತರ ಚೀಟಿಗಳನ್ನು ಗುರುತಿಸುವುದು;
4. ಪಡಿತರ ಚೀಟಿ ಹೊಂದಿದವರ ಕೃಷಿ ಜಮೀನು ಹಿಡುವಳಿಯ ಮಾಹಿತಿ ದಾಖಲಿಸುವುದು; ಮತ್ತು
5. ಫಲಾನುಭವಿಗಳ ಕುಟುಂಬದ ಸದಸ್ಯರ ಹೆಸರು ಇತ್ಯಾದಿ ಮಾಹಿತಿ ಸೇರಿಸುವುದು/ಕಡಿಮೆ ಮಾಡುವುದು.

ಯಾವುದೇ ಒಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇರುವ ಒಂದು ಕುಟುಂಬವು ಪಡಿತರ ಚೀಟಿ ಹೊಂದದೆ ಇದ್ದು, ಅದನ್ನು ಪಡೆಯಬೇಕಾದಲ್ಲಿ ಈ ಮೇಲಿನ ವ್ಯವಸ್ಥೆಯನ್ನು ಜಾರಿಗೆ ತಂದ ನಂತರ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾಗಿರುವುದಿಲ್ಲ. ಸಂಬಂಧಿಸಿದ ಗ್ರಾಮ ಪಂಚಾಯತ್ ಕಛೇರಿಗೆ ಹೋಗಿ, ಅಲ್ಲಿ ಇರುವ ಕಂಪ್ಯೂಟರ್ ವ್ಯವಸ್ಥೆಗೆ ತಮ್ಮ ಕುಟುಂಬದ ಮಾಹಿತಿಯನ್ನು ದಾಖಲಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯನ್ನು ವಿನಂತಿಸಬೇಕು. ಈ ಬಗ್ಗೆ "ಪಂಚತಂತ್ರ" ದಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಈ ರೀತಿ ದಾಖಲು ಮಾಡಿದ ಕೂಡಲೇ ಆ ಬಗ್ಗೆ ತಾಲ್ಲೂಕು ಕಚೇರಿಗಳ ಕಂಪ್ಯೂಟರ್‌ನಲ್ಲಿ 'ಸೂಚನೆ' ಕಾಣಿಸಿಕೊಳ್ಳುತ್ತದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಈ ರೀತಿ ದಾಖಲಿಸಿದ ಬೇಡಿಕೆಗಳ ಬಗ್ಗೆ ಮಾಹಿತಿಯನ್ನು ಜಿಲ್ಲಾ ಮಟ್ಟದ ಕಛೇರಿಗಳಲ್ಲಿ, ಮತ್ತು ರಾಜ್ಯ ಮಟ್ಟದ ಕಛೇರಿಗಳಲ್ಲಿ ಗಮನಿಸಲು ಸಾಧ್ಯವಾಗುತ್ತದೆ. ಪಡಿತರ ಚೀಟಿಗಳಿಗಾಗಿ ಬೇಡಿಕೆಗಳ ಸಲ್ಲಿಕೆ ಬಗ್ಗೆ ತಾಲ್ಲೂಕು ಕಛೇರಿಯ ಕಂಪ್ಯೂಟರ್‌ನಲ್ಲಿ ಸೂಚನೆ ಕಂಡು ಬಂದ ಕೂಡಲೇ ನಿಗದಿತ ಸಮಯದೊಳಗೆ ಬೇಡಿಕೆ ಸಲ್ಲಿಸಿದ ಕುಟುಂಬದ ಮಾಹಿತಿಯನ್ನು ಸಂಬಂಧಿಸಿದ ಆಹಾರ ನಿರೀಕ್ಷಕರು ಕಂಪ್ಯೂಟರ್‌ನಿಂದ ಮುದ್ರಿಸಿಕೊಳ್ಳುತ್ತಾರೆ. ಅದನ್ನು ತೆಗೆದುಕೊಂಡು ಗ್ರಾಮಕ್ಕೆ ಹೋಗಿ ಬೇಡಿಕೆ ಸಲ್ಲಿಸಿದ ಕುಟುಂಬದ ಮುಖ್ಯಸ್ಥರ ಸಹಿಯನ್ನು ಅದರ ಮೇಲೆ ಪಡೆದು, ತನಿಖೆ ಮಾಡಿ, ತಮ್ಮ ವರದಿಯನ್ನು ಕಂಪ್ಯೂಟರ್‌ಗೆ ಆಹಾರ ನಿರೀಕ್ಷಕರು ದಾಖಲಿಸುತ್ತಾರೆ. ಪಡಿತರ ಚೀಟಿ ಬಯಸಿದ ಕುಟುಂಬದ ಮಾಹಿತಿಯನ್ನು ಕಂಪ್ಯೂಟರ್‌ಗೆ ದಾಖಲಿಸಿದ ಬಾಬ್ತು ₹. 10/– ಸಂಭಾವನೆಯನ್ನು ಪಡೆಯಲು ಪಂಚಾಯತ್ ತಾಂತ್ರಿಕ ಸೇವಾ ಸಿಬ್ಬಂದಿ (ಟಿಎಸ್‌ಪಿ) ಅರ್ಹರಿರುತ್ತಾರೆ. ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರು ₹. 10/– ಶುಲ್ಕವನ್ನು ಪಂಚಾಯತ್‌ಗೆ ಸಲ್ಲಿಸಿ, ಕಂಪ್ಯೂಟರ್ ಮುದ್ರಿತ ರಶೀದಿಯನ್ನು ಪಡೆಯುವುದು.

ಹೊಸದಾಗಿ ಪಡಿತರ ಚೀಟಿಗಳಿಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ಸದ್ಯದಲ್ಲಿಯೇ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಪ್ರಕಟಣೆ ಹೊರಡಿಸಲಿದೆ. ಈ ರೀತಿ ಪ್ರಕಟಣೆ ಹೊರಡಿಸಿದ ಕೂಡಲೆ, ಪಡಿತರ ಚೀಟಿ ಬಯಸಿದವರ ಮಾಹಿತಿಯನ್ನು "ಪಂಚತಂತ್ರ" ವ್ಯವಸ್ಥೆಗೆ ದಾಖಲಿಸಲು ಕ್ರಮಕೈಗೊಳ್ಳಬೇಕು.

(ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2011–12ನೇ ಸಾಲಿನ ಆಯವ್ಯಯದಲ್ಲಿ ಘೋಸಿರುವಂತೆ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ವಾರ್ಷಿಕವಾಗಿ ಒಂದು ಕೋಟಿ ರೂ.ಗಳ ಅಭಿವೃದ್ಧಿ ಅನುದಾನವನ್ನು ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ವಾರ್ಷಿಕವಾಗಿ ಒದಗಿಸಲಾಗಿರುವ ಒಂದು ಕೋಟಿ ರೂ. ಗಳ ಅನಿರ್ಬಂಧಿತ ಅನುದಾನವನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಬಗ್ಗೆ.

**ಓದಲಾಗಿದೆ** : 1) ಸರ್ಕಾರಿ ಆದೇಶ ಸಂ.ಗ್ರಾಅಪ:127:ಜಿಪಸ:2011, ದಿನಾಂಕ: 25–05–2011

2) ಸರ್ಕಾರಿ ಆದೇಶ ಸಂ.ಗ್ರಾಅಪ:127:ಜಿಪಸ:2011, ದಿನಾಂಕ: 23–09–2011

* * *

**ಪ್ರಸ್ತಾವನೆ :**

ಮೇಲೆ ಓದಲಾದ (1) ರ ಆದೇಶದಲ್ಲಿ 2011–12ನೇ ಸಾಲಿನಲ್ಲಿ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಉದ್ದೇಶದಿಂದ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ₹ 1.00 ಕೋಟಿ ಅನಿರ್ಭಂದಿತ ಅನುದಾನ ಬಿಡುಗಡೆ ಮಾಡಲಾಗಿತ್ತು.

ಮೇಲೆ ಓದಲಾದ (2) ರಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಬಳಸಬೇಕು ಹಾಗೂ ಯಾವ ಕಾಮಗಾರಿಗಳಿಗೆ ಬಳಸಬಾರದೆಂಬ ಬಗ್ಗೆ ಮಾರ್ಗಸೂಚನೆಗಳನ್ನು ಹೊರಡಿಸಲಾಗಿತ್ತು. ದಿನಾಂಕ : 18–10–2011 ರಂದು ನಡೆದ ರಾಜ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳ ಒಕ್ಕೂಟದ ಸಭೆಯಲ್ಲಿ ಅಧ್ಯಕ್ಷರುಗಳು ಈ ಅನುದಾನ ಅನುಮೋದನೆ ಹಾಗೂ ಅನುಷ್ಠಾನ ಜಿಲ್ಲಾ ಪಂಚಾಯತ್ ಹಂತದಲ್ಲಿಯೇ ತೆಗೆದುಕೊಳ್ಳಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಮನವಿ ಪರಿಶೀಲಿಸಿದ ಸರ್ಕಾರ, ಆಡಳಿತ ವಿಕೇಂದ್ರೀಕರಣ ಹಾಗೂ ಕಾರ್ಯಕ್ರಮ ಅನುಷ್ಠಾನವನ್ನು ತ್ವರಿತಗೊಳಿಸುವ ಉದ್ದೇಶದಿಂದ ದಿನಾಂಕ: 15–07–2011 ರ ಆದೇಶದಲ್ಲಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆಗೆ ಬದಲಾಗಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮಾರ್ಗಸೂಚಿ ಅನ್ವಯ ಕ್ರಿಯಾ ಯೋಜನೆ ತಯಾರಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸಿ, ಸದರಿ ಕ್ರಿಯಾ ಯೋಜನೆ ಮಾರ್ಗಸೂಚಿಗಳನ್ವಯ ಇರುವುದನ್ನು ಖಚಿತಪಡಿಸಿಕೊಂಡು ಚಾಲ್ತಿಯಲ್ಲಿರುವ ನಿಯಮಗಳನ್ವಯ ಕಾರ್ಯಕ್ರಮ ಅನುಷ್ಠಾನಗೊಳಿಸಲು ನಿರ್ದೇಶಿಸುವುದು ಸೂಕ್ತವೆಂದು ಭಾವಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ : 123 : ಜಿಪಸ : 2011 ಬೆಂಗಳೂರು ದಿನಾಂಕ : 29–10–2011**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಆಡಳಿತ ವಿಕೇಂದ್ರೀಕರಣ ಹಾಗೂ ಕಾರ್ಯಕ್ರಮ ಅನುಷ್ಠಾನ ತ್ವರಿತವಾಗಿ ಜಾರಿಗೆ ತರಲು ಅನುವಾಗುವಂತೆ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಬಿಡುಗಡೆಗೊಳಿಸಲಾಗಿದ್ದ ₹ 1.00 ಕೋಟಿ ಅನಿರ್ಭಂದಿತ ಅನುದಾನ ಬಳಕೆಗೆ ಸಂಬಂಧಿಸಿದಂತೆ ದಿನಾಂಕ : 15–7–2011 ರ ಸರ್ಕಾರಿ ಆದೇಶದಲ್ಲಿ ಸೂಚಿಸಲಾಗಿದ್ದ, ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ಬದಲಾಗಿ ಆಯಾ ಜಿಲ್ಲಾ ಪಂಚಾಯತ್ ಆದ್ಯಕ್ಷರು ಮಾರ್ಗಸೂಚಿಗಳನ್ವಯ ಕ್ರಿಯಾ ಯೋಜನೆ ತಯಾರಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಹೀಗೆ ಸಲ್ಲಿಸಲಾದ ಕ್ರಿಯಾ ಯೋಜನೆಯು ಮಾರ್ಗಸೂಚಿಗಳನ್ವಯ ಇದೆಯೇ ಎಂಬುದನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಖಚಿತಪಡಿಸಿಕೊಂಡು ಚಾಲ್ತಿಯಲ್ಲಿರುವ ನಿಯಮಗಳನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ.

ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ನೀಡಿರುವ ₹ 1.00 ಕೋಟಿ ಅನಿರ್ಭಂದಿತ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಕನಿಷ್ಠ 25% ರಷ್ಟು ವೆಚ್ಚ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಕ್ರಿಯಾ ಯೋಜನೆಗಳನ್ನು ಮಾಹಿತಿಗಾಗಿ ಸರ್ಕಾರಕ್ಕೆ ಈ–ಮೇಲ್ ಮುಖಾಂತರ ಸಲ್ಲಿಸತಕ್ಕದ್ದು ಹಾಗೂ ಯೋಜನೆ ಅನುಷ್ಠಾನಗೊಳಿಸುವ ಪೂರ್ವದಲ್ಲಿ ವರ್ಕ್ ಸಾಫ್ಟ್ ಸಾಫ್ಟ್‌ವೇರ್ ನಲ್ಲಿ ಅಳವಡಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸ್ವರ್ಣಲತ ಎಂ. ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ : 292 : ಜಿಪಂಸ : 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 28-10-2011

## ಸುತ್ತೋಲೆ

**ವಿಷಯ** : ರಾಜ್ಯ ಚುನಾವಣಾ ಆಯೋಗ ನಡೆಸುವ ಚುನಾವಣೆಗಳಲ್ಲಿ ಜಿಲ್ಲಾಧಿಕಾರಿ/ಉಪ ವಿಭಾಗಾಧಿಕಾರಿ/ತಹಶೀಲ್ದಾರ್‌ಗಳ ಉಸ್ತುವಾರಿ ಕುರಿತು.

* * *

ಗ್ರಾಮ ಪಂಚಾಯತ್ ಚುನಾವಣೆ, ತಾಲ್ಲೂಕು/ಜಿಲ್ಲಾ ಪಂಚಾಯತ್, ಸಾರ್ವತ್ರಿಕ ಚುನಾವಣೆ, ನಗರ ಸ್ಥಳೀಯ ಸಂಸ್ಥೆ ಚುನಾವಣೆ ಅಥವಾ ತೆರವಾದ ಸ್ಥಾನಗಳಿಗೆ ನಡೆಯುವ ಉಪ ಚುನಾವಣೆ ಸಂದರ್ಭಗಳಲ್ಲಿ ರಾಜ್ಯ ಚುನಾವಣೆ ಆಯೋಗದ ಅನುಮತಿ ಪಡೆಯದೆ ಜಿಲ್ಲಾಧಿಕಾರಿಗಳು ರಜೆಯ ಮೇಲೆ ತೆರಳುತ್ತಿರುವುದು ಮತ್ತು ಚುನಾವಣಾ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳು ಸಾಕಷ್ಟು ಮುಂಜಾಗ್ರತೆ ವಹಿಸದಿರುವ ಅಂಶಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ರಾಜ್ಯ ಚುನಾವಣಾ ಆಯೋಗ ನಡೆಸುವ ಯಾವುದೇ ಚುನಾವಣೆಗಳು ಜಿಲ್ಲಾಧಿಕಾರಿ/ಉಪ ವಿಭಾಗಾಧಿಕಾರಿ/ತಹಶೀಲ್ದಾರ್‌ಗಳು ಖುದ್ದು ತೊಡಗಿಸಿಕೊಂಡು, ಬಹಳ ಮುತುವರ್ಜಿಯಿಂದ ನಡೆಸಬೇಕಾದ ಗುರುತರ ಜವಾಬ್ದಾರಿ ಹೊಂದಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಅನುಮತಿ ಇಲ್ಲದೆ, ರಜೆ ಮೇಲೆ ತೆರಳುವುದು, ಸಕ್ರಿಯವಾಗಿ ತೊಡಗಿಸಿಕೊಳ್ಳದಿರುವುದು ಅನುಚಿತ ವರ್ತನೆ ಆಗುವುದಲ್ಲದೆ, ಇಂತಹ ಕಾರಣಗಳಿಗಾಗಿ ಚುನಾವಣೆ ಮುಂದೂಡಲ್ಪಟ್ಟಲ್ಲಿ, ಸರ್ಕಾರಕ್ಕೆ ಅನಾವಶ್ಯಕ ಖರ್ಚು ವೆಚ್ಚ ಹಾಗೂ ಕಾನೂನು ತೊಡಕುಗಳು ಉಂಟಾಗುವ ಸಂದರ್ಭವಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ನಡೆಸುವ ಯಾವುದೇ ಚುನಾವಣೆ ಸಂದರ್ಭದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿ/ಉಪ ವಿಭಾಗಾಧಿಕಾರಿ/ತಹಶೀಲ್ದಾರ್‌ಗಳು ಈ ಕೆಳಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ.

1) ನಗರ ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮ ಪಂಚಾಯತಿ, ತಾಲ್ಲೂಕು/ಜಿಲ್ಲಾ ಪಂಚಾಯತಿ ಸಾರ್ವತ್ರಿಕ ಚುನಾವಣೆಗಳಾಗಲೀ ಅಥವಾ ಉಪ ಚುನಾವಣೆಗಳಾಗಲೀ, ನಡೆಯುವಾಗ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರವರುಗಳು ಆಯೋಗದ ಅನುಮತಿಯಿಲ್ಲದೇ ರಜೆ ಪಡೆಯುವಂತಿಲ್ಲ.

2) ಯಾವುದೇ ಕಾರಣಕ್ಕೆ ರಜೆ ಪಡೆದು ಮಸ್ಟರಿಂಗ್ ದಿನ ಮತ್ತು ಚುನಾವಣೆ ದಿನದಂದು ಕೇಂದ್ರಸ್ಥಾನ ಬಿಡತಕ್ಕದ್ದಲ್ಲ.

3) ಚುನಾವಣೆಯ ಪ್ರತಿ ಹಂತದಲ್ಲೂ ಜಿಲ್ಲಾಧಿಕಾರಿಗಳು ಸ್ವತಃ ಪರಿಶೀಲಿಸಿ ಆಯೋಗದ ನಿರ್ದೇಶನಗಳನ್ನು, ಕಾಯ್ದೆ ಕಾನೂನುಗಳ ವಿಧಿ ವಿಧಾನಗಳನ್ನು ಪಾಲಿಸಿ ಚುನಾವಣೆಗಳನ್ನು ಮುಕ್ತ ನ್ಯಾಯಸಮ್ಮತ ಶಾಂತಿಯುತ ಮತ್ತು ನಿಷ್ಪಕ್ಷಪಾತವಾಗಿ ನಡೆಸಲು ಕ್ರಮವಹಿಸುವುದು.

4) ಚುನಾವಣೆಯ ಪ್ರತಿ ಹಂತದಲ್ಲೂ ಜಿಲ್ಲಾಡಳಿತವು ಪರಿಶೀಲಿಸಿ ಕೈಗೊಂಡ ಕ್ರಮದ ಬಗ್ಗೆ ಆಯೋಗಕ್ಕೆ ವರದಿ ಸಲ್ಲಿಸುವುದು.

(ಸ್ವರ್ಣಲತ ಎಂ. ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ:143:ಇತರೆ:2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 12.10.2011

## ಅಧಿಸೂಚನೆ

2005ರ ಮಾಹಿತಿ ಹಕ್ಕು ಅಧಿನಿಯಮ (ಕೇಂದ್ರ ಕಾಯ್ದೆ ಸಂಖ್ಯೆ 22)ದ ಸೆಕ್ಷನ್ 5(1) ಸಹವಾಚನ ಕಲಂ 19(1)ರಡಿಯಲ್ಲಿ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಾಲೋಚಿತಗೊಂಡ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹಾಗೂ ಮೇಲ್ಮನವಿ ಪ್ರಾಧಿಕಾರಗಳ ವಿವರಗಳನ್ನು ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ನೇಮಕ ಮಾಡಲಾಗಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಅವರಿಂದ ಪಡೆಯಬಹುದಾದ ಮಾಹಿತಿ ಹಾಗು ಮೇಲ್ಮನವಿ ಪ್ರಾಧಿಕಾರಗಳ ವಿವರಗಳು;-

| ಕ್ರ. ಸಂ. | ವಿಭಾಗದ ಹೆಸರು | ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ | ಪಡೆಯಬಹುದಾದ ಮಾಹಿತಿಯ ವಿವರಗಳು | ಮೇಲ್ಮನವಿ ಪ್ರಾಧಿಕಾರದ ವಿವರ |
|---|---|---|---|---|
| 1. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಚೇರಿ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಸಹಾಯಕ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಚೇರಿಗೆ ಸಂಬಂಧಿಸಿದ ವಿವರಗಳು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ |
| 2. | ಆಡಳಿತ ವಿಭಾಗ | i) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ ಮತ್ತು ಸಿ) | ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗು ಸ್ಥಳೀಯ ಆಡಳಿತ ಶಾಖೆ)ಗೆ ಸೇರಿದ ಅಧಿಕಾರಿಗಳ ಹಾಗು ಜಿಲ್ಲಾ ಪಂಚಾಯತ್ ಸೇವೆಗೆ ಸೇರಿದ ನೌಕರರ ಸೇವಾ ಹಾಗು ಇತರ ಸಂಬಂಧಪಟ್ಟ ವಿಷಯಗಳು. | ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ-1)<br>ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ-2) |
| | | ii) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ) | ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ತಾಂತ್ರಿಕ ಹಾಗು ತಾಂತ್ರಿಕೇತರ ಅಧಿಕಾರಿ/ನೌಕರರ ಸೇವಾ ವಿಷಯಗಳು ಮತ್ತು ಇತರ ಸಾಮಾನ್ಯ ಹಾಗು ಸಂಬಂಧಪಟ್ಟ ವಿಷಯಗಳು | |
| 3. | ಆಂತರಿಕ ಆರ್ಥಿಕ ಸಲಹೆಗಾರರ ವಿಭಾಗ | i) ಲೆಕ್ಕಾಧಿಕಾರಿ<br>ii) ಶಾಖಾಧಿಕಾರಿ | ಆಯವ್ಯಯ ತಯಾರಿಕೆ, ಹಣಕಾಸು ಬಿಡುಗಡೆ ಹಾಗು ಲೆಕ್ಕಪರಿಶೋಧನಾ, ಆಂತರಿಕ ಲೆಕ್ಕಪರಿಶೋಧನಾ | ಆಂತರಿಕ ಆರ್ಥಿಕ ಸಲಹೆಗಾರರು. |

| | | | | |
|---|---|---|---|---|
| 4. | ಗ್ರಾಮೀಣ ಮೂಲಭೂತ ಸೌಲಭ್ಯ ವಿಭಾಗ | i. ಉಪ ನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಲಭ್ಯ) | ರಸ್ತೆ, ಸೇತುವೆ, ಸಣ್ಣ ನೀರಾವರಿ, ಕಟ್ಟಡಗಳ ನಿರ್ಮಾಣಗಳ ಉಸ್ತುವಾರಿ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ ಯೋಜನೆಗಳು, | ನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಲಭ್ಯ–1) |
| | | ii. ಯೋಜನಾ ನಿರ್ದೇಶಕರು (ಸುವರ್ಣ ಗ್ರಾಮೋದಯ) | ಸುವರ್ಣ ಗ್ರಾಮೋದಯ ಯೋಜನೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ | ನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಲಭ್ಯ–2) |
| 5. | ರಾಷ್ಟ್ರೀಯ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಮಿಷನ್ | ಉಪ ನಿರ್ದೇಶಕರು ಹಾಗು ಸರ್ಕಾರದ ಪದನಿಮಿತ್ತ ಅಧೀನ ಕಾರ್ಯದರ್ಶಿ | ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳು | ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಮಿಷನ್ |
| 6 | ಪಂಚಾಯತ್ ರಾಜ್ ವಿಭಾಗ | i) ಸರ್ಕಾರದ ಅಧೀನ ಕಾರ್ಯದರ್ಶಿ (ಜಿಲ್ಲಾ ಪಂಚಾಯತ್)<br>ii) ಪೀಠಾಧಿಕಾರಿ (ಗ್ರಾಮ ಪಂಚಾಯತ್)<br>iii) ಮುಖ್ಯ ಸಂಪಾದಕರು 'ಕರ್ನಾಟಕ ವಿಕಾಸ' | ಶಾಸನಬದ್ಧ ಅನುದಾನ ಬಿಡುಗಡೆ, ಪಂ.ರಾಜ್ ಸಂಸ್ಥೆಗಳ ಸುಧಾರಣೆಗೆ ಸಂಬಂಧಿಸಿದಂತೆ ಹಾಗು ಕರ್ನಾಟಕ ವಿಕಾಸಕ್ಕೆ ಸಂಬಂಧಿಸಿದ ವಿಷಯಗಳು | ನಿರ್ದೇಶಕರು (ಪಂಚಾಯತ್ ರಾಜ್) |
| 7. | ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ | ಉಪನಿರ್ದೇಶಕರು ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ. | ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವರದಿ ಹಾಗು ಅಂಕಿ ಅಂಶಗಳು | ನಿರ್ದೇಶಕರು (ಯೋಜನಾ ಉಸ್ತುವಾರಿ ಮತ್ತು ಮಾಹಿತಿ) |
| 8. | ಸ್ವ ಉದ್ಯೋಗ ಕಾರ್ಯಕ್ರಮ ವಿಭಾಗ | ಜಂಟಿ ನಿರ್ದೇಶಕರು ಅಪರ ಮುಖ್ಯಸ್ಥರು (ಕಾರ್ಯಾಚರಣೆ) ಜಂಟಿ ನಿರ್ದೇಶಕರು 1, 2 ಹಾಗು ಮುಖ್ಯ ಹಣಕಾಸು ಅಧಿಕಾರಿ | ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಜೀತ ಕಾರ್ಮಿಕರ ವಿಮುಕ್ತಿ, ಮಹಿಳಾ ಸಬಲೀಕರಣ, ರ‍್ಟ್ರೀಯ ಗ್ರಾಮೀಣ ಜೀವನ ನಿರ್ವಹಣ ಮಿಷನ್. | ನಿರ್ದೇಶಕರು (ಸ್ವ ಉದ್ಯೋಗ ಕಾರ್ಯಕ್ರಮ) |
| 9. | ಗ್ರಾಮ ಸ್ವರಾಜ್ ಯೋಜನಾ ವಿಭಾಗ | ಉಪ ಕಾರ್ಯದರ್ಶಿ (ಆಡಳಿತ) ಕಚೇರಿ ವ್ಯವಸ್ಥಾಪಕರು, ತಾಲ್ಲೂಕು ಪಂಚಾಯತಿ ಗ್ರಾಮ ಪಂಚಾಯತಿ ಕಾರ್ಯದರ್ಶಿ | ನಂಜುಂಡಪ್ಪ ವರದಿ ಅನುಸಾರ 39 ತಾಲ್ಲೂಕುಗಳ 1343 ಗ್ರಾಮ ಪಂಚಾಯತಿಗಳ ಸಬಲೀಕರಣ, ಸಾಮರ್ಥ್ಯ ಸೌಧ, ಸಂಬಂಧಿಸಿದ ವಿಷಯ. | ಮುಖ್ಯಸ್ಥರು (ಗ್ರಾಮ ಸ್ವರಾಜ್ ಯೋಜನೆ) |
| 10. | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನಾ ವಿಭಾಗ | ಜಂಟಿ ನಿರ್ದೇಶಕರು 1, 2 ಹಾಗು ಮುಖ್ಯ ಹಣಕಾಸು ಅಧಿಕಾರಿ | ಗ್ರಾಮೀಣ ಪ್ರದೇಶದ ಅಕುಶಲ ಕಾರ್ಮಿಕರಿಗೆ ವರ್ಷದಲ್ಲಿ 100 ದಿನಗಳ ಉದ್ಯೋಗ ಒದಗಿಸುವ ಕಾರ್ಯಕ್ರಮದ ವಿಷಯ. | ನಿರ್ದೇಶಕರು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ) |
| 11. | ಜಿಲ್ಲಾ ಪಂಚಾಯತಿಗಳು | ಉಪ ಕಾರ್ಯದರ್ಶಿ (ಆಡಳಿತ) | ಜಿಲ್ಲಾ ಪಂಚಾಯತಿ ಪ್ರಕಾರ್ಯಗಳು ಹಾಗು ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ |
| 12. | ತಾಲ್ಲೂಕು ಪಂಚಾಯತಿಗಳು | ಕಚೇರಿ ವ್ಯವಸ್ಥಾಪಕರು, ತಾಲ್ಲೂಕು ಪಂಚಾಯತಿ | ತಾಲ್ಲೂಕು ಪಂಚಾಯತಿ ಪ್ರಕಾರ್ಯಗಳು ಹಾಗು ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯ | ಕಾರ್ಯನಿರ್ವಾಹಕ ಅಧಿಕಾರಿ |
| 13. | ಗ್ರಾಮ ಪಂಚಾಯತಿಗಳು | ಗ್ರಾಮ ಪಂಚಾಯತಿ ಕಾರ್ಯದರ್ಶಿ | ಗ್ರಾಮ ಪಂಚಾಯತಿ ಪ್ರಕಾರ್ಯಗಳು ಹಾಗು ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯ | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು |

**ತಿದ್ದುಪಡಿ**

'ಕರ್ನಾಟಕ ವಿಕಾಸ' ನವೆಂಬರ್ – 2011ರ ಮಾಹೆಯ ಸಂಚಿಕೆಯ ಪುಟ ಸಂಖ್ಯೆ 74ರಲ್ಲಿ ಕ್ರಮ ಸಂಖ್ಯೆ 10, 11, 12, 13ರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರಗಳು ಕಣ್ತಪ್ಪಿನಿಂದ ಬಿಟ್ಟುಹೋಗಿದೆ. ಅವುಗಳನ್ನು ಕ್ರಮವಾಗಿ ಜಂಟಿ ನಿರ್ದೇಶಕರು – 1, 2 ಹಾಗೂ ಮುಖ್ಯ ಹಣಕಾಸು ಅಧಿಕಾರಿ; ಉಪ ಕಾರ್ಯದರ್ಶಿ (ಆಡಳಿತ), ಕಛೇರಿ ವ್ಯವಸ್ಥಾಪಕರು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿ ಎಂದು ಓದಿಕೊಳ್ಳಲು ಕೋರಿದೆ.

– ಮುಖ್ಯ ಸಂಪಾದಕರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ನವೀಕರಿಸಬಹುದಾದ ಇಂಧನದ ಕಿರು ಯೋಜನೆಯ ಕುರಿತು
# ಐಆರ್‌ಇಪಿ ಯೋಜನಾ ಅಭಿಯಂತರರುಗಳಿಗೆ ತರಬೇತಿ ಕಾರ್ಯಕ್ರಮ

**ದಿನಾಂಕ: 16.11.2011 ಮತ್ತು 17.11.2011**



ಸನ್ಮಾನ್ಯ ಗ್ರಾ. ಮತ್ತು ಪಂ.ರಾಜ್ ಸಚಿವರಾದ ಶ್ರೀ ಜಗದೀಶ ಶೆಟ್ಟರ್ ಅವರೊಂದಿಗೆ ಸಂವಾದದಲ್ಲಿ
ಸರ್ಕಾರದ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಹಾಗೂ ಸಂಸ್ಥೆಯ ನಿರ್ದೇಶಕರಾದ ಎಂ.ಆರ್. ಕರ್ಕಿ



# KARNATAKA VIKASA : DECEMBER, 2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52, Despatch Date : 1st week of every month






ಬೆಲೆ : 5 ರೂಪಾಯಿಗಳು

**Despatcher**

**OFFICE OF THE CHIEF EDITOR, KARNATAKA VIKASA**

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

**Printed at : GEETANJALI GRAPHICS**

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346